ಸಂಪುಟ: 14 Volume | ಸಂಚಿಕೆ: 50 Issue | ಪುಟಗಳು 08 Pages | ಬುಧವಾರ 27 ಮೇ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಗುಣಾತ್ಮಕವಾಗಿ ಯೋಚಿಸುವುದಿಲ್ಲ ಎಂದಾದಲ್ಲಿ ನೀವು ಕನಿಷ್ಠ ಪಕ್ಷ ಸುಮ್ಮನಾದರೂ ಇರಿ.

–ಜೋಯೆಲ್ ಆಸ್ಟಿನ್



ಬಸವಕಲ್ಯಾಣ: ಹುಲಸೂರು ತಾಲೂಕಿನ ಮುಚಳಂಬ ಗ್ರಾಮದಲ್ಲಿ ಹಿರಿಯ ಕಲಾವಿದ ಹಾಗೂ ಖ್ಯಾತ ನಾಟಕದ ಹಾರ್ಮೋನಿಯಂ ವಾದಕರಾಗಿ ಜಿಲ್ಲೆಯ ಹಳ್ಳಿ ಹಳ್ಳಿಗಳಲ್ಲಿ ಹೆಸರುವಾಸಿಯಾದ ಖ್ಯಾತ ಕಲಾವಿದ ರೇವಪ್ಪ ಮಾಸ್ತರ ಮುಚಳಂಬ ಇವರಿಗೆ ಗೊರಟಾದ ವಿರುಪಾಕ್ಷ ಸಮ್ಮಾನ್ ರಾಜ್ಯ ಪ್ರಶಸ್ತಿ ದೊರೆತ ಪ್ರಯುಕ್ತ ಅವರನ್ನು ಖ್ಯಾತ ಸಂಗೀತ ಕಲಾವಿದರಾದ ರಾಜಕುಮಾರ್ ಹೂಗಾರ್ ಮದಕಟ್ಟಿ. ಹಿರಿಯರಾದ ಕಾಶಪ್ಪಾ ಹೊಳ ಕಡೆ. ರಾಜಶೇಖರ ಬಿರಾದಾರ. ಪತ್ರಕರ್ತರಾದ ನಾಗಪ್ಪ ನಿಣ್ಣೆ ಸನ್ಮಾನಿಸಿ ಗೌರವಿಸಿದರು.

## ಬಕ್ರೀದ್ ಹಬ್ಬ ಶಾಂತಿಯುತವಾಗಿ ಆಚರಿಸಿ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ತ್ಯಾಗ ಮತ್ತು ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡದೆ, ಹಿಂದೂ–ಮುಸ್ಲಿಂ ಬಾಂಧವರು ಪರಸ್ಪರ ಶಾಂತಿ, ಸೌಹಾರ್ದತೆ ಹಾಗೂ ಸಹೋದರತ್ವದ ಭಾವನೆಯೊಂದಿಗೆ ಬಕ್ರೀದ್ ಹಬ್ಬವನ್ನು ಆಚರಿಸಬೇಕೆಂದು ಜಿಲಾಧಿಕಾರಿ ಶಿಲ್ಪಾ ಶರ್ಮಾ ತಿಳಿಸಿದರು.

ಅವರು ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬಕ್ರೀದ ಹಬ್ಬದ ಆಚರಣೆ ನಿಮಿತ್ಯ ಅನಧಿಕೃತ ಜಾನುವಾರುಗಳ ವಧೆ ಹಾಗೂ ಜಾನುವಾರುಗಳ ಸಾಗಾಣಿಕೆಯನ್ನು ತಡೆಗಟ್ಟಲು ಕುರಿತು ಮುಂಜಾಗ್ರತೆ ಜಿಲ್ಲಾ ಮಟ್ಟದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮೇ.28 ರಂದು ಆಚರಿಸಲ್ಪಡುವ ಬಕ್ರೀದ ಹಬ್ಬದ ಸಂದರ್ಭದಲ್ಲಿ ಅನಧಿಕೃತವಾಗಿ ಜಾನುವಾರುಗಳ ವಧೆ



ಹಾಗೂ ಜಾನುವಾರುಗಳ ಸಾಗಾಣಿಕೆಯನ್ನು ಅಲ್ಲದೇ ಒಂಟೆಗಳ ವಧೆ ಮತ್ತು ಸಾಗಾಣಿಕೆಯನ್ನು ಸಹ ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಜಿಲ್ಲೆಯಾದ್ಯಂತ ಆರು ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಲಾಗಿದೆ. ಸರ್ಕಾರದ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದರು.

ಬಕ್ರೀದ್ ಹಬ್ಬದ ದಿನದಂದು ಉಂಟಾಗುವ ತ್ಯಾಜ್ಯಗಳನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಲು ನಗರದ ಸ್ವಚ್ಛತೆಯನ್ನು ಕಾಪಾಡಲು ಕ್ರಮ ಕೈಗೊಳ್ಳಲು ಬೀದರ ಮಹಾನಗರ ಪಾಲಿಕೆಯ ಆಯುಕ್ತರಿಗೆ ಸೂಚಿಸಿದರು.

## ದತ್ತಿನಿಧಿಗೆ 1.10ಲಕ್ಷ ನೀಡಿದ ಶಾಸಕ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಚಾಮರಾಜನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಬಿ.ರಾಚಯ್ಯ ಹೆಸರಿನಲ್ಲಿ ದತ್ತಿ ನಿಧಿ ಸ್ಥಾಪಿಸಿದ ಶಾಸಕರಾದ ಎ.ಆರ್.ಕೃಷ್ಣಮೂರ್ತಿ ಅವರನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಅಭಿನಂದಿಸಿದೆ.

ಚಾಮರಾಜನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘವು ಏರ್ಪಡಿಸಿದ್ದ ಮಾಧ್ಯಮ ಸಂವಾದದಲ್ಲಿ ಪಾಲ್ಗೊಂಡಿದ್ದ ಕೊಳ್ಳೇಗಾಲ ಕ್ಷೇತ್ರದ ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರು, ಸಂಘವು ಸ್ಥಾಪಿಸಿರುವ ಬಿ.ರಾಚಯ್ಯ ಹೆಸರಿನ ದತ್ತಿ ಪ್ರಶಸ್ತಿಗೆ ಒಂದು ಲಕ್ಷ ಹತ್ತು ಸಾವಿರ ರೂ (1,10,000) ಚೆಕ್ ನೀಡಿದ್ದಾರೆ. ಸಂಘದಲ್ಲಿ ಬಿ.ರಾಚಯ್ಯ ಹೆಸರಿನಲ್ಲಿ ದತ್ತಿ ನಿಧಿ ಸ್ಥಾಪಿಸಿದ ಶಾಸಕರಾದ ಎ.ಆರ್.ಕೃಷ್ಣಮೂರ್ತಿ ಅವರನ್ನು



ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (KUWJ) ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರು ಅಭಿನಂದಿಸಿ, ಧನ್ಯವಾದಗಳನ್ನು ತಿಳಿಸಿದ್ದಾರೆ.




ಹುಣಸೂರಿನ ರಾಯಲ್ ಡ್ಯಾನ್ಸ್ ಸ್ಟುಡಿಯೋ 4ನೇ ವರ್ಷದ ವಾರ್ಷಿಕೋತ್ಸವ ಹಾಗೂ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ಕೆಎಸ್‌ಡಿಎ ಜಿಲ್ಲಾಧ್ಯಕ್ಷರಾದ ರವಿ ಉದ್ಘಾಟಿಸಿದರು. ಚಿತ್ರದಲ್ಲಿ ಸಮಾಜ ಸೇವಕ ಹರವೇ ಶ್ರೀಧರ್, ಆರ್‌ಡಿಎಸ್ ಮುಖ್ಯಸ್ಥರಾದ ಯಶ್ವಂತ್, ನಟ ಕುಮಾರ್ ಅರಸೇಗೌಡ, ಡ್ಯಾನ್ಸ್ ಮಾಸ್ಟರ್ ಅಶ್ವಕ್, ಡಾಟಟನಿವೇದಿತ, ಪೃಥ್ವಿನಾಯಕ್, ಪ್ರಶಾಂತ್, ನಿರೂಪಕರಾದ ಲಕ್ಷ್ಮಿಕಾಂತ್ ಹಾಜರಿದ್ದರು.

## ಆಧುನಿಕ ಹೈನುಗಾರಿಕೆ ತರಬೇತಿ

ಬೀದರ್: ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರ ಬೀದರ, ಜಿಲ್ಲಾಕೇಂದ್ರ ಗ್ರಂಥಾಲಯ ಹಿಂಭಾಗ, ಬೀದರನಲ್ಲಿ ಮೇ.29 ರಿಂದ 30 ರವರೆಗೆ ಆಧುನಿಕ ಹೈನುಗಾರಿಕೆ ತರಬೇತಿ ಹಮ್ಮಿಕೊಳ್ಳಲಾಗುತ್ತಿದೆ. ತರಬೇತಿಗೆ ಹಾಜರಾಗುವ ಸಮಯದಲ್ಲಿ ಆಧಾರ ಕಾರ್ಡ್ ಪ್ರತಿ ಹಾಗೂ ಇತ್ತೀಚಿನ ಎರಡು ಭಾವಚಿತ್ರ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು. ಆಸಕ್ತರು ಮುಂಚಿತವಾಗಿ ವಾಟ್ಸಾಪ್ ಮೂಲಕ ತಮ್ಮ ಹೆಸರು ಮತ್ತು ಮೊಬೈಲ ಸಂಖ್ಯೆಯೊಂದಿಗೆ ನೋಂದಾಯಿಸಿಕೊಳ್ಳಬೇಕು. 40 ರೈತರಿಗೆ ತರಬೇತಿಗೆ ಅವಕಾಶವಿದ್ದು, ಮೊದಲು ಬಂದವರಿಗೆ ಆದ್ಯತೆ ನೀಡಲಾಗುತ್ತದೆ. ಈಗಾಗಲೇ ತರಬೇತಿ ಪಡೆದವರಿಗೆ ಅವಕಾಶವಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9902561957ಗೆ ಕರೆ ಮಾಡಬಹುದಾಗಿದೆ ಎಂದು ಬೀದರ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದ ಮುಖ್ಯ ಪಶುವೈದ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕುರ್ಚಿ ಕದನ ಕ್ಲೈಮ್ಯಾಕ್ಸ್?

## ದಿಲ್ಲಿಯಲ್ಲಿ ಬೀಡು ಬಿಟ್ಟ ಕಾಂಗ್ರೆಸ್ ನಾಯಕರ ದಂಡು | ಸಂಪುಟ ಪುನಾರಚನೆಯೂ ಮುನ್ನೆಲೆಗೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕರ್ನಾಟಕ ಕಾಂಗ್ರೆಸ್‌ನಲ್ಲಿ ಎಲ್ಲವೂ ಸುಖ್ಯಾಂತ್ಯವಾಗುವ ಲಕ್ಷಣಗಳು ಕಾಣತೊಡಗಿವೆ. ಕುರ್ಚಿಯ ಕದನ ಜೊತೆ–ಗೆ ಸಂಪುಟ ಪುನಾರಚನೆ ವಿಷಯವೂ ದಿಲ್ಲಿಯಲ್ಲಿ ಗಮನ ಸೆಳೆದಿದ್ದು, ಕ್ಲೈಮ್ಯಾಕ್ಸ್ ಹಂತ ತಲುಪಿದೆ. ಸಿಎಂ ಸಿದ್ದರಾಮಯ್ಯ–ಹೈಕಮಾಂಡ್ ನಾಯಕರ ಜೊತೆ ಪ್ರತ್ಯೇಕ ಸಭೆ ನಡೆದಿದೆ. ದೆಹಲಿಯ ಎಐಸಿಸಿ ಪ್ರಧಾನ ಕಚೇರಿಯಲ್ಲಿ ಈ ಕ್ಲೋಸ್ ಡೋರ್ ಸಭೆ ನಡೆದಿದ್ದು, ಮಹತ್ವದ ಬೆಳವಣಿಗೆಯ ಸಾಧ್ಯತೆ ಇದೆ.

**ಗಣ್ಯನಾಯಕರು ಭಾಗಿ:** ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆಸಿ ವೇಣುಗೋಪಾಲ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಸಭೆಯಲ್ಲಿ ಭಾಗಿಯಾಗಿದ್ದರು.

**ಸಿಎಂ ಅಭಿಪ್ರಾಯ ಮಂಡನೆ?:** ಆಂತರಿಕ ಮಾತುಕತೆಯ ಮಾಹಿತಿಗಳು ಹೊರ ಬಂದಿಲ್ಲ. ಅದರೆ, ಸುದೀರ್ಘ ಅವಧಿಯ ಮಾತುಕತೆಯಲ್ಲಿ ಕೆಲವೊಂದು ಮಹತ್ವದ ಚರ್ಚೆಗಳು ನಡೆದಿರುವ ಸಾಧ್ಯತೆ ಇದೆ. ನಾಯಕತ್ವ ಬದಲಾವಣೆ ವಿಚಾರವಾಗಿ ಸಿಎಂ ಸಿದ್ದರಾಮಯ್ಯ ಅವರು ತಮ್ಮ ಅಭಿಪ್ರಾಯ ಮಂಡಿಸಿರುವ ಸಾಧ್ಯತೆ ಇದೆ.



### ನಾಯಕತ್ವ ಗೊಂದಲ ಪರಿಹಾರಕ್ಕೆ ಸೂತ್ರ

- ಕರ್ನಾಟಕ ಕಾಂಗ್ರೆಸ್ ನಾಯಕತ್ವ ಗೊಂದಲಕ್ಕೆ ಬ್ರೇಕ್ ಹಾಕುವುದು
- ನಾಯಕತ್ವ ವಿಚಾರ ಬಗ್ಗೆ ಯಾರೂ ಮಾತನ್ನಾಡದಂತೆ ಸ್ಪಷ್ಟ ಸಂದೇಶ
- ಸಿಎಂ, ಡಿಸಿಎಂ ಇಬ್ಬರ ಮುಂದೆ ತಮ್ಮ ಫಾರ್ಮುಲಾವನ್ನ ತಿಳಿಸುವುದು
- ಸಚಿವ ಸಂಪುಟ ಪುನಾರಚನೆ ಬಗ್ಗೆ ಮಹತ್ವದ ಚರ್ಚೆ

### ವಿಧಾನಪರಿಷತ್: ಅಭ್ಯರ್ಥಿಗಳ ಆಯೆಯ ತರ್ಕ

- ಐದು ನಾಮನಿರ್ದೇಶನ ಹಾಗೂ ಏಳು ಸ್ಥಾನಗಳಿಗೆ ವಿಧಾನಸಭೆಯಿಂದ ಪರಿಷತ್‌ಗೆ ನಡೆಯುವ ಚುನಾವಣೆ ಬಗ್ಗೆ ಚರ್ಚೆ
- ಪರಿಷತ್ ಚುನಾವಣೆಯಲ್ಲಿ ತಮ್ಮ ಪಾಲಿಗೆ ಬರುವ ನಾಲ್ಕು ಸ್ಥಾನಗಳಿಗೆ ಯಾರಿಗೆ ಅವಕಾಶ ನೀಡಬಹುದೆಂಬ ಕುರಿತು ಚರ್ಚೆ

### ಹೈಕಮಾಂಡ್ ಮುಂದೆ ಸತತ ಸಭೆ

ಎಐಸಿಸಿ ಕಚೇರಿಯಲ್ಲಿ ಹೈಕಮಾಂಡ್ ನಾಯಕರ ಜೊತೆಗೆ ಸತತ ಸಭೆಗಳು ನಡೆಯುತ್ತಿವೆ. ಮ್ಯಾರಥಾನ್ ಮೀಟಿಂಗ್ ಹಿನ್ನೆಲೆಯಲ್ಲಿ ನಾಯಕರು ಊಟವನ್ನ ತರಿಸಿದ್ದಾರೆ. ಹೊರಗಡೆಯಿಂದಲೇ ಊಟವನ್ನು ತರಿಸಲಾಗಿದೆ. ಸಿದ್ದರಾಮಯ್ಯ ಸಭೆಯ ಬೆನ್ನಲ್ಲೇ ಡಿಕೆ ಶಿವಕುಮಾರ್ ಅವರ ಜೊತೆಗೂ ಪ್ರತ್ಯೇಕ ಸಭೆ ನಡೆಸಲಾಗಿದ್ದು, ವಿಷಯ ಬಹಿರಂಗವಾಗಿಲ್ಲ..!

### ಸೋನಿಯಾ–ರಾಹುಲ್ ಗಾಂಧಿ ಚರ್ಚೆ..?

ನಾಯಕತ್ವ ಗೊಂದಲ, ಸಿಎಂ ಸಿದ್ದರಾಮಯ್ಯ ಜೊತೆಗಿನ ಮಾತುಕತೆ ಸೇರಿದಂತೆ ಹಲ ವಿಚಾರಗಳ ಕುರಿತು ಸೋನಿಯಾ ಜೊತೆ ಚರ್ಚೆ ನಡೆಸಲಿದ್ದಾರೆ. ಊಟಕ್ಕಾಗಿ ತಮ್ಮ ನಿವಾಸಕ್ಕೆ ತೆರಳಿರುವ ರಾಹುಲ್ ಗಾಂಧಿ ಇದೇ ವೇಳೆ ಸೋನಿಯಾ ಗಾಂಧಿ ಜೊತೆಗೂ ಚರ್ಚೆ ನಡೆಸುವ ಸಾಧ್ಯತೆ ಇದೆ. ಊಟದ ರಾಹುಲ್ ಗಾಂಧಿ ಮತ್ತೆ ಡಿಕೆ ಶಿವಕುಮಾರ್ ಜೊತೆಗೆ ಸಭೆ ನಡೆಸಿದ್ದು, ವಿಷಯ ಗೌಪ್ಯವಾಗಿದೆ.

## 45 ಕೋಟಿ ರೂ.ಹಗರಣ: ವಿಶ್ರಾಂತ ಕುಲಪತಿ ಸೇರಿ ಆರು ಮಂದಿ ಬಂಧನ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಹೊರವಲಯದಲ್ಲಿರುವ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ನಕಲಿ ಬಿಲ್ ಸೃಷ್ಟಿಸಿ ₹45 ಕೋಟಿ ಹಗರಣ ಮಾಡಿ, ಅಕ್ರಮ ಎಸಗಿರುವ ಆರೋಪದ ಮೇರೆಗೆ ಲೋಕಾಯುಕ್ತ ಪೊಲೀಸರು ಪಶು ವೈದ್ಯಕೀಯ ವಿವಿ ವಿಶ್ರಾಂತ ಕುಲಪತಿ, ನಿವೃತ್ತ ಕಂಟ್ರೋಲರ್ ಸೇರಿದಂತೆ ಆರು ಮಂದಿಯನ್ನು ಬಂಧಿಸಿದ್ದಾರೆ.

ವಿಶ್ರಾಂತ ಕುಲಪತಿ ಎಚ್ ಡಿ ನಾರಾಯಣಸ್ವಾಮಿ,



ನಿವೃತ್ತ ಪ್ರಭಾರ ಹಣಕಾಸು ನಿಯಂತ್ರಣಾಧಿಕಾರಿ ಕೆ ಎಲ್ ಸುರೇಶ್, ಎಫ್‌ಡಿಎ ಮೃತ್ಯುಂಜಯ ಹಿರೇಮಠ, ಬೆಂಗಳೂರು ಎಂಟರ್ ಪ್ರೈಸೆಸ್ ಮಾಲೀಕರಾದ ಬೊಪ್ಪಣ್ಣ ಮಂಜುನಾಥ ಹಾಗೂ ರಾಮಗೊಂಡ ಬಂಧಿತರು.

2017–18ರಲ್ಲಿ ₹45 ಕೋಟಿಗೂ ಅಧಿಕ ಹಣದ ನಕಲಿ ಬಿಲ್ ಸೃಷ್ಟಿಸಿ ಅಕ್ರಮ ಎಸಗಿರುವ ಆರೋಪವಿದೆ. ಈ ಅವಧಿಯಲ್ಲಿ ನಾರಾಯಣಸ್ವಾಮಿ ಕುಲಪತಿ, ಕೆ ಎಲ್ ಸುರೇಶ್ ಕಂಟ್ರೋಲರ್ ಆಗಿದ್ದರು. ವಿವಿ ಎಫ್‌ಡಿಎ ಮೃತ್ಯುಂಜಯ ಹಿರೇಮಠ ಅವರು ಬೆಂಗಳೂರಿನ ಖಾಸಗಿ ಎಂಟರ್ ಪ್ರೈಸೆಸ್ ಜೊತೆಯಲ್ಲಿ ಸೇರಿ–ಕೊಂಡು ಅಕ್ರಮ ಎಸಗಿರುವ ಆರೋಪವಿರುವುದಾಗಿ ತಿಳಿದುಬಂದಿದೆ. ಪ್ರಕರಣ ಸಂಬಂಧ ನ್ಯಾಯಾಲಯ ವಾರೆಂಟ್ ಜಾರಿಗೊಳಿಸಿತ್ತು. ಇದರ ಬೆನ್ನಲ್ಲೇ ಸಕ್ರಿಯವಾದ ಲೋಕಾಯುಕ್ತ ಪೊಲೀಸರು ಕೆಲವರನ್ನು ಬೀದರ್ ಹಾಗೂ ಕೆಲ ಆರೋಪಿಗಳನ್ನು ಬೆಂಗಳೂರಿನಲ್ಲಿ ಬಂಧಿಸಿ ಬೀದರ್ ನ್ಯಾಯಾಲಯಕ್ಕೆ ಕರೆತಂದಿದ್ದಾರೆ.

ಲೋಕಾಯುಕ್ತ ಎಡಿಜಿಪಿ ಮನೀಷ್ ಕರ್ಬಿಕರ್, ಐಜಿಪಿ ಎ ಎಸ್ ಸುಬ್ರಹ್ಮಣ್ಯಶ್ವರರಾವ್, ಎಸ್‌ಪಿಗಳಾದ ಬದ್ರಿನಾಥ, ಸಿದ್ದರಾಜು ಅವರ ಮಾರ್ಗದರ್ಶನದಲ್ಲಿ ಬೀದರ್ ಲೋಕಾಯುಕ್ತ ಡಿವೈಎಸ್‌ಪಿ ಹಣಮಂತರಾಯ, ಸಂತೋಷ ರಾಠೋಡ್ ಸೇರಿದಂತೆ ಇತರೆ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಇದ್ದರು.

# ಮಾಜಿ ಶಾಸಕ ಸುಭಾಷ ಕಲ್ಲೂರ ಪುತ್ರ ನಾಗೇಶ ಕಲ್ಲೂರ ಇನ್ನಿಲ್ಲ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಮಾಜಿ ಶಾಸಕ ಸುಭಾಷ ಕಲ್ಲೂರ ರವರ ಪುತ್ರ ಯುವ ಸಮಾಜಸೇವಕ ಹಾಗೂ ಜನಪರ ಹೋರಾಟಗಾರರಾದ ನಾಗೇಶ ಕಲ್ಲೂರ ಅವರು ವಿಧಿವಶರಾಗಿದ್ದಾರೆ. ಈ ಸುದ್ದಿ ಅವರ ಅಭಿಮಾನಿಗಳಿಗೂ, ಸಮಾಜದ ವಿವಿಧ ಬಾಂಧವರಲ್ಲೂ ದುಃಖ ಇಮ್ಮಡಿಗೊಳಿಸಿದೆ. ನಾಗೇಶ ಸುಭಾಷ ಕಲ್ಲೂರ ಅವರು ಸದಾ ಜನರ ಬಗ್ಗೆ, ಆರೋಗ್ಯಕರ ಸಮಾಜದ ಬಗ್ಗೆ ಚಿಂತಿಸುತ್ತಿದ್ದ ಇವರು, ಸರಳ ವ್ಯಕ್ತಿತ್ವ, ಮಾನವೀಯ ಮೌಲ್ಯಗಳಿಗೆ ಹೆಸರುವಾಸಿಯಾಗಿದ್ದರು. ಸಮಾಜಮುಖಿ ಚಿಂತನೆಗಳಿಂದ ಕ್ಷೇತ್ರದ ಜನಮನ ಗೆದ್ದಿದ್ದರು. ಅನೇಕ ಸಾಮಾಜಿಕ ಕಾರ್ಯಗಳಲ್ಲೂ ತೊಡಗಿಸಿಕೊಂಡು ಎಲ್ಲಾ ಸಮುದಾಯದವರ ವಿಶ್ವಾಸ ಗಳಿಸಿದ್ದರು.



### ಎಲ್ಲಾ ಸಮುದಾಯ ಮರೆಯದ ಮಾಣಿಕ್ಯ

ಬಡವರು, ರೈತರು ಹಾಗೂ ಹಿಂದುಳಿದ ವರ್ಗಗಳ ಸಮಸ್ಯೆಗಳ ಬಗ್ಗೆ ಸದಾ ಧ್ವನಿ ಎತ್ತುತ್ತಿದ್ದ ನಾಗೇಶ ಸುಭಾಷ ಕಲ್ಲೂರ ಅವರು, ಸಾರ್ವಜನಿಕ ಹಿತಾಸಕ್ತಿಗಾಗಿ ನಿರಂತರ ಹೋರಾಟ ನಡೆಸುತ್ತಿದ್ದರು. ಅವರ ಸೇವಾಭಾವ, ನಿಸ್ವಾರ್ಥ ಕಾರ್ಯ ಹಾಗೂ ಜನಪರ ನಿಲುವುಗಳಿಂದ ಅವರು ಅನೇಕರಿಗೆ ಆದರ್ಶ ವ್ಯಕ್ತಿಯಾಗಿದ್ದರು. "ಮರೆಯದ ಮಾಣಿಕ್ಯ" ಎಂದು ಜನರಿಂದಲೇ ಕರೆಯಲ್ಪಡುತ್ತಿದ್ದ ನಾಗೇಶ ಕಲ್ಲೂರ ಅವರ ಅಗಲಿಕೆ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ನಿಧನಕ್ಕೆ ರಾಜಕೀಯ ಮುಖಂಡರು, ಸಾಮಾಜಿಕ ಸಂಘಟನೆಗಳು ಹಾಗೂ ಸಾರ್ವಜನಿಕರು ಕಂಬನಿ ಮಿಡಿದಿದ್ದು, ಕುಟುಂಬ ವರ್ಗಕ್ಕೆ ಸಂತಾಪ ಸೂಚಿಸಿದ್ದಾರೆ.





### ತಂದೆ ಸಜ್ಜನ ರಾಜಕಾರಣಿ, ಮಗ ಜನರ ಕಣ್ಮಣಿ

ಸುಭಾಷ ಕಲ್ಲೂರ ಅವರು ಮಾಜಿ ಶಾಸಕರು. ಅಪರೂಪದ ಜನಪರ ಕಾಳಜಿಯ ಉತ್ತಮ ರಾಜಕಾರಣಿ ಎಂದೇ ಹೆಸರಾದವರು. ಅವರ ಆದರ್ಶಗಳು ಇಂದಿಗೂ ಜೀವಂತವಾಗಿವೆ. ಸಮಾಜ ಸೇವೆಗೆ ಅವರು ಹಾಕಿಕೊಟ್ಟ ಹಾದಿ ಅಜರಾಮರವಾಗಿದೆ. ಅವರ ಪ್ರಗತಿಯ ಪಥ ಮುಂದಿನ ಪೀಳಿಗೆಗೆ ಸದಾ ಪ್ರೇರಣೆಯಾಗಿದೆ. ಇಂಥ ಪ್ರಮಾಣಿಕ ಸಜ್ಜನ ರಾಜಕಾರಣಿಯ ಮಗ ನಾಗೇಶ ಸುಭಾಷ ಕಲ್ಲೂರ ಅವರು ತಾಪಂ ಮಾಜಿ ಸದಸ್ಯರಾಗಿದ್ದರು. ತಂದೆ–ಯ ಹಾದಿಯಲ್ಲೇ ಸಾಗಿದ್ದು ಜನಮಾನಸದ ನಾಯಕ ಆಗಿದ್ದರು. ಆದರೆ ವಿಧಿಯ ಆಟದಿಂದಾಗಿ ನಮ್ಮನ್ನು ಅಗಲಿರುವುದು ನಂಬಲಾರದ ಸತ್ಯವಾಗಿದೆ ಎಂದು ಜನತೆ ಮನದುಂಬಿ ಕಣ್ಣೀರು ಮಿಡಿಯುತ್ತಿದ್ದಾರೆ.

## ಸಂಸ್ಕರಿಸದೆ ನದಿಗೆ ತ್ಯಾಜ್ಯ ಹರಿಸಿದರೆ ಕ್ರಿಮಿನಲ್ ಮೊಕದ್ದಮೆ: ಈಶ್ವರ ಖಂಡ್ರೆ, ಅರಣ್ಯ ಸಚಿವ

## ಮಳೆಗಾಲ ಮುನ್ನೆಚ್ಚರಿಕಾ ಕ್ರಮ ಅತ್ಯಾವಶ್ಯಕ

ಮಳೆಗಾಲ ಆರಂಭವಾಗುತ್ತಿರುವ ಹಿನ್ನೆಲೆ ರೈತರು ಹಾಗೂ ಕೃಷಿಕರಿಗೆ ಯಾವುದೇ ತೊಂದರೆ ಆಗದಂತೆ ಸಂಬಂಧಿಸಿದ ಅಧಿಕಾರಿಗಳು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವುದು ಅತ್ಯಾವಶ್ಯಕವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್, ರಸ್ತೆ, ನೀರಾವರಿ ಕಾಲುವೆಗಳು, ಬೆಳೆ ರಕ್ಷಣೆ ಸೇರಿದಂತೆ ಅಗತ್ಯ ಸೌಲಭ್ಯಗಳ ಬಗ್ಗೆ ಅಧಿಕಾರಿಗಳು ವಿಶೇಷ ಗಮನ ಹರಿಸಬೇಕು.

## ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೊ: 9845028349



ಮಳೆಯ ಸಂದರ್ಭದಲ್ಲಿ ವಿದ್ಯುತ್ ವ್ಯತ್ಯಯ, ಕಾಲುವೆಗಳ ತಡೆ, ಬೀಜ ಹಾಗೂ ರಸಗೊಬ್ಬರ ಕೊರತೆ, ಬೆಳೆ ಹಾನಿ ಮುಂತಾದ ಸಮಸ್ಯೆಗಳು ಸಾಮಾನ್ಯವಾಗಿ ಎದುರಾಗುತ್ತವೆ. ಆದ್ದರಿಂದ ಕೃಷಿ ಇಲಾಖೆ, ವಿದ್ಯುತ್ ಇಲಾಖೆ ಹಾಗೂ ತಾಲೂಕು ಆಡಳಿತ ಸಮನ್ವಯದಿಂದ ಕಾರ್ಯನಿರ್ವಹಿಸಿ ರೈತರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಬೇಕು.

ಕೃಷಿ ಚಟುವಟಿಕೆಗಳಿಗೆ ಅಡಚಣೆ ಆಗದಂತೆ ಗುಣಮಟ್ಟದ ಬೀಜ, ರಸಗೊಬ್ಬರ ಮತ್ತು ಅಗತ್ಯ ಕೃಷಿ ಉಪಕರಣಗಳು ಸಮರ್ಪಕವಾಗಿ ಲಭ್ಯವಾಗುವಂತೆ ನೋಡಿಕೊಳ್ಳಬೇಕು. ಜೊತೆಗೆ ಗ್ರಾಮೀಣ ರಸ್ತೆಗಳನ್ನು ದುರಸ್ತಿ ಮಾಡಿ ರೈತರು ಸುಗಮವಾಗಿ ಸಂಚಾರ ಮಾಡಲು ಅವಕಾಶ ಕಲ್ಪಿಸಬೇಕು.

ರೈತರು ದೇಶದ ಬೆನ್ನೆಲುಬು. ಅವರ ಸಮಸ್ಯೆಗಳಿಗೆ ಸ್ಪಂದಿಸಿ, ಮಳೆಗಾಲದಲ್ಲಿ ಯಾವುದೇ ಅನಾಹುತಗಳು ಸಂಭವಿಸದಂತೆ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವುದು ಕಾಲದ ಅಗತ್ಯವಾಗಿದೆ.

## ಸಂಗೀತ ಸಂಸ್ಕೃತಿಯ ಪರಿಭಾಯೆ: ಶಿವಶರಣಪ್ಪ ಸ್ವಾಮಿ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಇಂದು ಮೊಬೈಲ್ ನಮ್ಮ ಬದುಕಿನಲ್ಲಿ ಲಗ್ಗೆ ಹಾಕಿದ ಮೇಲೆ ಬಾಳು ಅಸ್ತವ್ಯಸ್ತಗೊಳ್ಳುತ್ತಿದೆ. ಬೆಳಗಿನಿಂದ ಸಂಜೆವರೆಗೂ ಎಲ್ಲರೂ ಮೊಬೈಲ್ನಲ್ಲಿ ಇರುವುದರಿಂದ ಇಂದಿನ ಯುವಕರು ತಾವು ಸಾಧಿಸಬೇಕಾದ ಗುರಿಯನ್ನು ಮರೆಯುತಿದ್ದಾರೆ. ಹಳ್ಳಿಹಳ್ಳಿಗಳಲ್ಲಿ ಜಾನಪದ ಸಂಗೀತ, ಹಾಡುಗಳು, ಸಂಪ್ರದಾಯ ಮತ್ತು ಪದ್ಧತಿಗಳು ಮಾಯವಾಗುತ್ತಿವೆ. ಆದ್ದರಿಂದ ಗ್ರಾಮಸ್ಥರು ಸಂಗೀತ ಹಾಡುಗಳನ್ನು ಮರೆಯದೆ ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಏಕೆಂದರೆ ಸಂಗೀತವೇ ಸಂಸ್ಕೃತಿಯ ಪರಿಭಾಯೆ ಎಂದು ಗಣೇಶ್ವರ್ ತಪೋಭೂಮಿಯ ಸಾಧಕರಾದ ಪೂಜ್ಯ ಶ್ರೀ ಶಿವಶರಣ ಸ್ವಾಮಿಗಳು ನುಡಿದರು. ಅವರು ಬೀದರ ತಾಲೂಕಿನ ಸಂಗೊಳ್ಗಿ ಗ್ರಾಮದ ಶ್ರೀ ಸದ್ಗುರು ಗಣೇಶ್ವರ ಕಮರಿಮಠದ ವೇದಿಕೆಯಲ್ಲಿ ಸೋಮವಾರ ಸಂಜೆ ಶ್ರೀ ಅಕ್ಕಮಹಾದೇವಿ ಮಹಿಳಾ ಜಾನಪದ ಹಾಗೂ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಕಂಗನಕೋಟ್ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ವತಿಯಿಂದ ಏರ್ಪಡಿಸಿದ್ದ ಸಂಗೀತ ಸಂಭ್ರಮ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪ.ಪೂ ದೇವಾನಂದ ಸ್ವಾಮಿಯವರು ವಹಿಸಿದ್ದರು. ಶ್ರೀ ಸದ್ರೂಪಾನಂದ ಭಾರತಿ ಸ್ವಾಮಿ ನೇತೃತ್ವವನ್ನು ವಹಿಸಿದ್ದರು. ಶ್ರೀ ಮಾತೆ ಅಮೃತಾನಂದ ಮಯಿ ಸಮ್ಮುಖವನ್ನು ವಹಿಸಿದ್ದರು .ಈ ಕಾರ್ಯಕ್ರಮದಲ್ಲಿ ಸಾಹಿತಿಗಳಾದ ಡಾ. ಎಂ.ಜಿ ದೇಶಪಾಂಡೆಯವರು ಮಾತನಾಡಿ ಇವತ್ತು ಹಳ್ಳಿ ಹಳ್ಳಿಗಳಲ್ಲಿ ಮಹಿಳೆಯರು ಮಹಿಳಾ ಸಂಘಗಳನ್ನು ಕಟ್ಟಿಕೊಂಡು ದೇಶಿ ಭಾಷೆಯ ಸೊಗಡನ್ನು ಮತ್ತು ತಮ್ಮಲ್ಲಿರುವ ಪ್ರತಿಭಾ ಕಲೆಯಿಂದ ಗ್ರಾಮೀಣ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವ ಕಾರ್ಯ ಮಾಡುತ್ತಿದ್ದಾರೆ. ಜಾನಪದ ಕಲೆಗಳಿಗೆ ಮಹತ್ವ ನೀಡುತ್ತಿರುವುದು ಶ್ಲಾಘನೀಯ ಎಂದು ಅಭಿಪ್ರಾಯಪಟ್ಟರು.

ಇನ್ನೂ ಹಲವರು ಮುಖ್ಯ ಅತಿಥಿಗಳು ಮಾತನಾಡಿದರು. ಸಂಗಮೇಶ್ವರ ಬಿರಾದಾರ, ಶಾಂತಯ್ಯಾ ಸ್ವಾಮಿ, ಸುರೇಶ್ ಪಾಟೀಲ, ಶಾಂತಕುಮಾರ್ ಶಂಭು ಜೊತೆಗೆ ಅನೇಕ ಗಣ್ಯರು ಹಾಗೂ ಅತಿಥಿವೃಂದದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಶ್ರೀಮತಿ ನಿರ್ಮಲಬಾಯಿ ಶಂಭು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಜಾನಪದ ಗೀತೆಗಳು, ವಚನಗಾಯನ, ಭುಲಾಯಿ ಪದ, ತಬಲಾವಾದನ, ಶೋಭಾನ ಪದ ಸೇರಿದಂತೆ ಅನೇಕ ಕಲೆಗಳನ್ನು ಪ್ರದರ್ಶಿಸಲಾಯಿತು. ಹಿರಣಮಯಿ ಮತ್ತು ಚಿಕ್ಕ ಮಕ್ಕಳ ತಂಡದಿಂದ ಏರ್ಪಡಿಸಿದ್ದ ನೃತ್ಯವು ಜನಮನ ರಂಜಿಸಿತ್ತು. ಪ್ರಾರಂಭದಲ್ಲಿ ಓಂಕಾರ ಉಪ್ಪೆ ಅವರು ಸ್ವಾಗತವನ್ನು ಕೋರಿದರು. ಕೇದಾರ ಶಂಭು ನಿರೂಪಿಸಿದರು. ಈ ಸಂದರ್ಭದಲ್ಲಿ ನೂರಾರು ಸಂಖ್ಯೆಯಲ್ಲಿ ಮಹಿಳೆಯರು ಮತ್ತು ಪುರುಷರು ಉಪಸ್ಥಿತರಿದ್ದು ಅನೇಕ ಚಟುವಟಿಕೆಗಳನ್ನು ನಡೆದವು. ಸಂಗೀತಾ ಓತಿಯವರು ಕಾರ್ಯಕ್ರಮಕ್ಕೆ ವಂದನಾರ್ಪಣೆ ಸಲ್ಲಿಸಿದರು.

## ರಂಗಾಯಣ ಕಲಬುರಗಿಯಿಂದ ಮೇ 28 ಮತ್ತು 29 ರಂದು ಕಾಲಚಕ್ರ ನಾಟಕ ಪ್ರದರ್ಶನ



• ಮಲ್ಲಮ್ಮ ನುಡಿ ವಾರ್ತೆ ಬೀದರ

ಮೇ.26: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ರಂಗಾಯಣ ಕಲಬುರಗಿ ಇವರ ಜಂಟಿ ಆಶ್ರಯದಲ್ಲಿ ಮೇ 28 ಮತ್ತು 29 ರಂದು ಬೆಳಿಗ್ಗೆ 12 ಗಂಟೆಗೆ ನಗರದ ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ ರಂಗಾಯಣದ ರೆಪರ್ಟರಿ ಕಲಾವಿದರಿಂದ ಸಿದ್ಧಗೊಂಡಿರುವ 'ಕಾಲಚಕ್ರ' ನಾಟಕದ ಪ್ರದರ್ಶನವನ್ನು ಆಯೋಜಿಸಲಾಗಿದೆ. ಈ ನಾಟಕವು ಪ್ರಸ್ತುತ ಸಮಕಾಲೀನ ಸಮಾಜಕ್ಕೆ ಅತ್ಯಂತ ಪ್ರಸ್ತುತವಾಗಿದ್ದು, ವ್ಯವಸ್ಥೆಯ ಸೂಕ್ಷ್ಮ ಸಂವೇದನೆಗಳನ್ನು ಅತ್ಯಂತ ಸೊಗಸಾಗಿ ಬಿಂಬಿಸುತ್ತದೆ. ಹುಲುಗಪ್ಪ ಕಟ್ಟಿಮನಿಯವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ನಾಟಕದಲ್ಲಿ ರಂಗಾಯಣ ಕಲಬುರಗಿಯ ರೆಪರ್ಟರಿ ಕಲಾವಿದರು ಮನೋಜ್ಞವಾಗಿ ಅಭಿನಯಿಸಿದ್ದಾರೆ. ಇಂದಿನ ಯುವ ಪೀಳಿಗೆಯು ತಪ್ಪದೇ ನೋಡಲೇಬೇಕಾದ ಅತ್ಯುತ್ತಮ ನಾಟಕ ಇದಾಗಿದೆ.

ಕಾರಣ ಸಾರ್ವಜನಿಕರು, ರಂಗಾಸಕ್ತರು ಹಾಗೂ ಕಲಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ನಾಟಕ ಪ್ರದರ್ಶನವನ್ನು ಯಶಸ್ವಿಗೊಳಿಸಬೇಕಾಗಿ ರಂಗಾಯಣ ಕಲಬುರಗಿ ಹಾಗೂ ಬೀದರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಐದು ದಿವಸ ಅದ್ಧೂರಿಯಾಗಿ ಜರುಗಿದ ಶ್ರೀ ಗಣೇಶ್ವರ ಅವಧೂತರ 30ನೇ ಆಗಮನ ಮಹೋತ್ಸವ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ ಬೀದರ





ಮೇ 23: ತಾಲೂಕಿನ ಸುಕ್ಷೇತ್ರ ಕಮರಿಮಠ ಸಂಗೋಳಗಿ ಹಾಲಹಳ್ಳಿ (ಕೆ) ಗ್ರಾಮದಲ್ಲಿ ಬ್ರಹ್ಮಶ್ರೀ ಸದ್ಗುರು ಶ್ರೀ ಗಣೇಶ್ವರ ಅವಧೂತರ ಕೃಪಾಶೀರ್ವಾದದಿಂದ ಹಾಗೂ ಪರಮ ಪೂಜ್ಯ ಶ್ರೀ ಶರಣಪ್ಪ ಸ್ವಾಮಿಗಳ ಸಾನ್ನಿಧ್ಯದಲ್ಲಿ ಶ್ರೀ ಬ್ರಹ್ಮಶ್ರೀ ಸದ್ಗುರು ಶ್ರೀ ಗಣೇಶ್ವರ ಅವಧೂತರ 30ನೇ ಆಗಮನ ಮಹೋತ್ಸವ ಹಾಗೂ ಪ್ರವಚನ ಕಾರ್ಯಕ್ರಮವು ಮೇ 22 ರಿಂದ (ಇಂದಿನಿಂದ)ಮೇ 26 ರವರೆಗೆ ಅತ್ಯಂತ ವೈಭವದಿಂದ ಜರುಗಿತು,

ಮೇ 26 ಮಹೋತ್ಸವದ ಕೊನೆಯ ದಿನವಾದ ಮಂಗಳವಾರ ಬೆಳಿಗ್ಗೆ 6 ಗಂಟೆಗೆ ರುದ್ರಾಭಿಷೇಕ ನೆರವೇರಿದೆ,

ಮಧ್ಯಾಹ್ನ 4ಗಂಟೆಗೆ ಶ್ರೀ ಹನುಮಾನ ಮಂದಿರದಿಂದ ಶ್ರೀ ಸದ್ಗುರು ಗಣೇಶ್ವರ ಕಮರಿಮಠದವರೆಗೆ ಅದ್ದೂರಿ ಪಲ್ಲಕ್ಕಿ ಮಹೋತ್ಸವ ಹಾಗೂ ಶೋಭಾಯಾತ್ರೆ ಜರುಗಿತ್ತು.


ಅನೇಕ ಸಾಂಸ್ಕೃತಿಕ ಕೋಲಾಟ ಡ್ಯಾನ್ಸ್ ಕಾರ್ಯಕ್ರಮವು ಸಂಗೋಳಗಿ ಗ್ರಾಮದ ಹನುಮಾನ ಮಂದಿರದಿಂದ ಸದ್ಗುರು ಶ್ರೀ ಗಣೇಶ್ವರ ಅವಧೂತರ ಕಮರಿಮಠದ ವರೆಗೆ ಭವ್ಯವಾದ ಮೆರವಾಣಿಗೆ ನಡೆಯಿತು,

ನಂತರ ವಿವಿಧ ವಿಷಯಗಳ ಕುರಿತು ಪ್ರವಚನ ಮಹೋತ್ಸವದ ಐದೂ ದಿನಗಳ ಕಾಲ ಸಂಜೆ ನಡೆಯುವ ಧಾರ್ಮಿಕ ಸಭೆಯಲ್ಲಿ ಪ್ರವಚನಕಾರರಿಂದ "ಮತಿಗೇ ಮಂಗಳ ವಿವುದಾವುದು ಉತ್ತಮರ ಸಂಘ, ನಿಜಗುಣ ಶಿವಯೋಗಿ","ವಿಮಲ ಮಾನಸದಿಂ ಶುಭ ತೀರ್ಥವುಂಟೆ", "ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ", "ಬೆನ್ನು ಬಾಗುವ ಮುನ್ನ ತಲೆಯು ತೂಗುವ ಮುನ್ನ" ಹಾಗೂ ಸಮಾರೋಪದ ದಿನದಂದು "ತದ್ವಿಧಿ ಪ್ರಣಿಪಾತೇನ ಪರಿ ಪ್ರಶ್ನೇನ ಸೇವಾಯಾ" ಎಂಬ ಧಾರ್ಮಿಕ ವಿಷಯಗಳ ಕುರಿತು ಸವಿಸ್ತಾರವಾದ ಪ್ರವಚನ ಜರುಗಿತು, ತದನಂತರ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಈ ಭವ್ಯ ಕಾರ್ಯಕ್ರಮದಲ್ಲಿ ಉಪದೇಶಾಮೃತ ನೀಡಲು ಕಮರಿಮಠ ನಾಗೂರದ ಶ್ರೀ ವೀರಶೆಟ್ಟಿ ಸ್ವಾಮಿಗಳು,ರುದನೂರ ಕಮರಿಮಠದ ಶ್ರೀ ದೇವಾನಂದ ಮಹಾಸ್ವಾಮಿಗಳು, ಲಿಂಗಸೂರು ಕಮರಿಮಠದ ಶ್ರೀ ಶ್ರೀಧಾಮ ಸ್ವಾಮಿಗಳು,ಮಂಗಸೂಳಿಯ ಗಿರಿ ಆಶ್ರಮದ ಶ್ರೀ ರಾಜಯೋಗಿ ಮಹಾಸ್ವಾಮಿಗಳು, ಬೆಳ್ಳೂರಿನ ಸಚ್ಚಿದಾನಂದ ಆಶ್ರಮ ಸಿದ್ದಾರೂಢ ಮಠದ ಶ್ರೀ ಮಾತೋಶ್ರೀ ಅಮೃತಾನಂದಮಯಿ,ಮಳಚಾಪುರದ ಶ್ರೀ ಶಂಭುಲಿಂಗ ಆಶ್ರಮ ಮಠದ ಶ್ರೀ ಸದ್ರೂಪಾನಂದ ಭಾರತಿ ಸ್ವಾಮಿಗಳು, ಬ್ಯಾಲಹಳ್ಳಿಯ ಕೈಲಾಸ ಶ್ರಮ ಸಿದ್ದಾರೂಢ ಮಠದ ಶ್ರೀ ನಾಗಲಿಂಗ ಸ್ವಾಮಿಗಳು, ಶ್ರೀ ಶೈಲ್ಯದ ಗಣೇಶ್ವರ ತಮೋಭೂಮಿಯ ಶ್ರೀ ಶಿವಶರಣ ಸ್ವಾಮಿಗಳು ಹಾಗೂ ಶಂಕರಗಂಜ ವಾಡಿಯ ಅದ್ವೈತಾಶ್ರಮದ ಶ್ರೀ ಗುಂಡಪ್ಪ ಶರಣರು ಶ್ರೀ ಶಿವಾನಂದ ಸೇರಿದಂತೆ ನಾಡಿನ ನಾನಾ ಮಠಾಧೀಶರು ಹಾಗೂ ಪೂಜ್ಯರು ಆಗಮಿಸಿ ಆಗಮೋತ್ಸವ ಕಾರ್ಯಕ್ರಮ ಯಶಸ್ವಿಗೊಳಿಸಿದರು,

# ಗಡಿಭಾಗದಲ್ಲಿ ಕನ್ನಡತ್ವ ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯ : ಪ್ರಕಾಶ ದೇಶಮುಖ

• ಮಲ್ಲಮ್ಮ ನುಡಿ ವಾರ್ತೆ ಬೀದರ




ಮೇ 26: ಗಡಿಭಾಗದಲ್ಲಿ ಕನ್ನಡ ನಾಡು–ನುಡಿ, ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು ಪ್ರತಿಯೊಬ್ಬ ಕನ್ನಡಿಗನ ಆದ್ಯ ಕರ್ತವ್ಯವಾಗಿದೆ ಎಂದು ಸಂಪನ್ಮೂಲ ಶಿಕ್ಷಕ ಪ್ರಕಾಶ ದೇಶಮುಖ ಹೇಳಿದರು.ಔರಾದ ತಾಲೂಕಿನ ಸಂತಪೂರ ಗ್ರಾಮದ ಆನಂದ ಪ್ರೌಢ ಶಾಲೆಯಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ ಹಾಗೂ ಬೀದರ ಜಿಲ್ಲಾ ಘಟಕದ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ 'ಗಡಿಭಾಗದಲ್ಲಿ ಕನ್ನಡ ಭಾಷೆಯ ಉಳಿವು' ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.ಗಡಿಭಾಗದಲ್ಲಿ ಕನ್ನಡ ಶಾಲೆಗಳ ಸಂಖ್ಯೆ ಕುಸಿಯುತ್ತಿದ್ದು, ಆಂಗ್ಲ ಮಾಧ್ಯಮದ ಪ್ರಭಾವ ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಕನ್ನಡ ಭಾಷೆಯ ಉಳಿವಿಗಾಗಿ ಸರ್ಕಾರ ಮತ್ತು ಸಮಾಜ ಜಂಟಿಯಾಗಿ ಕಾರ್ಯನಿರ್ವಹಿಸಬೇಕು. ಕನ್ನಡ ಶಾಲೆಗಳನ್ನು ಬಲಪಡಿಸಿ, ಶಿಕ್ಷಕರ ನೇಮಕಾತಿ, ಗ್ರಂಥಾಲಯಗಳ ಸ್ಥಾಪನೆ ಹಾಗೂ ಸಾಹಿತ್ಯ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಆದ್ಯತೆ ನೀಡಬೇಕು ಎಂದು ಅವರು ಅಭಿಪ್ರಾಯಪಟ್ಟರು.ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಉಪನ್ಯಾಸಕ ದತ್ತಾತ್ರಿ ಮಡಿವಾಳ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವು ನಾಡಿನ ಪ್ರಮುಖ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಸಂಸ್ಥೆಯಾಗಿದ್ದು, ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡುತ್ತಿದೆ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಸಂಯೋಜಕ ಮಹೇಶ್ ಗೋರನಾಳಕರ್ ಮಾತನಾಡಿ, ಯುವಜನರು ಇತರ ಭಾಷೆಗಳಿಗೆ ಗೌರವ ನೀಡುವ ಜೊತೆಗೆ ಕನ್ನಡ ಬಳಕೆಗೆ ಹೆಚ್ಚಿನ ಒತ್ತು ನೀಡಬೇಕು. ಮನೆಗಳಲ್ಲಿ ಮಕ್ಕಳೊಂದಿಗೆ ಕನ್ನಡದಲ್ಲೇ ಮಾತನಾಡುವ ಅಭ್ಯಾಸ ಬೆಳೆಸಬೇಕೆಂದರು. ಗಡಿಭಾಗದಲ್ಲಿ ಕನ್ನಡದ ಬಹುತ್ವ ಸಂಸ್ಕೃತಿ ಉಳಿಸಿ ಬೆಳೆಸಲು ಸಂಘದಿಂದ ವಿವಿಧ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಭರವಸೆ ನೀಡಿದರು.

ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ವಿನಯಕುಮಾರ ಮಾಳಗೆ ಮಾತನಾಡಿ, ಕನ್ನಡ ಭಾಷೆಯ ಬೆಳವಣಿಗೆಯ ಜೊತೆಗೆ ಪರಿಸರ ಸಂರಕ್ಷಣೆಯೂ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.ಸಾಹಿತಿ ಹಾಗೂ ಪತ್ರಕರ್ತ ಬಾಲಾಜಿ ಕುಂಬಾರ ಮಾತನಾಡಿ, ಬಹುಭಾಷಾ ಸಂಗಮ ಭೂಮಿಯಾಗಿರುವ ಔರಾದ್‌ನಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯದ ಕುರಿತು ಸಮಗ್ರ ಚರ್ಚೆಗಳು ನಡೆಯಬೇಕಿದ್ದು, ಕನ್ನಡದ ಉಳಿವಿಗಾಗಿ ಸರ್ಕಾರದ ಗಮನ ಸೆಳೆಯುವ ಅಗತ್ಯವಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ನಡೆದ ನೃತ್ಯ, ನಾಟಕ ಹಾಗೂ ಗಾಯನ ಕಾರ್ಯಕ್ರಮಗಳು ಸಭಿಕರ ಗಮನ ಸೆಳೆದವು.

ಕಾರ್ಯಕ್ರಮದಲ್ಲಿ ಶಿಕ್ಷಣ ಪ್ರೇಮಿ ಅನೀಲ ಪಾಟೀಲ್ ಧುಪತಮಹಾಗಾಂವ್, ನ್ಯಾಯವಾದಿ ಪ್ಯಾರುಸಾಬ್ ಶೇಖ್, ಶಿಕ್ಷಕರಾದ ರಾಜರೆಡ್ಡಿ, ಮಾಲಸ್ವಾಮಿ, ಶೀಲಾವತಿ, ಕಲ್ಪನಾ, ಉಮಾಕಾಂತ, ಭೀಮಾಶಂಕರ ವೈರಾಗ್ಯ, ರವಿ ಚವ್ಹಾಣ, ಕರಣ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಶಿವನಗರ ವಾಕಿಂಗ್ ಟ್ರ್ಯಾಕ್ ಕಾಮಗಾರಿ ವಿಳಂಬ ಜನಸ್ಪಂದನ ಕಾರ್ಯಕ್ರಮದಲ್ಲಿ ಆಯುಕ್ತರಿಗೆ ನಿವಾಸಿಗಳಿಂದ ಮನವಿ

• ಮಲ್ಲಮ್ಮ ನುಡಿ ವಾರ್ತೆ ಬೀದರ



ಮೇ 26: ನಗರದ ಶಿವನಗರ ಪ್ರದೇಶದಲ್ಲಿರುವ ಸಾರ್ವಜನಿಕರ ವಾಕಿಂಗ್ ಸ್ಥಳದ ಅಭಿವೃದ್ಧಿ ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿರುವ ಹಿನ್ನೆಲೆ, ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕೆಂದು ಬಡಾವಣೆಯ ನಿವಾಸಿಗಳು ಇಂದು ನಡೆದ ಜನಸ್ಪಂದನ ಕಾರ್ಯಕ್ರಮದಲ್ಲಿ ನಗರ ಪಾಲಿಕೆಯ ಆಯುಕ್ತ ಮುಖಿಲ್ ಜೈನ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಶಿವನಗರದ ಬಡಾವಣೆ ಜೊತೆಗೆ ಗುರುನಾನಕ ಕಾಲೋನಿ, ಗುರುನಗರ ಕಾಲೋನಿ, ವೈಷ್ಣವಿ ಕಾಲೋನಿ, ಭವಾನಿ ಕಾಲೋನಿ ಸೇರಿದಂತೆ ಬಡಾವಣೆಯ ಹಲವು ಸಾರ್ವಜನಿಕರ ವಾಕಿಂಗ್ ಮಾಡಲು ಇಲ್ಲಿಯೆ ಬರುತಾರೆ ವಾಕಿಂಗ್ ಟ್ರ್ಯಾಕ್ ಹಾಗೂ ರಸ್ತೆ–ಚರಂಡಿ ಅಭಿವೃದ್ಧಿ ಕಾಮಗಾರಿಯನ್ನು ಕೆಲವು ತಿಂಗಳುಗಳ ಹಿಂದೆ ಆರಂಭಿಸಲಾಗಿತ್ತು. ಆದರೆ ಕಾಮಗಾರಿ ಇನ್ನೂ ಪೂರ್ಣಗೊಳ್ಳದೇ ಇರುವುದರಿಂದ ಸ್ಥಳೀಯ ನಿವಾಸಿಗಳಿಗೆ ಹಾಗು ಹಿರಿಯ ನಾಗರಿಕರಿಕರಿಗೆ ಹಾಗೂ ಮಹಿಳೆಯರು ದಿನನಿತ್ಯ ವಾಕಿಂಗ್ ಮಾಡಲು ತೊಂದರೆ ಉಂಟಾಗುತಿದ್ದೆ.

ಕಾಮಗಾರಿಯ ವಿಳಂಬ ಕುರಿತು ಈಗಾಗಲೇ ಜಿಲ್ಲಾಡಳಿತ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ರಹಿಂ ಖಾನ್ ಅವರ ವೈಯಕ್ತಿಕ ಸಹಾಯಕರು ಅಶೋಕುಮಾರ ಕರಂಜಿ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ರಸ್ತೆ ತಡೆ ಪ್ರತಿಭಟನೆ ನಡೆಸಬಾರದೆಂದು ಮನವಿ ಮಾಡಿದ್ದಲ್ಲದೆ, ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸುವ ನಿಟ್ಟಿನಲ್ಲಿ ವೈಯಕ್ತಿಕವಾಗಿ ಗಮನ ಹರಿಸಲಾಗುತ್ತಿದೆ ಎಂದು ಭರವಸೆ ನೀಡಿರುವುದಾಗಿ ತಿಳಿಸಿದರು.

ಗಣೇಶ ಭಾಗ್ಯವಂತಿ ದೇವಸ್ಥಾನದ ಪಕ್ಕದ ರಸ್ತೆ, ಬಸ ನಿಲ್ದಾಣದಿಂದ ಹಣ್ಣು ಮಗು ವೃತ್ತದವರೆಗೆ ರಸ್ತೆ ಹಾಗೂ ಚರಂಡಿ ಕಾಮಗಾರಿಗಳನ್ನು ಉತ್ತಮ ಗುಣಮಟ್ಟದಲ್ಲಿ ಶೀಘ್ರ ಪೂರ್ಣಗೊಳಿಸಬೇಕು. ಜೊತೆಗೆ ಕಾಮಗಾರಿಯಲ್ಲಿ ನಿರ್ಲಕ್ಷ್ಯ ತೋರಿದ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ನಿವಾಸಿಗಳು ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಚನ್ನಬಸವಂತ ರೆಡ್ಡಿ, ಅಶೋಕ ಕುಮಾರ ಕರಂಜಿ,ಬಂಡೆಪ್ಪಾ ಕೋಟೆ,ಗಣೇಶ ಭೋಸ್ಲೆ,ನೀಲಕಂಠ ಉಳಾಗಡ್ಡಿ ಶ್ರೀಕಾಂತ ಮೋದಿ,ಪ್ರಭುಶೆಟ್ಟಿ ಮುಳ್ಗೆ, ಸಂಜು ಪಾಟೀಲ್,ನಾಗರಾಜ ಕರ್ಪೂರ್, ರಮೇಶ ಬೀರಾದರ್,ಶೇಣ್ಮುಖ ಬೀರಾದರ್, ವಿಶ್ವನಾಥ, ಅಶೋಕ ರೆಡ್ಡಿ, ಸೇರಿದಂತೆ ಬಡಾವಣೆಯ ನುರಾರು ನಿವಾಸಿಗಳು ಉಪಸ್ಥರಿದ್ದರು.

# ರಾಜ್ಯ ಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ಭಾಲ್ಕಿ ಕ್ರೀಡಾಪಟುಗಳ ಮೆರುಗು ಎರಡು ಬೆಳ್ಳಿ ಪದಕ ಗೆದ್ದು ತಾಲೂಕಿನ ಕೀರ್ತಿ ಹೆಚ್ಚಿಸಿದ ನೌಕರರು

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ಬೆಂಗಳೂರು ನಗರದ ಕಂಠೀರವ ಕ್ರೀಡಾಂಗಣದಲ್ಲಿ ನಡೆದ 2025–26ನೇ ಸಾಲಿನ ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಲ್ಕಿ ತಾಲೂಕಿನ ಕ್ರೀಡಾಪಟುಗಳು ಕುಸ್ತಿ ವಿಭಾಗದಲ್ಲಿ ಗಮನಾರ್ಹ ಸಾಧನೆ ಮಾಡಿ ತಾಲೂಕಿನ ಹೆಮ್ಮೆ ಹೆಚ್ಚಿಸಿದ್ದಾರೆ.ತಾಲೂಕಿನ ಶಿಕ್ಷಣ ಇಲಾಖೆಯ ಸಿ.ಆರ್.ಪಿ ಆಗಿರುವ ಚಂದ್ರಕಾಂತ ತಳವಾಡೆ (ಡೋಣಗಾಪುರ) ಅವರು 61 ಕೆಜಿ ಫ್ರೀ ಸ್ಟೈಲ್ ಕುಸ್ತಿ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದು ಬೆಳ್ಳಿ ಪದಕ ತಮ್ಮದಾಗಿಸಿಕೊಂಡಿದ್ದಾರೆ.ಇನ್ನೊಂದೆಡೆ, ಭಾಟಸಾಂಗವಿ ಸಿ.ಆರ್.ಪಿ ಪೂರ್ಣಿಮಾ ಪಾಟೀಲ ಅವರು 57 ಕೆಜಿ ಫ್ರೀ ಸ್ಟೈಲ್ ಕುಸ್ತಿ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದು ಪ್ರಶಂಸೆಗೆ ಪಾತ್ರರಾಗಿದ್ದಾರೆ.

ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ತಾಲೂಕಿನ ಕ್ರೀಡಾಪಟುಗಳು ತೋರಿದ ಸಾಧನೆಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಭಾಲ್ಕಿ ತಾಲೂಕು ಘಟಕ ಹರ್ಷ ವ್ಯಕ್ತಪಡಿಸಿದೆ.ಸಂಘದ ತಾಲೂಕು ಅಧ್ಯಕ್ಷ ಚಂದ್ರಶೇಖರ ಬನ್ನಳೆ, ಕಾರ್ಯದರ್ಶಿ ರಾಜಪ್ಪ ಪಾಟೀಲ, ಖಜಾಂಚಿ ಸುನಿಲಕುಮಾರ ಬಿರಾದಾರ, ರಾಜ್ಯ ಪರಿಷತ್ ಸದಸ್ಯ ಬಸವರಾಜ ಭಂಗಾರೆ ಸೇರಿದಂತೆ ಪದಾಧಿಕಾರಿಗಳು ಹಾಗೂ ನೌಕರರು ವಿಜೇತ ಕ್ರೀಡಾಪಟುಗಳನ್ನು ಅಭಿನಂದಿಸಿ, ಮುಂದಿನ ದಿನಗಳಲ್ಲಿ ರಾಷ್ಟ್ರ ಮಟ್ಟದಲ್ಲಿಯೂ ಸಾಧನೆ ಮಾಡುವಂತೆ ಶುಭ ಹಾರೈಸಿದ್ದಾರೆ.

## ಭಾಲ್ಕಿ ಪುರಸಭೆ ಮುಖ್ಯಾಧಿಕಾರಿಗೆ ಪತ್ರ: ಮೂಲಭೂತ ಸೌಕರ್ಯಕ್ಕಾಗಿ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಪಟ್ಟಣದ ಉಪನ್ಯಾಸಕರ ಬಡಾವಣೆಯಲ್ಲಿರುವ ಗುರು ಕಾಲೋನಿಗೆ ಮೂಲಭೂತ ಸೌಕರ್ಯ ಒದಗಿಸಲು ಆಗ್ರಹಿಸಿ ಭಾಲ್ಕಿ ಪಟ್ಟಣದ ನಿವಾಸಿ ಆಕಾಶ ಕಲ್ಯಾಣೆ ಇಂಜಿನೀಯರ್ ಅವರು ಪುರಸಭೆ ಮುಖ್ಯಾಧಿಕಾರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಲೆಕ್ಚರರ್ ಕಾಲೋನಿ ಬಹು ಜನರು ವಾಸಿಸುವ ವಸತಿ ಬಡಾವಣೆಯಾಗಿದೆ. ಆದರೆ ಇಲ್ಲಿರುವ ಗುರು ಕಾಲೋನಿಯಲ್ಲಿ ವಿದ್ಯುತ್ ಕಂಬ ಅಳವಡಿಸಿ ಬೆಳಕಿನ ವ್ಯವಸ್ಥೆ ಮಾಡಬೇಕು.ಈ ಓಣಿಗಳಲ್ಲಿ ಬೀದಿ ವಿದ್ಯುತ್ ದೀಪ ಇಲ್ಲದ ಕಾರಣ ರಾತ್ರಿ ಸಾರ್ವಜನಿಕರು ತಿರುಗಾಡಲು ಭಯಭೀತರಾಗಿದ್ದಾರೆ.ವಿದ್ಯುತ ದೀಪ ಇಲ್ಲದ ಕಾರಣ ಹಾವು,ಚೇಳುಗಳ ಹಾವಳಿ ಹೆಚ್ಚಾಗಿದೆ.ಅಲ್ಲದೆ ಕಳ್ಳ ಕಾಕರ ಭೀತಿ



ಹೆಚ್ಚಾಗಿರುವುದರಿಂದ ಸಾರ್ವಜನಿಕರು ಆತಂಕದಲ್ಲಿ ಕಾಲ ಕಳೆಯುವಂತಾಗಿದೆ. ಅಲ್ಲದೆ ಕೆಲವು ಕಡೆ ಒಳಚರಂಡಿ (ಡ್ರೇನೇಜ್) ನಿರ್ಮಿಸಿದ್ದಾರೆ.ಚರಂಡಿ ಪಕ್ಕದಲ್ಲಿ ಸುಮಾರು 5–6 ಅಡಿ ಆಳವಾದ ತಗ್ಗಿರುವುರಿಂದ ವಾಹನ ಸವಾರರಿಗೆ ತೊಂದರೆಯಾಗುತ್ತಿದೆ. ಚರಂಡಿ ಪಕ್ಕದಲ್ಲಿರುವ ಶೋಲ್ಡರ್ ಭರ್ತಿ ಮಾಡಿ ವಾಹನ ಸವಾರರಿಗೆ ಅನುಕೂಲ ಮಾಡಿಕೊಡಬೇಕು.

ಈ ಕುರಿತು ಪುರಸಭೆ ಮುಖ್ಯಾಧಿಕಾರಿಗೆ ಹಲವು ಬಾರಿ ಮನವಿ ಮಾಡಿದರೂ ಕ್ಯಾರೆ ಎನ್ನುತ್ತಿಲ್ಲ ಎಂದು ಬೇಸರ ವ್ಯಕ್ತ ಪಡಿಸಿದ್ದಾರೆ.ಈಗಲಾದರೂ ಸಂಬಂಧಪಟ್ಟವರು ಇತ್ತ ಕಡೆ ಮುಖ ಮಾಡಿ ಅಗತ್ಯ ಸೌಲಭ್ಯ ಒದಗಿಸಬೇಕು ಎಂದು ಪತ್ರದ ಮೂಲಕ ಮನವಿ ಮಾಡಿದ್ದಾರೆ.

# ಅಕ್ಷರದ ಬೆಳಕಿನಲ್ಲಿ ಅಜ್ಞಾನದ ಕತ್ತಲೆ ಓಡಲಿ: ವೀರಪ್ಪ ಕನ್ನಳ್ಳಿ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

:ಅಕ್ಷರದ ಬೆಳಕಿನಲ್ಲಿ ಅಜ್ಞಾನದ ಕತ್ತಲೆ ಓಡಲಿ ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ವೀರಪ್ಪ ಕನ್ನಳ್ಳಿ ರವರು ಯಾದಗಿರಿ ತಾಲ್ಲೂಕು ಮಟ್ಟದ ಪಠ್ಯಪುಸ್ತಕ ವಿತರಣೆಗೆ ಚಾಲನೆ ನೀಡಿ ಮಾತನಾಡಿದರು. ತೆರೆದ ಪುಸ್ತಕವೊಂದು ಹೊಸ ಜಗತ್ತಿನ ಹಾದಿ ಅಕ್ಷರದ ಬೆಳಕಿನಲ್ಲಿ ಅಜ್ಞಾನದ ಕತ್ತಲೆಯ ದೂಡಿ ಬಾಲ್ಯದ ಕೈಗಳಿಗೆ ಸೇರಿದಾಗ ಜ್ಞಾನದ ಈ ಬುತ್ತಿ ಬೆಳಗುವುದು ನಾಡಿನಲಿ ಪ್ರಗತಿಯ ಹೊಸ ಜ್ಯೋತಿ ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷದ ಹಿನ್ನೆಲೆಯಲ್ಲಿ ಯಾದಗಿರಿ ತಾಲ್ಲೂಕಿನ ಪ್ರತಿಯೊಂದು ಶಾಲೆಯಲ್ಲೂ ಜ್ಞಾನದ ಬೆಳಕನ್ನು ಪಸರಿಸುವ ಮಹತ್ವದ ಅಭಿಯಾನಕ್ಕೆ ಅಧಿಕೃತ ಚಾಲನೆ ದೊರೆತಿದೆ. ಯಾದಗಿರಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ವತಿಯಿಂದ ಇಲ್ಲಿನ ಸರ್ಕಾರಿ ಮಾದರಿ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ತಾಲ್ಲೂಕು ಮಟ್ಟದ ಪಠ್ಯಪುಸ್ತಕ ವಿತರಣಾ ಕಾರ್ಯಕ್ರಮಕ್ಕೆ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ವೀರಪ್ಪ ಕನ್ನಳ್ಳಿಯವರು ಪಠ್ಯಪುಸ್ತಕದ ಜ್ಞಾನ ದೀವಿಗೆಯನ್ನು ಬೆಳಗಿಸುವ ಮೂಲಕ ಅಧಿಕೃತವಾಗಿ ಚಾಲನೆ ನೀಡಿದರು.

ಪ್ರತಿ ಮಗುವಿಗೂ ಸಕಾಲದಲ್ಲಿ ಜ್ಞಾನದ ಬೆಳಕು ತಲುಪಲಿ

ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು ಪುಸ್ತಕಗಳು ಮಕ್ಕಳ ಭವಿಷ್ಯವನ್ನು ಹೇಗೆ ರೂಪಿಸುತ್ತವೆ ಎಂಬುದನ್ನು ಈ ಅರ್ಥಪೂರ್ಣ ಸಾಲುಗಳ ಮೂಲಕ ವರ್ಣಿಸಿದರು, ಪುಸ್ತಕದ ಪುಟ ಪುಟದಲ್ಲೂ ಅಡಗಿದೆ ಬದುಕಿನ ಮೌಲ್ಯ ಶಿಕ್ಷಣವೊಂದೇ


ಜಗದಲಿ ಎಲ್ಲಕ್ಕಿಂತಲೂ ಅಮೂಲ್ಯ ಕೊನೆಯ ಮಗುವಿನ ಕೈಗೂ ತಲುಪಲಿ ಈ ಅಕ್ಷರದ

ದೀವಿಗೆ ಆಗಲೇ ಸಾರ್ಥಕವಾಗುವುದು ನವ ಸಮಾಜದ ನಿರ್ಮಿತಿಗೆ ಪಠ್ಯಪುಸ್ತಕಗಳು ಕೇವಲ ಅಕ್ಷರಗಳ ಮೂಟೆಗಳಲ್ಲ ಅವು ಮಕ್ಕಳ ಬದುಕನ್ನು ರೂಪಿಸುವ ಜ್ಞಾನದ ದೀವಿಗೆಗಳು. ತಾಲ್ಲೂಕಿನ ಪ್ರತಿಯೊಂದು ಶಾಲೆಯ ಕೊನೆಯ ವಿದ್ಯಾರ್ಥಿಗೂ ಈ ಜ್ಞಾನದ ಬೆಳಕು ಸಕಾಲದಲ್ಲಿ ತಲುಪಬೇಕು. ಶಾಲೆಗಳು ಆರಂಭವಾಗುತ್ತಿದ್ದಂತೆಯೇ ವಿದ್ಯಾರ್ಥಿಗಳಿಗೆ ಪುಸ್ತಕಗಳು ಕೈ ಸೇರುವದರಿಂದ. ಅವರ ಕಲಿಕಾ ಉತ್ಸಾಹ ಇಮ್ಮಡಿಯಾಗುತ್ತದೆ" ಎಂದು ಅವರು ತಿಳಿಸಿದರು.ಶಿಕ್ಷಣ ಇಲಾಖೆಯ ಅಧಿಕಾರಿಗಳು ಮತ್ತು ವಿವಿಧ ಸಂಘಟನೆಗಳ ಪದಾಧಿಕಾರಿಗಳ ಒಕ್ಕೂಟದೊಂದಿಗೆ ಈ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಜರುಗಿತು. ಈ ವೇಳೆಯಲ್ಲಿ ಪಠ್ಯಪುಸ್ತಕದ ತಾಲ್ಲೂಕು ನೋಡಲಾಧಿಕಾರಿ ಚಾಂದಸಾಬ್ ಚೌಕಿ, ಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷ ಅಶೋಕ್ ಕೆಂಬಾವಿ, ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ಸಾಯಪ್ಪ, ಸರ್ಕಾರಿ ನೌಕರರ ಸಂಘದ ನಿರ್ದೇಶಕ ಬಸನಗೌಡ ಪಾಟೀಲ, ಯಾದಗಿರಿ ವಲಯ ಇಅಔ ಕಿಸಾನ್ ಪವಾರ್, ಯರಗೋಳ ವಲಯ ಇಅಔ ದೇವೇಂದ್ರಪ್ಪ ಈಟೆ, ಯಾದಗಿರಿ ವಲಯ ಃಖಿಕ ವೆಂಕಟರೆಡ್ಡಿ, ಮಲ್ಹಾರ ಅಖಿಕ ಯಲ್ಲಪ್ಪ, ಪ್ರೌಢಶಾಲಾ ಶಿಕ್ಷಕರ ಸಂಘದ ತಾಲೂಕ ಅಧ್ಯಕ್ಷ ಶರಣ್ ಗೌಡ, ಉಕಖಿ ಶಿಕ್ಷಕರ ಸಂಘದ ತಾಲ್ಲೂಕು ಅಧ್ಯಕ್ಷ ಚನ್ನಬಸಪ್ಪ ಹಾಗೂ ತಾಲ್ಲೂಕಿನ ಎಲ್ಲಾ ಸಮೂಹ ಸಂಪನ್ಮೂಲ ವ್ಯಕ್ತಿಗಳು (CRPಗಳು) ಶಾಲೆಯ ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ನೂತನ ಜಿಲ್ಲಾಧಿಕಾರಿಗೆ ನಾಟೀಕಾರ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಜಿಲ್ಲೆಯ ನೂತನ ಜಿಲ್ಲಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿರುವ ಜಿಲ್ಲಾಧಿಕಾರಿ ರಾಹುಲ್ ಪಾಂಡ್ವೆ ತುಕಾರಾಂ ಅವರನ್ನು ಕರ್ನಾಟಕ ರಾಜ್ಯ ಸರ್ಕಾರಿ ಎಸ್.ಸಿ/ಎಸ್.ಟಿ ನೌಕರರ ಸಮನ್ವಯ ಸಮಿತಿಯ ಪದಾಧಿಕಾರಿಗಳು ಭೇಟಿ ಮಾಡಿ ಗೌರವಿಸಿದರು. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಈ ಸೌಜನ್ಯಯುತ ಭೇಟಿಯ ಸಂದರ್ಭದಲ್ಲಿ ಸಮಿತಿಯ ಕಲ್ಯಾಣ ಕರ್ನಾಟಕ ವಿಭಾಗೀಯ ಉಪಾಧ್ಯಕ್ಷರು ಹಾಗೂ ಹಾಗೂ ಯಾದಗಿರಿ ಯಾದಗಿರಿ ಜಿಲ್ಲಾಧ್ಯಕ್ಷರಾದ ಆರ್.ಎಂ.ನಾಟೀಕಾರ್ ಮತ್ತು ಜಿಲ್ಲಾ ಉಪಾಧ್ಯಕ್ಷರಾದ ಚಂದ್ರಕಾಂತ ಸಂಗೋಳಿ ಅವರು ನೂತನ ಜಿಲ್ಲಾಧಿಕಾರಿಗಳಿಗೆ ಶಾಲು ಹೊದಿಸಿ, ಪುಷ್ಪಗುಚ್ಛ ನೀಡಿ ಆತ್ಮೀಯವಾಗಿ ಸನ್ಮಾನಿಸಿ, ಜಿಲ್ಲೆಯ ಪ್ರಗತಿ ಹಾಗೂ ನೌಕರರ ಹಿತರಕ್ಷಣೆಯ ಕುರಿತು ಶುಭ ಹಾರೈಸಿದರು.

## ಜೂನ್ 20ಕ್ಕೆ ಕ್ರಸ್ಟ್ ಗೇಟ್ ಚೈನ್ ಅಳವಡಿಕೆ ಕಾರ್ಯ ಪೂರ್ಣ : ಶಾಸಕ ಗವಿಯಪ್ಪ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)

ಮೇ.26:ತುಂಗಭದ್ರಾ ಜಲಾಶಯದ ಸುರಕ್ಷತೆ ಹಾಗೂ ಆಧುನೀಕರಣದ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿರುವ ಕ್ರಸ್ಟ್ ಗೇಟ್‌ಗಳಿಗೆ ಚೈನ್ ಅಳವಡಿಸುವ ಕಾರ್ಯವು ತ್ವರಿತಗತಿಯಿಂದ ಸಾಗುತ್ತಿದ್ದು, ಮುಂಬರುವ ಜೂನ್ 15 ಅಥವಾ 20ರ ಒಳಗಾಗಿ ಎಲ್ಲಾ ಗೇಟ್‌ಗಳ ಕೆಲಸ ಸಂಪೂರ್ಣವಾಗಿ ಮುಕ್ತಾಯಗೊಳ್ಳಲಿದೆ.

ಜಲಾಶಯದ ಒಟ್ಟು 33 ಗೇಟ್‌ಗಳ ಫ್ಯಾಬ್ರಿಕೇಷನ್ ಕೆಲಸ ಈಗಾಗಲೇ ಯಶಸ್ವಿಯಾಗಿ ಮುಗಿದಿದೆ. ಹಳೆಯದಾಗಿದ್ದ ಹಾಗೂ ತುಕ್ಕು ಹಿಡಿದಿದ್ದ (Rust) ಮೇಲ್ಭಾಗದ ತಾಂತ್ರಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಾಯಿಸಿ ಹೊಸದಾಗಿ ನವೀಕರಿಸಲಾಗುತ್ತಿದೆ. ಈಗಾಗಲೇ ಎರಡು ಗೇಟ್‌ಗಳಿಗೆ ಹೊಸ ಚೈನ್‌ಗಳನ್ನು ಅಳವಡಿಸಲಾಗಿದ್ದು, ಈ ಮೇ ತಿಂಗಳಾಂತ್ಯಕ್ಕೆ ಒಟ್ಟು 15 ಗೇಟ್‌ಗಳ ಚೈನ್ ಅಳವಡಿಕೆ ಕಾರ್ಯ ಪೂರ್ಣಗೊಳ್ಳಲಿದೆ ಎಂದು ಶಾಸಕ ಹೆಚ್. ಆರ್ ಗವಿಯಪ್ಪ ಹೇಳಿದರು.

ಪ್ರಸ್ತುತ 17 ಗೇಟ್‌ಗಳಿಗೆ ತಗಲುವಷ್ಟು ಚೈನ್‌ಗಳು ಸಿದ್ಧವಿದ್ದು, ಇನ್ನುಳಿದ ಗೇಟ್‌ಗಳ ಚೈನ್‌ಗಳು ಜೂನ್ ಮೊದಲ ವಾರದಲ್ಲಿ ಲಭ್ಯವಾಗಲಿವೆ. ಜಲಾಶಯದ ಒಂದೊಂದು ಗೇಟ್ ಸುಮಾರು 50 ಟನ್ ತೂಕ ಹೊಂದಿದ್ದು, ಇದಕ್ಕೆ ಅಳವಡಿಸುವ ತಲಾ 1.8 ರಿಂದ 1.9 ಟನ್ ತೂಕದ ಎರಡು ಚೈನ್‌ಗಳು ಸೇರಿದಂತೆ ಒಟ್ಟು ತೂಕ ಸುಮಾರು 55 ಟನ್ ಆಗುತ್ತದೆ. ಇಷ್ಟು ಬಲಿಷ್ಠವಾದ ವ್ಯವಸ್ಥೆಯನ್ನು ಅತ್ಯಂತ ಸುರಕ್ಷಿತವಾಗಿ ಅಳವಡಿಸಲಾಗುತ್ತಿದೆ.

ಮುಂದಿನ 40 ವರ್ಷ ಡ್ಯಾಂ ಸುರಕ್ಷಿತ:

ಮೂರು–ನಾಲ್ಕು ವರ್ಷಗಳ ಹಿಂದೆಯೇ ಜಲಾಶಯದ ಸಮಗ್ರ ಸುರಕ್ಷತಾ ಸರ್ವೆ ನಡೆಸಲಾಗಿದ್ದು, ಎಲ್ಲೆಲ್ಲಿ



ನೀರಿನ ಸೋರಿಕೆ ಇತ್ತೋ ಅಲ್ಲೆಲ್ಲಾ ಈಗಾಗಲೇ 'ಗ್ರೌಟಿಂಗ್' ಹಾಗೂ ಇಂಜೆಕ್ಟ್ ಮಾಡುವ ಮೂಲಕ ದುರಸ್ತಿಪಡಿಸಲಾಗಿದೆ. ಇದರಿಂದಾಗಿ ಮುಂದಿನ 40 ವರ್ಷಗಳ ಕಾಲ ಜಲಾಶಯಕ್ಕೆ ಯಾವುದೇ ತೊಂದರೆ ಇಲ್ಲ ಎಂದು ಟಿಬಿ ಬೋರ್ಡ್ ಅಧಿಕಾರಿಗಳು ತಾಂತ್ರಿಕ ಭರವಸೆ ನೀಡಿದ್ದಾರೆ. ಈ ಸುರಕ್ಷತಾ ವರದಿಯನ್ನು ಶೀಘ್ರದಲ್ಲೇ ಉಪಮುಖ್ಯಮಂತ್ರಿ ಹಾಗೂ ನೀರಾವರಿ ಸಚಿವರಾದ ಡಿ.ಕೆ. ಶಿವಕುಮಾರ್ ಅವರೊಂದಿಗೆ ಚರ್ಚಿಸಿ ಪರಿಶೀಲನೆ ನಡೆಸಲಾಗುವುದು.

ನವಲಿ ಪರ್ಯಾಯ ಜಲಾಶಯಕ್ಕೆ ಸಿದ್ಧತೆ:

ತುಂಗಭದ್ರಾ ಜಲಾಶಯದಲ್ಲಿ ಸದ್ಯ 30 ಟಿಎಂಸಿಯಷ್ಟು ಹೂಳು ತುಂಬಿಕೊಂಡಿರುವುದರಿಂದ ಪರ್ಯಾಯವಾಗಿ ನವಲಿ ಜಲಾಶಯ ನಿರ್ಮಾಣದ ಅಗತ್ಯತೆ ಹೆಚ್ಚಾಗಿದೆ. ಹೊಸ ಜಲಾಶಯ ನಿರ್ಮಾಣಕ್ಕೆ ಸಿಡಬ್ಲ್ಯೂಸಿ ಅನುಮತಿ ಸೇರಿದಂತೆ ಕನಿಷ್ಠ 10 ರಿಂದ 15 ವರ್ಷಗಳ ಕಾಲಾವಕಾಶ ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ ಹಾಗೂ ಆಂಧ್ರಪ್ರದೇಶದ ಕರ್ನೂಲು, ಅನಂತಪುರ ಸೇರಿದಂತೆ ಒಟ್ಟು 7–8 ಜಿಲ್ಲೆಗಳ ರೈತರ ನೀರಾವರಿ ಹಿತದೃಷ್ಟಿಯಿಂದ ಶೀಘ್ರದಲ್ಲೇ ಎಲ್ಲಾ ಶಾಸಕರನ್ನೊಳಗೊಂಡ ನಿಯೋಗದೊಂದಿಗೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ನವಲಿ ಯೋಜನೆಯ ಪ್ರಕ್ರಿಯೆ ಆರಂಭಿಸಲು ಮನವಿ ಸಲ್ಲಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಈ ವೇಳೆ ಟಿ.ಬಿ ಡ್ಯಾಂ ಕಾರ್ಯನಿರ್ವಾಹಕ ಅಧಿಕಾರಿ ಎನ್.ಚಂದ್ರಶೇಖರ್, ಎ.ಇ.ಇ ಕೆ.ಜ್ಞಾನೇಶ್ವರ, ಅಸಿಸ್ಟೆಂಟ್ ಇಂಜಿನಿಯರ್ ಕಿರಣ್ ಸೇರಿದಂತೆ ಮತ್ತಿತರರು ಇದ್ದರು.

## ಬಿಜೆಪಿಯ ಪ್ರತಿಭಟನೆ ರಾಜಕೀಯ ದುರುದ್ದೇಶದ್ದು: ಹಣಮಂತ್ರಾಯಗೌಡ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ನಗರದಲ್ಲಿ ಹಮ್ಮಿಕೊಂಡಿರುವ ಬಿಜೆಪಿಯ ಪ್ರತಿಭಟನೆಯು ರಾಜಕೀಯ ದುರುದ್ದೇಶದಿಂದ ಕೂಡಿದೆ ರಾಜ್ಯ ಸರ್ಕಾರ ಮತ್ತು ಸ್ಥಳೀಯ ಶಾಸಕರಿಂದ ಯಾದಗಿರಿ ಮತಕ್ಷೇತ್ರದಲ್ಲಿ ಅಭಿವೃದ್ಧಿ ಪರ್ವ ಆರಂಭವಾಗಿದೆಎಂದು ಕಾಂಗ್ರೆಸ್ ಯುವ ಮುಖಂಡ ಹಣಮಂತ್ರಾಯಗೌಡ ಮಾಲಿ ಪಾಟೀಲ್ ತೇಕರಾಳ ತಿಳಿಸಿದ್ದಾರೆ.ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಕೇಂದ್ರ ಸರ್ಕಾರದ ದುರಾಡಳಿತದಿಂದ ಇಡೀ ದೇಶದ ಜನತೆ ರೋಸಿ ಹೋಗಿದ್ದಾರೆ.ಎಂಬುವುದನ್ನು ಬಿಜೆಪಿ ಪಕ್ಷ ಮರೆಯಬಾರದು ಜನಸಾಮಾನ್ಯರು ಬಳಕೆ ಮಾಡುವ ಡೀಸೆಲ್ ಪೆಟ್ರೋಲ್ ಬಂಗಾರ ಹಾಗೂ ಇನ್ನಿತರ ದಿನಬಳಕೆ ವಸ್ತುಗಳ ಬೆಲೆ ಏರಿಕೆ ಮಾಡುವ ಮೂಲಕ ಕೇಂದ್ರ ಬಿಜೆಪಿ ಸರ್ಕಾರ ಬಡವರ ಜೆಬಿಗೆ ಕತ್ತರಿಯಾಕಿ ಹಗಲುದರೋಡೆಗೆ ನಿಂತಿದೆ ಬಡ ರೈತರು ಮಧ್ಯಮ ವರ್ಗದ ಜನರ ಬಗ್ಗೆ ಅಷ್ಟೊಂದು ಕಾಳಜಿ ಇದ್ದರೆ ಬಿಜೆಪಿಯವರು ಮೊದಲು ತಮ್ಮ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಲಿ ಅದನ್ನು ಬಿಟ್ಟು ರಾಜ್ಯ ಸರ್ಕಾರ ಮತ್ತು ನಮ್ಮ ಶಾಸಕರ ವಿರುದ್ಧ ಮಾಡುತ್ತಿರುವ ಆರೋಪಗಳು ಸತ್ಯಕ್ಕೆ ದೂರವಾದದ್ದು ಆಗಿವೆ ರಾಜ್ಯ ಸರ್ಕಾರ ಹಲವಾರು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಬಡವರ ಪಾಲಿಗೆ ಬೆಳಕಾಗಿವೆ ಕೇಂದ್ರ ಸರ್ಕಾರದ ಭ್ರಷ್ಟ ನೀತಿಯಿಂದ ಕೃಷಿ ಕಾರ್ಮಿಕರಿಗೆ ರಸಗೊಬ್ಬರ ಸಿಗುತ್ತಿಲ್ಲ ಡೀಸೆಲ್, ಬಂಗಾರದ ಬೆಲೆ ಗಗನಕ್ಕೇರಿದೆ ಮಧ್ಯಮ ವರ್ಗದ ಜನ ಜೀವನ ನಡೆಸಲು ಕಷ್ಟಕರವಾಗಿದೆ ರೈತರು ದಿನನಿತ್ಯ ಡೀಸೆಲ್, ಪೆಟ್ರೋಲ್, ಅಡುಗೆ ಅನಿಲ ಸಿಗದೇ ಪರದಾಡುವಂತೆ ಪರಿಸ್ಥಿತಿ ಎದುರಾಗಿದೆ ಇತ್ತೀಚಿಗೆ ನೀಟ್ ಪತ್ರಿಕೆ ಸೋರಿಕೆ ಹಗರಣವು ವಿದ್ಯಾರ್ಥಿಗಳ ಜೀವನದ ಜೊತೆ ಚೆಲ್ಲಾಟವಾಡಿದೆ ಆದರೆ ಕೇಂದ್ರ ಸರ್ಕಾರದ ತಪ್ಪುಗಳನ್ನು ಮರೆಮಾಚಲು ಈ ಪ್ರತಿಭಟನೆ ಹಮ್ಮಿಕೊಂಡಿದ್ದಾರೆ.ಇಷ್ಟು ದಿನಗಳು ಇಲ್ಲದ ಹೋರಾಟ ಈಗ ಯಾಕೆ ಎಂದು ಪ್ರಶ್ನಿಸಿದ್ದಾರೆ.ಶಾಸಕರು ಯಾದಗಿರಿ ಮತಕ್ಷೇತ್ರದ ಅಭಿವೃದ್ಧಿಗೆ ಸದಾ ಕಾಲ್ ಬದ್ಧರಾಗಿದ್ದಾರೆ. ಬಿಜೆಪಿಯವರು ರಾಜ್ಯ ಸರ್ಕಾರ ಮತ್ತು ಶಾಸಕರ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುವುದು ಸರಿಯಲ್ಲ ಡೀಸೆಲ್,ಪೆಟ್ರೋಲ್, ಅಡುಗೆ ಅನಿಲ ಬೆಲೆ ಏರಿಕೆ ನೀಟ್ ಹಗರಣ ವಿರುದ್ಧ ನಮ್ಮ ಕಾಂಗ್ರೆಸ್ ಪಕ್ಷದ ವತಿಯಿಂದ ಶೀಘ್ರದಲ್ಲಿಯೇ ಕೇಂದ್ರ ಸರ್ಕಾರದ ವಿರುದ್ಧ ಬೃಹತ್ ಹೋರಾಟ ಹಮ್ಮಿಕೊಳ್ಳುವುದಾಗಿ ಕಾಂಗ್ರೆಸ್ ಯುವ ಮುಖಂಡ ಹಣಮಂತ್ರಾಯಗೌಡ ಮಾಲಿ ಪಾಟೀಲ್ ತೇಕರಾಳ ತಿಳಿಸಿದ್ದಾರೆ

## ವಿದೇಶಿ ಉದ್ಯೋಗ ತೊರೆದು ಕೃಷಿಯಲ್ಲಿ ಸಾಧನೆ ಮಾಡಿದ ಯುವಕ

• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ಸಮೀಪದ ವಿಜಯಪುರ ಜಿಲ್ಲೆಯ ತಾಳಿಕೋಟೆ ತಾಲೂಕಿನ ಬ ಸಾಲವಾಡಗಿ ಗ್ರಾಮದ ಯುವ ಕೃಷಿಕ ಪ್ರಭುಗೌಡ ಸಾಹೇಬಗೌಡ ರಾರಡ್ಡಿ ಅವರು ವಿದೇಶಿ ಉದ್ಯೋಗ ತೊರೆದು ಕೃಷಿಯಲ್ಲಿ ಸಾಧನೆ ಮಾಡುವ ಮೂಲಕ ಗ್ರಾಮೀಣ ಯುವಕರಿಗೆ ಹೊಸ ಸ್ಫೂರ್ತಿಯಾಗಿದ್ದಾರೆ. ಇಂಜಿನಿಯರಿಂಗ್ ಪದವಿ ಪಡೆದು ದೇಶ–ವಿದೇಶಗಳಲ್ಲಿ ಸುಮಾರು 16 ವರ್ಷಗಳ ಕಾಲ ಉತ್ತಮ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದ ಅವರು, ತಮ್ಮ ಜೀವನದ ನಿಜವಾದ ಸಂತೋಷ ಕೃಷಿಯಲ್ಲಿದೆ ಎಂಬ ಅರಿವಿನಿಂದ ಸ್ವಗ್ರಾಮಕ್ಕೆ ಮರಳಿ ಮಣ್ಣಿನೊಂದಿಗೆ ಬದುಕು ಕಟ್ಟಿಕೊಂಡಿದ್ದಾರೆ.

ನಗರ ಜೀವನದ ಒತ್ತಡ, ಯಾಂತ್ರಿಕ ಬದುಕು ಮತ್ತು ಆರೋಗ್ಯ ಸಮಸ್ಯೆಗಳ ನಡುವೆ ನೆಮ್ಮದಿ ಕಳೆದುಕೊಂಡಿದ್ದ ಪ್ರಭುಗೌಡ ಅವರು, ಸ್ವಗ್ರಾಮದ ಕೃಷಿ ಭೂಮಿಯತ್ತ ಮುಖ ಮಾಡಿದರು. "ಕೃಷಿ ಎಂದರೆ ಕೇವಲ ಬದುಕಿನ ಮಾರ್ಗವಲ್ಲ, ಅದು ಪ್ರಕೃತಿಯೊಂದಿಗೆ ಮಾನವನ ಬಾಂಧವ್ಯ" ಎಂಬ ಚಿಂತನೆಯೊಂದಿಗೆ 2020ರಲ್ಲಿ ಬರಡು ಭೂಮಿಯನ್ನು ಖರೀದಿಸಿ ನೈಸರ್ಗಿಕ ಕೃಷಿ ಆರಂಭಿಸಿದರು.

ಆರಂಭದ ದಿನಗಳಲ್ಲಿ ಅನೇಕ ಸವಾಲುಗಳು ಎದುರಾದವು. ನೀರಿನ ಕೊರತೆ, ಮಣ್ಣಿನ ಫಲವತ್ತತೆ ಕುಸಿತ, ಕಾರ್ಮಿಕರ ಸಮಸ್ಯೆ ಹಾಗೂ ಗ್ರಾಮೀಣ ಪರಿಸ್ಥಿತಿಗೆ ಹೊಂದಿಕೊಳ್ಳುವ ತೊಂದರೆಗಳಿದ್ದರೂ ಹಿಂತಿರುಗದೆ ನಿರಂತರ ಪರಿಶ್ರಮ ಪಟ್ಟರು. ಡ್ರಿಪ್ ನೀರಾವರಿ, ಮಳೆ ನೀರು ಸಂಗ್ರಹಣೆ, ಸಾವಯವ ಗೊಬ್ಬರ ಬಳಕೆ ಹಾಗೂ ವೈಜ್ಞಾನಿಕ ಕೃಷಿ ವಿಧಾನಗಳನ್ನು ಅಳವಡಿಸಿಕೊಂಡು ಬರಡು ಭೂಮಿಯನ್ನು ಹಸಿರು ತೋಟವನ್ನಾಗಿ ಪರಿವರ್ತಿಸಿದರು.

ಇಂದು ಸುಮಾರು 10 ಎಕರೆ ಪ್ರದೇಶದಲ್ಲಿ ತೆಂಗು, ಮಾವು, ಚಿಕ್ಕು, ಪೇರಲ, ಬಾಳೆ, ನೆರಳೆ, ಸೀತಾಫಲ ಸೇರಿದಂತೆ ವಿವಿಧ ಹಣ್ಣುಗಳ ತೋಟ ಬೆಳೆದು ಸಮೃದ್ಧಿಯಾಗಿ ಬೆಳೆಯುತ್ತಿದೆ. ಜೊತೆಗೆ ಸಾವಿರಾರು ಮರಗಳನ್ನು ನೆಟ್ಟು ಪರಿಸರ ಸಂರಕ್ಷಣೆಯಲ್ಲಿಯೂ ವಿಶೇಷ ಆಸಕ್ತಿ ತೋರಿದ್ದಾರೆ. ತೋಟದಲ್ಲಿ ಹಸಿರು ವಾತಾವರಣ ನಿರ್ಮಾಣವಾಗಿದ್ದು ಪಕ್ಷಿಗಳು, ಜೇನು ಹುಳುಗಳು ಹಾಗೂ ಪ್ರಾಕೃತಿಕ ಜೀವ ವೈವಿಧ್ಯ ಹೆಚ್ಚಾಗಿದೆ.

ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳಿಂದ ದೂರವಿದ್ದು ಸಂಪೂರ್ಣ ಸಾವಯವ ಕೃಷಿಯನ್ನೇ ಅನುಸರಿಸುತ್ತಿದ್ದಾರೆ. ಜೀವಾಮೃತ, ಘನಜೀವಾಮೃತ, ಗೋಮೂತ್ರ ಹಾಗೂ ಎರೆಹುಳ ಗೊಬ್ಬರಗಳ ಮೂಲಕ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಿ ಉತ್ತಮ ಗುಣಮಟ್ಟದ ವಿಷರಹಿತ ಹಣ್ಣುಗಳನ್ನು ಉತ್ಪಾದಿಸುತ್ತಿದ್ದಾರೆ. ಇವರ ತೋಟದಲ್ಲಿ ಬೆಳೆದ ಹಣ್ಣುಗಳಿಗೆ ಸ್ಥಳೀಯ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇದೆ.

ಕೃಷಿಯ ಜೊತೆಗೆ ಹೈನುಗಾರಿಕೆ, ಜೇನು ಸಾಕಾಣಿಕೆ ಹಾಗೂ ಎರೆಹುಳ ಗೊಬ್ಬರ ಘಟಕಗಳನ್ನು ಆರಂಭಿಸಿ ಕೃಷಿಯನ್ನು ಸಮಗ್ರ ಮಾದರಿಯನ್ನಾಗಿ ರೂಪಿಸಿದ್ದಾರೆ. ಹಸುಗಳಿಂದ ಸಿಗುವ ಗೊಬ್ಬರ ಮತ್ತು ಗೋಮೂತ್ರವನ್ನು ಕೃಷಿಗೆ ಬಳಸುವುದರಿಂದ ವೆಚ್ಚ ಕಡಿಮೆಯಾಗಿದ್ದು ಆದಾಯ ಹೆಚ್ಚಾಗಿದೆ. ಜೇನು ಸಾಕಾಣಿಕೆಯಿಂದ ಪರಾಗಸ್ಪರ್ಶ ಹೆಚ್ಚಾಗಿ ಬೆಳೆಗಳ ಉತ್ಪಾದನೆಯೂ ಉತ್ತಮವಾಗಿದೆ.

ಪ್ರಭುಗೌಡ ರಾರಡ್ಡಿ ಅವರ ತೋಟ ಇಂದು ಅನೇಕ ರೈತರು, ಯುವಕರು ಹಾಗೂ ಕೃಷಿ ವಿದ್ಯಾರ್ಥಿಗಳಿಗೆ ಅಧ್ಯಯನ ಕೇಂದ್ರದಂತಾಗಿದೆ. ವಿವಿಧ ಜಿಲ್ಲೆಗಳಿಂದ ರೈತರು ಭೇಟಿ ನೀಡಿ ನೈಸರ್ಗಿಕ ಕೃಷಿಯ ಮಾಹಿತಿ ಪಡೆಯುತ್ತಿದ್ದಾರೆ. ಕೃಷಿಯಲ್ಲಿ ಹೊಸ



ತಂತ್ರಜ್ಞಾನ ಮತ್ತು ನೈಸರ್ಗಿಕ ಪದ್ಧತಿ ಅಳವಡಿಸಿಕೊಂಡರೆ ಕಡಿಮೆ ವೆಚ್ಚದಲ್ಲಿ ಉತ್ತಮ ಆದಾಯ ಗಳಿಸಬಹುದು ಎಂಬುದನ್ನು ತಮ್ಮ ಸಾಧನೆಯ ಮೂಲಕ ತೋರಿಸಿದ್ದಾರೆ.

"ಯುವಕರು ಉದ್ಯೋಗಕ್ಕಾಗಿ ಮಾತ್ರ ನಗರಗಳತ್ತ ಹೋಗದೆ, ಕೃಷಿಯಲ್ಲಿಯೂ ಅಪಾರ ಅವಕಾಶಗಳಿವೆ ಎಂಬುದನ್ನು ಅರಿಯಬೇಕು. ಕೃಷಿ ನಮ್ಮ ಸಂಸ್ಕೃತಿ, ನಮ್ಮ ಬದುಕಿನ ಆಧಾರ" ಎಂದು ಪ್ರಭುಗೌಡ ಅವರು ಹೇಳುತ್ತಾರೆ.

ವಿದೇಶಿ ಉದ್ಯೋಗ ತೊರೆದು ಸ್ವಗ್ರಾಮದಲ್ಲಿ ಕೃಷಿಯ ಮೂಲಕ ಯಶಸ್ಸು ಸಾಧಿಸಿರುವ ಇವರ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ಪ್ರಶಂಸೆ ವ್ಯಕ್ತವಾಗಿದ್ದು, ಯುವ ರೈತರಲ್ಲಿ ಹೊಸ ಆಶಾಭಾವನೆ ಮೂಡಿಸಿದೆ.

## ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಮೂಲ ಸೌಕರ್ಯಕ್ಕೆ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮೇ 26 : 2026–27ನೇ ಸಾಲಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುತ್ತಿರುವ ಹಿನ್ನೆಲೆ ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಬೇಕು ಎಂದು ಯಾದಗಿರಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಲವೀಶ್ ಒರಡಿಯಾ ಅವರು ತಿಳಿಸಿದ್ದಾರೆ. ಶೈಕ್ಷಣಿಕ ವರ್ಷ ಪ್ರಾರಂಭವಾಗುತ್ತಿರುವುದರಿಂದ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ ವ್ಯಾಪ್ತಿಯ ಗ್ರಾಮಗಳಲ್ಲಿ ಸರ್ಕಾರಿ ಶಾಲಾ ಕಾಲೇಜು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಈ ಕೆಳಗಿನಂತೆ ಮೂಲಭೂತ ಸೌಕರ್ಯಗಳನ್ನು ಕೂಡಲೇ ಕೈಗೊಳ್ಳುವಂತೆ ಸೂಚಿಸಿದೆ. ಶಾಲಾ ಕಾಲೇಜು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ವಿದ್ಯುತ್ ಮತ್ತು ಫ್ಯಾನ್‌ಗಳ ವ್ಯವಸ್ಥೆ ಕಲ್ಪಿಸಬೇಕು. ಶಾಲಾ ಕಾಲೇಜು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಶಾಲಾ ಕಾಲೇಜು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯ ಸ್ವಚ್ಛಗೊಳಿಸಿ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಶಾಲಾ ಕಾಲೇಜು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಸಣ್ಣ ಪುಟ್ಟ ದುರಸ್ಥಿ ಮಾಡುವುದು.

ಶಾಲಾ ಕಾಲೇಜು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಇತರೆ ತುರ್ತು ಸೌಲಭ್ಯಗಳು ಕಲ್ಪಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



## 8 ತಿಂಗಳಿಂದ ನಡೆಯದ ಕೆಡಿಪಿ ಸಭೆ:ಅಭಿವೃದ್ಧಿ ಕುಂಠಿತ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ಕಳೆದ 8 ತಿಂಗಳಿನಿಂದ ಕೆಡಿಪಿ ಸಭೆ ಕರೆಯದ ಶಾಸಕರು, ತಾಲೂಕಿನ ಅಭಿವೃದ್ಧಿ ಕುಂಠಿತಸತ್ಯ ಎಂ ಎ ಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ರವರು ವಿಷಾದ ವ್ಯಕ್ತಪಡಿಸಿದ್ದಾರೆನಂತರ ಮಾತನಾಡಿ 2025ರ ನವೆಂಬರ್ ತಿಂಗಳಿನಲ್ಲಿ ಕೆಡಿಪಿ ಸಭೆ ಕರೆದಿದ್ದು ಆನಂತರ ಕೆಡಿಸಿಪಿ ಸಭೆ ನಡೆದೇ ಇಲ್ಲ. ಇದರಿಂದಾಗಿ ತಾಲೂಕಿನ ಹಲವು ಜ್ವಲಂತ ಸಮಸ್ಯೆಗಳು ಅಧಿಕಾರಿ ಮಟ್ಟಕ್ಕೆ ತಲುಪದೇ ಇರುವುದರಿಂದ ತಾಲೂಕಿನ ಅಭಿವೃದ್ಧಿಯು ಅಧೋಗತಿಗೆ ಬಂದು ನಿಂತಿದೆ.ಜಿಲ್ಲಾ ಪಂಚಾಯಿತಿ ತಾಲೂಕು ಪಂಚಾಯಿತಿ ಚುನಾವಣೆ ನಡೆದು ಆರು ವರ್ಷಗಳೇ ಕಳೆದಿವೆ. ಪ್ರಸ್ತುತ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಸದಸ್ಯರುಗಳೇ ಇಲ್ಲ. ಗ್ರಾಮ ಪಂಚಾಯಿತಿಯ ಸದಸ್ಯರುಗಳ ಅವಧಿ ಫೆಬ್ರವರಿಗೆ ಮುಗಿದಿದ್ದು ಈಗಾಗಲೇ ಎರಡು ತಿಂಗಳಗಳೇ ಕಳೆದಿವೆ. ಹುಣಸೂರು ನಗರಸಭಾ ಸದಸ್ಯರುಗಳ ಅವಧಿ ಮುಗಿದು ಒಂದು ವರ್ಷಗಳೇ ಕಳೆದಿವೆ. ಈ ಕಾರಣದಿಂದಾಗಿ ಜನಪ್ರತಿನಿಧಿಯಾಗಿ ಕಳೆದ ಒಂದು ವರ್ಷದಿಂದ ಕೇವಲ ಶಾಸಕರು ಒಬ್ಬರೇ ಇರುವುದರಿಂದ ಶಾಸಕರಿಗೆ ಸರ್ಕಾರದಿಂದ ಪ್ರತಿ ತಿಂಗಳಿಗೆ ನಾಲ್ಕರಿಂದ ಐದು ಲಕ್ಷದವರೆಗೆ ವೇತನ ಪ್ರಯಾಣ ಭತ್ಯೆ, ಅವರ ಪಿಎ ಗಳಿಗೂ ಸಕಲ ಸವಲತ್ತು ಹಾಗೂ ತಾಲೂಕಿನಾದ್ಯಂತ ಓಡಾಡುವ ಸಂದರ್ಭದಲ್ಲಿ ಡೀಸೆಲ್ ಪೆಟ್ರೋಲ್ ವಾಹನ ಭತ್ಯೆ ಇಷ್ಟೆಲ್ಲ ವ್ಯವಸ್ಥೆಗಳಿದ್ದರೂ ಶಾಸಕರು ಗಮನಹರಿಸದೆ ಹುಣಸೂರು ತಾಲೂಕನ್ನೇ ಮರೆತಂತೆ ಕಾಣುತ್ತಿರುವುದು ದುರ್ದೈವದ ಸಂಗತಿಯಾಗಿದೆ. ಪ್ರತಿ ಮೂರು ತಿಂಗಳಿಗೊಂದು ಬಾರಿ ಕೆಡಿಪಿ ಸಭೆ ಕರೆಯ ಬೇಕಾಗಿದ್ದು ಆದರೆ ಹುಣಸೂರಿನಲ್ಲಿ ಕಳೆದ 8 ತಿಂಗಳಿನಿಂದಲೂ ಕೆಡಿಪಿ ಸಭೆ ಕರೆಯದೆ ಶಾಸಕರು ಸಂಪೂರ್ಣ ನಿರ್ಲಕ್ಷತೆ ವಹಿಸಿದ್ದಾರೆ.ತಾಲೂಕಿನಲ್ಲಿ ಪ್ರತಿ ಹಳ್ಳಿಗಳಲ್ಲೂ ಕುಡಿಯುವ ನೀರಿನ ಸಮಸ್ಯೆ ಗಂಭೀರ ಸಮಸ್ಯೆಯಾಗಿದ್ದು ಇತ್ತೀಚೆಗೆ ಬೀಳುತ್ತಿರುವ ಮಳೆ ಪ್ರಕೃತಿ ವಿಕೋಪದಿಂದಾಗಿ ಮನೆ ಹಾನಿ ಹಾಗೂ ಬೆಳೆ ಹಾನಿ ಆಗುತ್ತಿರುವುದರಿಂದ ರೈತರು ಕಂಗಾಲಾಗುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಜಲಾವೃತದಿಂದಾಗಿ ಫಸಲುಗಳು ನಷ್ಟ ಉಂಟಾಗಿದ್ದು ಶಾಸಕರು ಭೇಟಿ ನೀಡುತ್ತಿಲ್ಲ. ತಾಲೂಕಿನ 41 ಗ್ರಾಮ ಪಂಚಾಯಿತಿ ವ್ಯಾಪ್ತಿ ಹಾಗೂ ನಗರದ 32 ವಾರ್ಡುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಇದುವರೆಗೂ ಸಭೆ ಕರೆದಿಲ್ಲ.ಈ ಎಲ್ಲಾ ಸಮಸ್ಯೆಗಳ ಬಗ್ಗೆ ಕೆಡಿಪಿ ಸಭೆ ಕರೆದು ಅಧಿಕಾರಗಳ ಮಟ್ಟದಲ್ಲಿ ಚರ್ಚಿಸಬೇಕಾದ ಮಾನ್ಯ ಶಾಸಕರು ತಾಲೂಕಿನ ಅಭಿವೃದ್ಧಿಯ ಬಗ್ಗೆ ಸಂಪೂರ್ಣ ನಿರ್ಲಕ್ಷ ಧೋರಣೆ ದಾರಿ ತಾಳಿದ್ದಾರೆ.ಆದ್ದರಿಂದ ಶಾಸಕರೇ ಕೆ ಡಿ ಪಿ ಸಭೆ ಕರೆಯ ಬೇಕಾಗಿರುವುದರಿಂದ ಈ ಕೂಡಲೇ ಕೆ ಡಿ ಪಿ ಸಭೆ ಕರೆದು ತಾಲೂಕಿನಲ್ಲಿ ಆಗಬೇಕಾಗಿರುವ ಸಮಗ್ರ ಅಭಿವೃದ್ಧಿಯ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಬೇಕೆಂದು ಮಾಧ್ಯಮದ ಮುಖಾಂತರ ಒತ್ತಾಯಿಸಿದರು. ಇನ್ನು 15 ದಿನಗಳ ಒಳಗಾಗಿ ಕೆಡಿಪಿ ಸಭೆ ಕರೆಯದೆ ಇದ್ದರೆ ಹುಣಸೂರು ನಗರ ಸಭೆಯಲ್ಲಿರುವ ಶಾಸಕರ ಕಚೇರಿ ಮುಂಭಾಗದಲ್ಲಿಯೇ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಚ್ಚರಿಸಿದರು.

# ಬಿಡಿಸಿಸಿಐನ ಸೇವೆ ಶ್ಲಾಘನೀಯ: ಗಾದೆಪ್ಪ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ರಾಜ್ಯ ಸರ್ಕಾರ ಆಯೋಜಿಸಬೇಕಾಗಿರುವ ಕೃಷಿ ಮೇಳವನ್ನು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯು ಆಯೋಜಿಸಿರುವುದು ಅಭಿನಂದನೀಯ ಎಂದು ಬ ಮೇಯರ್ ಪಿ. ಗಾದೆಪ್ಪ ಹೇಳಿದ್ದಾರೆ.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೇತೃತ್ವದಲ್ಲಿ ಜಿಲ್ಲಾಡಳಿತ, ವಿವಿಧ ಇಲಾಖೆಗಳು, ಬಳ್ಳಾರಿ ಎಪಿಎಂಸಿ ದಲ್ಲಾಲಿ ವರ್ತಕರ ಸಂಘ, ಬಳ್ಳಾರಿ ಎಪಿಎಂಸಿ ವರ್ತಕರ ಸಂಘ, ಹತ್ತಿ ಬೆಳೆಗಾರರು ಮತ್ತು ರೈತ ಸಮೂಹಗಳ ಸಹಕಾರದೊಂದಿಗೆ ನಡೆದ 'ಗುಣಮಟ್ಟದ ಬೀಜ ಮತ್ತು ವೈಜ್ಞಾನಿಕ ಬಿತ್ತನೆ' ವಿಷಯದ ಕೃಷಿ ಮೇಳವನ್ನು ಇಂದು ಉದ್ಘಾಟಿಸಿ ಅವರು ಮಾತನಾಡಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಸಹಕಾರದಲ್ಲಿ 'ರಾಸಾಯನಿಕ ಮುಕ್ತ' ಹಣ್ಣುಗಳು ಮತ್ತು ತರಕಾರಿ ಮಾರಾಟಕ್ಕೆ ಮಹಾನಗರ ಪಾಲಿಕೆಯು 'ರೈತ ಸಂತೆ'ಗಳನ್ನು ಏರ್ಪಡಿಸಲು ಉತ್ಸುಕವಾಗಿದೆ. ಈ ಕುರಿತು ಶೀಘ್ರದಲ್ಲೇ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದರು.

ಬಳ್ಳಾರಿ ಶಾಸಕ ನಾರಾ ಭರತ ರೆಡ್ಡಿ ಅವರು, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಜನಪರ ಕಾಳಜಿ – ಕಳಕಳಿಯು ಗಮನಾರ್ಹ. ಈ ಸಂಸ್ಥೆಯು ಎಲ್ಲಾ ಕ್ಷೇತ್ರಗಳಲ್ಲಿ ಗಮನಾರ್ಹವಾಗಿ ಸೇವೆ ಸಲ್ಲಿಸುತ್ತಿದೆ ಎಂದರು.

ಲಿಡ್ಕರ್ ಅಧ್ಯಕ್ಷರಾದ ಮುಂಡ್ರಗಿ ನಾಗರಾಜ್ ಅವರು,

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯು ಜನಪರವಾಗಿರುವ ಸಂಸ್ಥೆಯಾಗಿದೆ. ಈ ಸಂಸ್ಥೆಯು ಹಮ್ಮಿಕೊಂಡಿರುವ ರೈತಣ್ಣ ಊಟ, ರೈತರ ವಸತಿ, ಕೌಶಲ್ಯಾಭಿವೃದ್ಧಿ ಸೆಂಟರ್ ಇನ್ನಿತರೆಗಳು ಎಲ್ಲವೂ ಅನೇಕರಿಗೆ ಅನುಕೂಲಗಳಾಗಿದ್ದು, ಶ್ಲಾಘನೀಯ ಎಂದರು.

ಜಿಲ್ಲಾ ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾಗಿರುವ ಕೆ.ಇ. ಚಿದಾನಂದಪ್ಪ ಅವರು, ರೈತರು ಮತ್ತು ಕೃಷಿ ಮುಂದಿನ ಪೀಳಿಗೆ ಗಾಗಿ ಉಳಿಯಲು ಸರ್ಕಾರ ಸ್ವಾಮಿನಾಥನ್ ವರದಿಯನ್ನು ಅನುಷ್ಠಾನ ಮಾಡಬೇಕು ಎಂದು ಹೇಳಿದರು.

ತುಂಗಭದ್ರ ರೈತ ಸಂಘದ ಅಧ್ಯಕ್ಷರಾಗಿರುವ ಡಾ. ಪುರುಷೋತ್ತಮ ಗೌಡ ಅವರು, ಶೀಘ್ರದಲ್ಲೇ ಪ್ರಾರಂಭವಾಗುವ ತುಂಗಭದ್ರ ಹೂಳಿನ ಜಾತ್ರೆ–2026ರಲ್ಲಿ ಎಲ್ಲರೂ ಸಕ್ರಿಯವಾಗಿ ಪಾಲ್ಗೊಂಡು ಮುಂದಿನ ಪೀಳಿಗೆಗಾಗಿ ಜಲಾಶಯವನ್ನು ಸಂರಕ್ಷಣೆ ಮಾಡೋಣ ಎಂದು ಮನವಿ ಮಾಡಿದರು.

ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾಗಿರುವ ಕೆ.ಎಂ. ಸೋಮಸುಂದರ್ ಅವರು,ರೈತರು ಎಂಎಸ್ಪಿ (ಕನಿಷ್ಠ ಬೆಂಬಲ ಬೆಲೆ)ಯ ವ್ಯವಸ್ಥೆಯಲ್ಲಿ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ಆದ್ಯತೆ ನೀಡಬೇಕು. ಆಧುನಿಕ ಮತ್ತು ವೈಜ್ಞಾನಿಕ – ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡು ದೃಢೀಕೃತ ಬೀಜಗಳನ್ನು ಖರೀದಿಸಿ, ಬಿತ್ತನೆ ಮಾಡಬೇಕು ಎಂದರು.

ಕೃಷಿ ವಿಜ್ಞಾನಿಗಳಾಗಿರುವ ಡಾ. ಎ.ಜಿ. ಶ್ರೀನಿವಾಸ್, ಡಾ. ರವಿಶಂಕರ್ ಜಿ. ಡಾ. ಪಾಲಯ್ಯ ಮತ್ತು ಡಾ. ಎಂ. ಭೀಮಣ್ಣ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡು, 'ಗುಣಮಟ್ಟದ ಬೀಜ ಮತ್ತು ವೈಜ್ಞಾನಿಕ ಬಿತ್ತನೆ' ವಿಷಯದ ಕುರಿತು ಉಪನ್ಯಾಸ ನೀಡಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಅವ್ವಾರು ಮಂಜುನಾಥ್ ಅವರು ಸ್ವಾಗತಿಸಿ, ಕೃಷಿ ಮೇಳವು ವರ್ಷದಿಂದ ವರ್ಷ ದೊಡ್ಡ ಪ್ರಮಾಣದಲ್ಲಿ ಬೆಳೆಯಲಿದೆ. ಮುಂದಿನ ದಿನಗಳಲ್ಲಿ ಮೂರು ದಿನಗಳ ಮೇಳವನ್ನು ಏರ್ಪಡಿಸುವ ಚಿಂತನೆ ಇದೆ ಎಂದರು.

ಡಾ. ಶ್ರೀನಿವಾಸ ರೆಡ್ಡಿ ಅವರು ಕಾರ್ಯಕ್ರಮ ನಿರೂಪಿಸಿದರು. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಕೆ.ಸಿ. ಸುರೇಶಬಾಬು ಅವರು ವಂದನಾರ್ಪಣೆ ಸಲ್ಲಿಸಿದರು.

ಕೃಷಿ ಮತ್ತು ಆಧುನಿಕ – ವೈಜ್ಞಾನಿಕತೆಯನ್ನು ಒಟ್ಟಾಗಿ ಅಳವಡಿಸಿಕೊಂಡಿರುವ ಆದರ್ಶರೈತರಾಗಿರುವ ಕೆ.ಜೆ. ಜಯರಾಂ ಮತ್ತು ವದ್ದಟ್ಟಿಯ ಗಂಟ ಪಾಪಾರಾವ್ ಅವರನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು.

ಕಲಾಕ್ಷೇತ್ರ ತಂಡ, ಅವನಿ ಗಂಗಾವತಿ, ಅಭಿಷೇಕ್ ಮತ್ತು ಸಂಗಡಿಗರು ಸಾಂಸ್ಕೃತಿಕ ನೃತ್ಯಗಳನ್ನು ಪ್ರದರ್ಶನ ಮಾಡಿದರು. ಕೃಷಿ ಮೇಳದ ಅಂಗವಾಗಿ ನಗರೆ ಶ್ರೀ ನಗರೇಶ್ವರ ದೇವಸ್ಥಾನದಿಂದ ಜೋಡೆತ್ತಿ ಬಂಡಿ, ಹಕ್ಕಿಪಿಕ್ಕಿ ತಂಡ, ಕೋಲಾಟ, ಡೊಳ್ಳು ಕುಣಿತ, ವೀರಭದ್ರ ಕುಣಿತ ಸೇರಿ ವಿವಿಧ ಕಲಾಪ್ರಕಾರಗಳ ಜಾಥಾ ಆಕರ್ಷಕವಾಗಿ ನಡೆಯಿತು.

ಬಳ್ಳಾರಿ ಜಿಲ್ಲಾ ಕಾಟನ್ ಅಸೋಸಿಯೇಷನ್ ನ ಡಿ. ತಿಪ್ಪೇಸ್ವಾಮಿ, ಕರ್ನಾಟಕ ರಾಜ್ಯ ಕೃಷಿ ಪರಿಕರಗಳ ಮಾರಾಟಗಾರರ ಸಂಘದ ಜಿಲ್ಲಾ ಘಟದ ಹಚ್. ತಿಮ್ಮನಗೌಡ, ರಾಜ್ಯ ಸಂಚಾಲಕ ಗಣಪಾಲ್ ಐನಾಥರೆಡ್ಡಿ, ಬಳ್ಳಾರಿ ಎಪಿಎಂಸಿ ವರ್ತಕರ ಸಂಘದ ಟಿ. ಚಿದಾನಂದಪ್ಪ, ಅಗ್ರಿ ಎಂಪ್ಲಾಯೀಸ್ ಅಸೋಸಿಯೇಷನ್ ನ ಕೆ.ಟಿ. ಚೌಹ್ವಾಣ್, ಬಳ್ಳಾರಿ ದಲ್ಲಾಲಿ ವರ್ತಕರ ಸಂಘ, ಬಿಡಿಸಿಸಿ&ಐನ ಮಾಜಿ ಅಧ್ಯಕ್ಷರುಗಳಾದ ಸಿ. ಶ್ರೀನಿವಾಸರಾವ್, ಬಿ. ಮಹಾರುದ್ರಗೌಡ, ಹಿರಿಯ ಉಪಾಧ್ಯಕ್ಷರಾಗಿರುವ ಎಸ್. ದೊಡ್ಡನಗೌಡ, ಉಪಾಧ್ಯಕ್ಷರಾದ ಸೊಂತ ಗಿರಿಧರ, ಪಿ. ಪಾಲಣ್ಣ, ಜಂಟಿ ಕಾರ್ಯದರ್ಶಿಗಳಾದ ಡಾ. ಮರ್ಚೆಡ್ ಮಲ್ಲಿಕಾರ್ಜುನ ಗೌಡ, ವಿ. ರಾಮಚಂದ್ರ, ಖಜಾಂಚಿಗಳಾದ ಸಿ.ಎಸ್. ಸತ್ಯನಾರಾಯಣ, ಕಾರ್ಯಕಾರಿ ಸಮಿತಿ ಸದಸ್ಯರು ವಿವಿಧ ಕಮಿಟಿಗಳ ಚೇರ್ಮನ್ ಗಳು, ವಿಶೇಷ ಆಹ್ವಾನಿತರು, ವಿಶೇಷ ಸಮನ್ವಯ ಸಮಿತಿ ಸದಸ್ಯರು ಹಾಗೂ ರೈತ ಸಮೂಹ ಪಾಲ್ಗೊಂಡಿದ್ದರು.

# ಯಶಸ್ವಿಯಾಗಿ ಮುಕ್ತಾಯಗೊಂಡ ಬೇಸಿಗೆ ಶಿಬಿರ ಕಾರ್ಯಕ್ರಮ



• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು**

ಮೇ.26: ಬೆಂಗಳೂರಿನ ರಾಜ್ಯ ಬಾಲ ಭವನ ಸೊಸೈಟಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಯಚೂರು, ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಬಾಲ ಭವನ ರಾಯಚೂರು ಇವರ ಸಹಯೋಗದಲ್ಲಿ ಹಮ್ಮಿಕೊಂಡ ಜಿಲ್ಲಾ ಮಟ್ಟದ ಬೇಸಿಗೆ ಶಿಬಿರ ಕಾರ್ಯಕ್ರಮದ ಸಮಾರೋಪ ಸಮಾರಂಭಯು ರಾಯಚೂರು ತಾಲೂಕಿನ ಕಲವಲದೊಡ್ಡಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ ಯಶಸ್ವಿಯಾಗಿ ನಡೆಯಿತು.

ಕಲವಲದೊಡ್ಡಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಹನುಮಂತು ಕೊಲೇಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.ಮುಖ್ಯ ಅತಿಥಿಗಳಾಗಿ ಎಸ್.ಡಿ.ಎಂ.ಸಿ ಉಪಾಧ್ಯಕ್ಷರಾದ ಮೌನೇಶ್, ಗ್ರಾಮ ಪಂಚಾಯತಿ ಸದಸ್ಯ ಅಂಜಿನಯ್ಯ ಕಲವಲದೊಡ್ಡಿ, ಮಂಗಳ ನಾಯಕ ಗಂಡ ಸುರೇಶ್, ಗಿರಿಧರ ರೆಡ್ಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಂಡರ್ ತಜ್ಞರಾದ ಗಿರಿಜವ್ವ ಅಕ್ಕಿ, ಜಿಲ್ಲಾ ಬಾಲ ಭವನ ಕಾರ್ಯಕ್ರಮದ ಸಂಯೋಜಕಿ ದೀಪಾ, ಬಾಲ ಭವನ ಕಚೇರಿ ಸಹಾಯಕಿ ತಾರಮ್ಮ, ಪೋಷಣ್ ಅಭಿಯಾನದ ಸಹಾಯಕ ಅಮರೇಶ್, ಶಿಕ್ಷಣ ಪ್ರೇಮಿ ಬದ್ರಿ ಜಗನ್ನಾಥ ಕಲವಲದೊಡ್ಡಿ, ಸಂಪನ್ಮೂಲ ವ್ಯಕ್ತಿಗಳಾದ ಮಹಾದೇವಪ್ಪ, ಶಶಿಧರ, ಬುಡ್ಡಣ್ಣ, ಬಾಬು, ಇಂದಿರಮ್ಮ, ಅಂಗನವಾಡಿ ಕಾರ್ಯಕರ್ತೆಯರಾದ ಅಂಬಮ್ಮ, ಶಂಕರಮ್ಮ ಅವರು ಉಪಸ್ಥಿತರಿದ್ದರು.ನಂತರ ಗಿರಿಜವ್ವ ಅಕ್ಕಿ ಇವರು ಬೇಸಿಗೆ ಶಿಬಿರದ ಕುರಿತು ಮಕ್ಕಳ ಪಠ್ಯೇತರ ಚಟುವಟಿಕೆಗಳ ಬಗ್ಗೆ ಆಸಕ್ತಿ ತೋರಿಸಬೇಕೆಂದು ತಿಳಿಸಿದರು. ಕಾರ್ಯಕ್ರಮ ಮಕ್ಕಳಿಗೆ ಸಂತಸ ತಂದಿದೆ ಎಂದು ಹೇಳಿದರು.ಬೇಸಿಗೆ ಶಿಬಿರಕ್ಕೆ ಆಗಮಿಸಿದ ಪಾಲಕರು ತಮ್ಮ ಮಕ್ಕಳು ಬೇಸಿಗೆ ಶಿಬಿರದಲ್ಲಿ ಮಾಡಿದಂತಹಕರ ಕುಶಲೆ, ಮೆಹಂದಿ, ಚಿತ್ರಕಲೆ, ಸಾಮೂಹಿಕ ನೃತ್ಯ ಮತ್ತು ಯೋಗವನ್ನು ವೀಕ್ಷಿಸಿ ಸಂತಸಪಟ್ಟರು.ಕಾರ್ಯಕ್ರಮದ ನಿರೂಪಣೆಯನ್ನು ಕಾರ್ಯಕ್ರಮ ಸಂಯೋಜಕಿ ದೀಪಾ ಅವರು ಮಾಡಿದರು.

# ನಿವೇಶನ ರಹಿತರಿಗೆ ನಿವೇಶನ ನೀಡುವುದಾಗಿ ವಂಚಿಸಿರುವವರ ವಿರುದ್ಧ ಕ್ರಮಕ್ಕೆ ಆಗ್ರಹ

• **ಮಲ್ಲಮ್ಮ ನುಡಿ ವಾರ್ತೆಸಂಡೂರು**



ಸಂಡೂರು ತಾಲೂಕಿನ ತಾಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಾಳೂರು ಗ್ರಾಮದ ಸ.ನಂ. 250/1 ಹಾಗೂ 242/ಃ ರಲ್ಲಿ ಹುಬ್ಬಳ್ಳಿ ಮೂಲದ ಶುಜಾತ್ ಅಲಿ ಮನಿಯಾರ್ ಹಾಗೂ ನೌಶೀನ್ ಎಸ್ ಮನಿಯಾರ್ ಎಂಬ ದಂಪತಿಗಳು ಕಳೆದ ದಿನಾಂಕ 14.03.2025 ರಂದು ಸದರಿ ಗ್ರಾಮದ ಮೂಲಿಮನಿ ತಿಪ್ಪೇಸ್ವಾಮಿ ತಂದೆ ಎಂ.ದೊಡ್ಡಪ್ಪ ಎನ್ನುವವರು ಜಮೀನು ಖರೀದಿಸಿ ನಿವೇಶನ ಗಳನ್ನು ಸೃಷ್ಟಿಸಿ ಮಾರಾಟ ಮಾಡಿದ್ದರು,ಉಳಿದ ನಿವೇಶನ ಗಳನ್ನು ಮಾರಾಟ ಮಾಡದೇ ಸುಮಾರು 45 ಲಕ್ಷ ರೂಪಾಯಿ ಹಣವನ್ನು ಪಡೆದು ನಂತರ ವಂಚಿಸಿ ಪರಾರಿಯಾಗಿದ್ದಾರೆ.ಬಡವರು ತಾವು ಖರೀದಿಸಿರುವ ನಿವೇಶನಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವ ಸಂದರ್ಭದಲ್ಲಿ ಮೂಲ ಭೂ ಮಾಲೀಕರಾದ ಮೂಲಿಮನಿ ತಿಪ್ಪೇಸ್ವಾಮಿ ಅವರು ಖರೀದಿದಾರರನ್ನು ತಡೆದು ಲೇಔಟ್ ಗೆ ಬೀಗ ಹಾಕಿದ್ದಾರೆ.ಬೀಗ ಹಾಕಿ ಎಂಟು ತಿಂಗಳು ಕಳೆದಿವೆ. ಅಂದಿನಿಂದ ಎರಡು ಬಾರಿ ಮೂಲ ಭೂ ಮಾಲೀಕರಾದ ಮೂಲಿಮನಿ ತಿಪ್ಪೇಸ್ವಾಮಿ ಹತ್ತಿರ ಚರ್ಚೆ ನಡೆಸಿ ನಿವೇಶನ ಗಳನ್ನು ಬಿಟ್ಟು ಕೊಡಲು ಮನವಿ ಮಾಡಿದರೂ ಬಿಟ್ಟು ಕೊಡದೇ ಹೆಚ್ಚುವರಿಯಾಗಿ 18 ಲಕ್ಷ ರೂಪಾಯಿ ಬೇಡಿಕೆ ಇಟ್ಟಿದ್ದಾರೆ ಈಗಾಗಲೇ ಲೇಔಟ್ ನಿರ್ಮಾಣ ಮಾಡಿರುವವರಿಗೆ ಒಂದು ನಿವೇಶನಕ್ಕಾಗಿ 3.50 ಲಕ್ಷ ರೂಪಾಯಿ ಹಣವನ್ನು ಸಂಪೂರ್ಣವಾಗಿ ನೀಡಿದ್ದೇವೆ. ಈಗ ಹೆಚ್ಚುವರಿಯಾಗಿ 18 ಲಕ್ಷ ನೀಡಲು ಬಡ ಕುಟುಂಬಗಳಿಗೆ ಸಾಧ್ಯವಿಲ್ಲ ,ಇತ್ತ ನಿವೇಶನಗಳು ಇಲ್ಲ, ಕೊಟ್ಟ ಹಣವು ವಾಪಸ್ ಸಿಗದೇ ಅತಂತ್ರ ಸ್ಥಿತಿಯಲ್ಲಿ ಸಿಲುಕಿದ್ದಾರೆ, ಸಾಮಾನ್ಯ ಅಧಿಕಾರ ಪತ್ರವನ್ನು ಇಬ್ಬರೂ ಕರಾರು ಮಾಡಿಕೊಂಡು ಈಗ ಒಬ್ಬರಿಗೊಬ್ಬರು ಸಂಬಂಧವಿಲ್ಲದಂತೆ ನಡೆದುಕೊಂಡು ದೌರ್ಜನ್ಯ ಮಾಡುತ್ತಿದ್ದಾರೆ. ಅಮಾಯಕ ಬಡ ಕುಟುಂಬಗಳು ಕಷ್ಟ ಪಟ್ಟು ಸಾಲ ಮಾಡಿ ಖರೀದಿಸಿರುವ ನಿವೇಶನಗಳನ್ನು ನೀಡಲು ಕರ್ನಾಟಕ ಪ್ರಾಂತ ರೈತ ಸಂಘವು ಸಹಾಯಕ ಆಯುಕ್ತರಿಗೆ ಪತ್ರ ಬರೆದು ಒತ್ತಾಯಿಸಿದೆ.

# ಮುಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣೆ

• **ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ**



ಇಂದು ಗಂಗಾವತಿ ವಿಧಾನಸಭಾ ಕ್ಷೇತ್ರದ ಇರ್ಕಲ್ಲಗಡ ಹಾಗೂ ವೆಂಕಟಗಿರಿಯಲ್ಲಿ ರೈತ ಸಂಪರ್ಕ ಕೇಂದ್ರದಲ್ಲಿ 2026–27 ನೇ ಸಾಲಿನ ಮುಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಶಾಸಕರಾದ ಗಾಲಿ ಜನಾರ್ಧನ ರೆಡ್ಡಿ ಅವರು ಭಾಗವಹಿಸಿ ರೈತರಿಗೆ ವಿವಿಧ ಬೆಳೆಗಳ ಬಿತ್ತನೆ ಬೀಜಗಳನ್ನು ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಮನೋಹರ ಗೌಡ ಹೇರೂರು, ವೆಂಕಟೇಶ ಜಬ್ಬಲಗುಡ್ಡ, ಸಂಗಮೇಶ್ ಬಾದವಾಡಗಿ, ಗಂಗಾಧರ ಸ್ವಾಮಿ, ಚನ್ನವೀರಗೌಡ, ಆನಂದ್ ಗೌಡ, ವೀರಬಸಪ್ಪ ಪಟ್ಟಣ ಶೆಟ್ಟರ್, ಮಹಾಂತೇಶ್ ಕೆ ಸಂಘಟಿ, ಅಮರೇಗೌಡ, ಹನುಮೇಶ್ ಕುಷ್ಟಗಿ, ಬಸವ ಕುಮಾರ್ ಪಿ, ಗೋವಿಂದಪ್ಪ ಶೆಟ್ಟರ್, ಹನುಮಂತಪ್ಪ ಕದ್ರಳ್ಳಿ, ಪ್ರಶಾಂತ್ ಕುಲಕರ್ಣಿ, ಸೋಮಶೇಖರ್ ನಾಯ್ಕ್, ಡಾ.ಈಶ್ವರಪ್ಪ ಸಿ, ಯಮನೂರಪ್ಪ ಗೆದ್ದಿಗೆರಿ, ಬಸವರಾಜ್ ಪಿನ್ನಿ, ವೆಂಕನಗೌಡ ಮೇಟಿ, ಸುರೇಶ್ ಚೌಡಕಿ, ಸೋಮು ಕುದ್ರಿಮೋತಿ ಸೇರಿದಂತೆ ಇನ್ನಿತರ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಬಕ್ರೀದ್ ಹಿನ್ನೆಲೆ ಅಕ್ರಮ ಗೋ ಸಾಗಣೆ ತಡೆಗೆ ಆಗ್ರಹ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಜಿಲ್ಲೆಯಲ್ಲಿ ಅಕ್ರಮ ಗೋ ಸಾಗಾಟ ಹಾಗೂ ಗೋಹತ್ಯೆ ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ವಿಶ್ವ ಹಿಂದೂ ಪರಿಷದ್ ನಗರ ಅಧ್ಯಕ್ಷ ಅಶೋಕ್ ಚೌಹ್ವಾನ್ ಆಗ್ರಹಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯ ಆವರಣದಲ್ಲಿ ಸೋಮವಾರ ತಹಶಿಲ್ದಾರರ ಅವರಿಗೆ ಮನವಿ ಸಲ್ಲಿಸಿ ಅವರು ಮಾತನಾಡಿದರು.

ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ–2020 ಜಾರಿಯಲ್ಲಿದ್ದರೂ ಜಿಲ್ಲೆಯ ವಿವಿಧ ಭಾಗಗಳಲ್ಲಿ ಅಕ್ರಮ ಗೋ ಸಾಗಾಟ ಮತ್ತು ಗೋಹತ್ಯೆ ನಡೆಯುತ್ತಿದೆ ಎಂದು ಅವರು ಆರೋಪಿಸಿದರು.

ಹಿಂದೂ ಸಂಪ್ರದಾಯದಲ್ಲಿ ಗೋವನ್ನು ಪೂಜ್ಯನೀಯವಾಗಿ ಕಾಣಲಾಗುತ್ತಿದ್ದು, ಗೋಹತ್ಯೆಯಿಂದ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗುತ್ತಿದೆ. ಬರುವ ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಜಿಲ್ಲೆ ಹಾಗೂ ತಾಲೂಕು ಮಟ್ಟದಲ್ಲಿ ಅಕ್ರಮ ಗೋ ಸಾಗಾಟ ಮತ್ತು ಗೋಹತ್ಯೆ ನಡೆಯದಂತೆ ಪೊಲೀಸ್ ಇಲಾಖೆ, ಸಾರಿಗೆ ಇಲಾಖೆ ಸೇರಿದಂತೆ ಸಂಬಂಧಿತ ಇಲಾಖೆಗಳ ಮೂಲಕ ಕಟ್ಟುನಿಟ್ಟಿನ ನಿಗಾ ವಹಿಸಬೇಕು. ಪ್ರಮುಖ ಸ್ಥಳಗಳಲ್ಲಿ ಪರಿಶೀಲನಾ ತಂಡಗಳನ್ನು ನೇಮಿಸಿ, ಚೆಕ್ಪೋಸ್ಟಳನ್ನು ಸ್ಥಾಪಿಸಬೇಕು.

ಮೇ 29ರವರೆಗೆ ಗೋ ಮಾರಾಟ ಹಾಗೂ ಜಾನುವಾರು ಸಂತೆಯನ್ನು ನಿಷೇಧಿಸಿ ಆದೇಶ ಹೊರಡಿಸಬೇಕು.ಕಾನೂನು ಉಲ್ಲಂಘನೆ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಹಾಗೂ ಗೋರಕ್ಷಕರಿಗೆ ಅಗತ್ಯ ಸಹಕಾರ ನೀಡಬೇಕು ಎಂದು ಅವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಬಜರಂಗದಳ ಜಿಲ್ಲಾ ಸಂಯೋಜಕ ವಿನೋದ್ ಬಾಗಡೆ, ವಿಶ್ವ ಹಿಂದೂ ಪರಿಷದ್ ಜಿಲ್ಲಾ ಸಹಕಾರ್ಯದರ್ಶಿ ಶಂಕರ್, ಕವಿತಾ, ಸುಗುಣಾ,ದೀಪಾ, ಹೇಮಂತ್, ಅರುಣ್,ಹುಲಗಣ್ಣ,ವಿಷ್ಣು, ಅಶೋಕ, ಅನಂತ, ಸಂಕೇತ, ಜ್ಯೋತಿ ಹಾಜರಿದ್ದರು.


## Public Notice

Notice is given to the general public.Notice is hereby that I/we intend to enter into a Development Agreement /Joint Development Agreement in respect of the land property bearing Survey No. 196*/* Measuring 3-Acre, 29-Guntas at village:Dhummansur,Hobli:Humnabad,Taluka-Humnabad,District-Bidar-585330. The said Land in the name of Sri. Ramanna S/o Mallappa.as per present ROR Records presently classified as Agricutural Land and proposed to be converted for Non-Agriculture residential (commercial development purposes).

That,Any person, bank, financial institution or authority having any right, title, interest, claim, charge, Mortgage, lien, tenancy, acquisition proceedings, inheritance claim or objection whatsoever over the above Said property shall inform in person or by his representative. Objections raised on above issue after 15-days, since publication of this notice, will not be entertained at all.

That,If no objections are received within the stipulated period., it shall be presumed that no person has over the any claim of objection over the said property & the proposed development process shall proceed accordingly.

That,If any dues,disputes,objections are there the concerned person should approach to the as shown below addressee (Legal Advisor).

Date:-23-05-2026

Place: Humnabad.

Sd/-

(Legal Advisor)

Sri.Suresh B.Acharya, Advocate Humnabad

R/o H No.25/232 Gubbachchi goodu,

Near Agriculture Office Humnabad Dist.Bidar

Mobile No.7337827567,9663413652


# ನಾಟಿವೈದ್ಯ ಹನುಮಂತ ಗೌಡರಿಗೆ ಸನ್ಮಾನ



• **ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ**

ಜೀವ ವೈವಿಧ್ಯತಾ ಮಂಡಳಿ ಜೀವ ವೈವಿಧ್ಯತಾ ಪ್ರಶಸ್ತಿಯನ್ನು ಲಭಿಸಿರುವುದಕ್ಕೆ ಖ್ಯಾತ ನಾಟಿವೈದ್ಯ ಹನುಮಂತ ಬೊಮ್ಮು ಗೌಡ ಅವರ ಬೆಳಂಬಾರದ ನಿವಾಸಕ್ಕೆ ತೆರಳಿ ಹಿತೈಶಿಗಳು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಹನುಮಂತ ಗೌಡರ ತಾಯಿ ಸಣ್ಣಮ್ಮ ಗೌಡ, ನಿವೃತ್ತ ಶಿಕ್ಷಕ ಬಿ.ಎಸ್.ಗೌಡ, ಲಕ್ಷ್ಮಣ ಗೌಡ ಬೆಳಸೆ, ಪ್ರಮುಖರಾದ ಎಸ್.ಟಿ.ಗೌಡ, ಪರಮೇಶ್ವರ ಗೌಡ, ವಸಂತ ಗೌಡ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳ ಸಾಧನೆಯ ಹಿಂದೆ ಪಾಲಕರ ಬೆವರಿನ ಹನಿ ಮರೆಯಬಾರದು : ಅರವಿಂದ ನಾಯ್ಕ

• **ಮಲ್ಲಮ್ಮ ನುಡಿ ವಾರ್ತೆಗೋಕರ್ಣ**



ವಿದ್ಯಾರ್ಥಿಗಳ ಸಾಧನೆಯ ಹಿಂದೆ ಪಾಲಕರ ಬೆವರಿನ ಹನಿ ಇರುತ್ತದೆ. ಹೀಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಯು ಕೂಡ ಉತ್ತಮ ಅಂಕಗಳನ್ನು ಪಡೆಯುವುದರ ಜೊತೆಗೆ ಸಮಾಜದಲ್ಲಿ ಆದರ್ಶ ವ್ಯಕ್ತಿಯಾಗಿ ಬದುಕವಂತಾಗಬೇಕು ಎಂದು ವಕೀಲರು ಹಾಗೂ ಕರಾಟೆ ಶಿಕ್ಷಕ ಅರವಿಂದ ನಾಯ್ಕ ಹೇಳಿದರು.

ರಾಷ್ಟ್ರೀಯ ಈಡಿಗ ಮಹಾಮಂಡಳಿ ವತಿಯಿಂದ ಇಲ್ಲಿಯ ವೀರಶೈವ ಸಭಾಭವನದಲ್ಲಿ ಮಂಗಳವಾರ ಎಸ್ಎಸ್ಎಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಶಿಕ್ಷಣದ ಜೊತೆಗೆ ಸಂಸ್ಕಾರವೂ ಮುಖ್ಯವಾದದ್ದು. ವಿದ್ಯಾರ್ಥಿಗಳು ಯಾವುದೇ ವ್ಯಸನಕ್ಕೆ ಬಲಿಯಾಗದೇ ಸಮಾಜಕ್ಕೆ ಕೀರ್ತಿ ತರುವಂತಾಗಬೇಕು ಎಂದರು.

ಮಹಾಬಲೇಶ್ವರ ಅರ್ಬನ್ ಬ್ಯಾಂಕ್ ನಿರ್ದೇಶಕ ತೇಜಸ್ವಿ ನಾಯ್ಕ ಮಾತನಾಡಿ, ಶಿಕ್ಷಣ ಎಷ್ಟೇ ಪಡೆದರೂ ಸಂಸ್ಕಾರ ಇಲ್ಲದಿದ್ದರೆ ಪ್ರಯೋಜನವಿಲ್ಲ. ಹೀಗಾಗಿ ಎಲ್ಲ ವಿದ್ಯಾರ್ಥಿಗಳು ಉತ್ತಮ ಸನ್ನಡತೆಯನ್ನು ಹೊಂದಬೇಕು. ಪರೀಕ್ಷೆಗೆ ಉತ್ತಮ ಅಂಕ ಬರುವುದರ ಜೊತೆಗೆ ಪಾಲಕರು, ಗುರುಗಳನ್ನು ಮರೆಯಬಾರದು ಎಂದರು.

ಶಿಕ್ಷಕ ನಾಗರಾಜ ಹನೇಹಳ್ಳಿ ಮಾತನಾಡಿ, ಈ ಹಿಂದೆ ಶಿಕ್ಷಣ ಪಡೆಯಬೇಕಾದರೆ ಸಾಕಷ್ಟು ಕಷ್ಟಗಳನ್ನು ಎದುರಿಸಬೇಕಾಗಿತ್ತು. ಆದರೆ ಈಗ ಪಾಲಕರು ಮಕ್ಕಳಿಗೆ ಎಲ್ಲ ಸೌಲಭ್ಯವನ್ನು ಒದಗಿಸುತ್ತಿದ್ದಾರೆ ಎಂದರು. ನಿವೃತ್ತ ಉಪ ತಹಸೀಲ್ದಾರ ಎನ್.ಎಂ.ನಾಯ್ಕ ಮಾತನಾಡಿ, ಎಲ್ಲ ವಿದ್ಯಾರ್ಥಿಗಳು ಅಪ್ಪ ಅಮ್ಮನ ಪರಿಶ್ರಮದ ಬಗ್ಗೆ ಕಾಳಜಿ ಹೊಂದಬೇಕು ಎಂದರು. ಅವರು ನಿಮ್ಮ ಉಜ್ವಲ್ ಭವಿಷ್ಯಕ್ಕಾಗಿ ನಿರಂತರ ಪ್ರಯತ್ನಗಳನ್ನು ನಡೆಸುತ್ತಲೇ ಇರುತ್ತಾರೆ ಎಂದರು.

ಅಧ್ಯಕ್ಷತೆ ವಹಿಸಿದ ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಅಧ್ಯಕ್ಷ ದಾಮೋದರ ಜಿ. ನಾಯ್ಕ ಮಾತನಾಡಿ, ಕಾರ್ಯಕ್ರಮ ಸಂಘಟನೆ ಮಾಡುವುದು ಅಷ್ಟೊಂದು ಸುಲಭವಲ್ಲ. ಆದರೂ ಕೂಡ ಕಳೆದ ವರ್ಷದಿಂದ ಗೋಕರ್ಣದಲ್ಲಿ ಪ್ರತಿಭಾ ಪುರಸ್ಕಾರವನ್ನು ಹಮ್ಮಿಕೊಳ್ಳುತ್ತ ಬರಲಾಗುತ್ತದೆ ಎಂದರು.

ಎಸ್ಎಸ್ಎಲ್ಸಿ : ಯುಕ್ತಿ ನಾಗರಾಜ ನಾಯ್ಕ, ಚರಿಷ್ಮಾ ಜಯಂತ ನಾಯ್ಕ, ಧನ್ಯಾ ನಾಗರಾಜ ನಾಯ್ಕ, ಕುಶಾದ ಕುಮಾರ ನಾಯ್ಕ, ಪಿಯುಸಿಯಲ್ಲಿ ನಿಧಿ ಉದಯ ನಾಯ್ಕ, ಅನನ್ಯಾ ನಾಗೇಶ ನಾಯ್ಕ, ಕಾರ್ತಿಕ ಕುಮಾರ ನಾಯ್ಕ, ವಿಕ್ರಮ ನಾಗರಾಜ ನಾಯ್ಕ, ಕಾರ್ತಿಕ ಗೋವಿಂದ ನಾಯ್ಕ ಹಾಗೂ ಎಸ್ಎಸ್ಎಲ್ಸಿಯಲ್ಲಿ 625 ಕ್ಕೆ 624 ಅಂಕ ಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನ ಬಾಡ ಗ್ರಾಮದ ದಿಶಾಂತ ದಯಾನಂದ ನಾಯ್ಕ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.

# ಮಾದಿಗ ದಂಡೋರ ಸಮಿತಿಯ ಚಿಂತನ ಮಂಥನ ಮತ್ತು ಕುಂದು ಕೊರತೆ ಸಭೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮಾದಿಗ ದಂಡೋರ ಎಂ.ಅರ್.ಪಿ.ಎಸ್. ಜಿಲ್ಲಾ ಸಮಿತಿ ವತಿಯಿಂದ ನಡೆದ ಚಿಂತನ ಮಂಥನ ಮತ್ತು ಕುಂದು ಕೊರತೆಗಳ ಸಭೆಯನ್ನು ನಗರದ ಹಳೆಯ ಪ್ರವಾಸಿ ಮಂದಿರಲ್ಲಿ ನಡೆಯಿತು. ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷರಾದ ಗಣೇಶ ದುಪ್ಪಲ್ಲಿ, ಜಿಲ್ಲಾಧ್ಯಕ್ಷ ಕಾಶಪ್ಪ, ಖಂಡಪ್ಪ ದಾಸನ ವಿಜಯ್ ಕುಮಾರ್ ಕಡೆಚೂರು, ಭೀಮರಾಯ ಸಾತನೂರು, ಪರಶುರಾಮ ಪೂಜಾರಿ, ಚಂದ್ರು ಮುಂಡರಗಿ, ರಾಜು ಮೇತ್ರಿ ಕಡೆಚೂರು, ಅನಿಲ್ ಕುಮಾರ್ ದಾಸನಕೇರಿ, ರವಿಕುಮಾರ್, ಶರಣಪ್ಪ ವಡಿಗೇರ, ತಿಪ್ಪಣ್ಣ ಗೋಂದೆನೂರ, ವಿಲ್ಸನ್ ಹಲಗೇರಿ, ಭೀಮರಾಯ ಪೂಜಾರಿ ರಸ್ತಾಪುರ, ಶರಬಣ್ಣ ರಸ್ತಾಪುರ ಕನ್ಯಾಕುಳೂರು, ಮಲ್ಲಿಕಾರ್ಜುನ ಮಳಿಕೇರಿ, ಶಹಾಪುರ ಎಕ್ಸ್ ಪ್ರೆಸ್ ಸಂಪಾದಕ ಹೊನ್ನಪ್ಪ ನಾಟೇಕಾರ, ಸಾಯಬಣ್ಣ ಕುರೀಹಾಳ, ಭೀಮಣ್ಣ ಭಂಡಾರಿ, ಪ್ರಭು ಕುಮನೂರು, ಮಲ್ಲು, ಅರ್ಜುನ ಕುರಿಹಾಳ, ಬಸವರಾಜ, ಭೀಮುರಾಯ ಹನಸೂರು, ಅಶೋಕ ಹಾಲಗೇರ, ನಾಗಪ್ಪ ಕನಕಲ್ , ಶಾಂತಪ್ಪ ಬೆಳಗುಂದಿ, ಅಶೋಕ ಮಾದವಾರ, ರೆಡ್ಡಿ ಚಿಗನೂರು, ಬಂದು ಚಿಗನೂರು ಮತ್ತು ಸಂಘಟನೆ ಪದಾಧಿಕಾರಿಗಳು ಇದ್ದರು.

# ಬೀಜ ರಸಗೊಬ್ಬರಕ್ಕಾಗಿ ರೈತರ ಸರತಿ ಸಾಲು



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಇನ್ನೇನು ಮುಂಗಾರು ಮಳೆ ಪ್ರಾರಂಭವಾಗಿದ್ದು ಕೃಷಿ ಚಟುವಟಿಕೆಗಳು ನಿಧಾನವಾಗಿ ಆರಂಭವಾಗಲಿ ತಾಲೂಕಿನ ಅತ್ಯಂತ ಬಿತ್ತನೆ ಕಾರ್ಯಕ್ಕೆ ರಸಗೊಬ್ಬರ ಕೊರತೆ ಎದುರಾಗುವ ಭೀತಿಯಿಂದ ರೈತರು ರಸಗೊಬ್ಬರಕ್ಕಾಗಿ ಸರತಿ ಸಾಲಿನಲ್ಲಿ ನಿಂತ ದೃಶ್ಯ ನಗರದ ಕೃಷಿ ಹುಟ್ಟುವಳಿ ಸಹಕಾರ ಸಂಘದ ಮುಂದೆ ಸೋಮವಾರ ಕಂಡುಬಂದಿತು.

ಮುಂಗಾರು ಮಳೆ ಸಮಯಕ್ಕೆ ತಕ್ಕಂತೆ ಸು-ರಿಯುತ್ತಿದ್ದು ರೈತರ ಬಿತ್ತನೆ ಕಾರ್ಯ ಕೈಗೊಳ್ಳಲು ರಸಗೊಬ್ಬರದ ಅವಶ್ಯಕತೆ ಇದ್ದು ಮಾರುಕಟ್ಟೆ ಹಾಗೂ ಕೃಷಿ ಇಲಾಖೆಯಿಂದ ರಸಗೊಬ್ಬರ ಪಡೆಯಲು ವಂತಹ ಪರಿಸ್ಥಿತಿ ನಗರದಲ್ಲಿ ನಿರ್ಮಾಣಗೊಂಡಿದ್ದು ಮಳೆಯಾದರೂ ಸಹ ಸೂಕ್ತ ಸಂದರ್ಭದಲ್ಲಿ ರಸಗೊಬ್ಬರವಿಲ್ಲದೆ ಬಿತ್ತನೆ ಕಾರ್ಯ ಮುಂದೂಡುವಂತಹ ಪರಿಸ್ಥಿತಿ ನಿರ್ಮಾಣ ಗೊಳ್ಳುತ್ತಿದೆ. ರಸಗೊಬ್ಬರವನ್ನು ಅಕ್ರಮವಾಗಿ ಕಾಳು ಸಂತೆಯಲ್ಲಿ ಮಾರಾಟ ಮಾಡುವ ನಿಟ್ಟಿನಲ್ಲಿ ಕೃತಕ ಸೃಷ್ಟಿಸುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಕಳೆದ ವರ್ಷ ರಸಗೊಬ್ಬರ ಕೊರತೆಯಿಂದ ರೈತರು ಕಾದು ಕಾದು ಸುಸ್ತಾಗಿ ಕೊನೆಗೆ ಮಣ್ಣು ತಿನ್ನುವುದರ ಮೂಲಕ ತಮ್ಮ ಆಕ್ರೋಶ ಹೊರಹಾಕಿದ ಘಟನೆಯನ್ನು ಇಲ್ಲಿ ಸ್ಮರಿಸಬಹುದಾಗಿತ್ತು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಕೂಡಲೇ ಎಚ್ಚೆತ್ತುಕೊಂಡು ರೈತರಿಗೆ ಸೂಕ್ತ ಸಂದರ್ಭದಲ್ಲಿ ಅವಶ್ಯಕತೆ ರಸಗೊಬ್ಬರ ಪೂರೈಕೆ ಮಾಡುವುದರೊಂದಿಗೆ ಕೃಷಿ ಚಟುವಟಿಕೆಗೆ ಅನುಕೂಲ ಮಾಡಿಕೊಡಬೇಕು ಎಂದು ರೈತ ವರ್ಗದವರು ಆಗ್ರಹ ಪಟ್ಟಿರುತ್ತಾರೆ.

# ಕೊಪ್ಪಳ ವ್ಯಕ್ತಿ ಕಾಣೆ: ಪತ್ತೆಗೆ ಸಹಕರಿಸಲು ಮನವಿ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಕೊಪ್ಪಳದ ತೆಗ್ಗಿನಕೇರಿ ಓಣಯಾ ನಿವಾಸಿ ಆಸೀಮ್ ತಂದೆ ಗೌಸ್ ಜಭೇದಾರ (26) ಎಂಬ ವ್ಯಕ್ತಿ ಕಾಣೆಯಾಗಿದ್ದು, ಪತ್ತೆಗಾಗಿ ಸಹಕರಿಸುವಂತೆ ಕೊಪ್ಪಳ ನಗರ ಪೊಲೀಸ್ ಠಾಣೆಯ ಅಧಿಕಾರಿಗಳು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.



ಈ ವ್ಯಕ್ತಿಯು 2026ರ ಜನವರಿ 25ರಂದು ಬೆಳಿಗ್ಗೆ ಸುಮಾರು 11 ಗಂಟೆಗೆ ಎಡರು ದಿನ ಬಿಸನೂರು ಗ್ರಾಮದಲ್ಲಿ ವಸ್ತಿ ಕೆಲಸ ಇದೆ ಹೋಗಿಬರುತ್ತೇನೆ ಎಂದು ಮನೆಯಿಂದ ಹೋಗಿದ್ದು, ಮನೆಗೆ ವಾಪಸ್ಸಾಗಿಲ್ಲ. ಮೊಬೈಲ್ ನಂಬರ್‌ಗೆ ಕರೆ ಮಾಡಿದರು ಸ್ವಿಚ್ ಆಫ್ ಅಂತ ಬಂದಿದ್ದು, ಹೊಸಪೇಟೆ, ಬಳ್ಳಾರಿ, ಗಿಣಿಗೇರಿ ಹಾಗೂ ಕೊಪ್ಪಳ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಹಾಗೂ ಸಂಬಂಧಿಕರ ಮನೆಗಳಲ್ಲಿ ಹುಡುಕಾಟ ನಡೆಸಿದರೂ ಯಾವುದೇ ಸುಳಿವು ದೊರೆತಿಲ್ಲ ಎಂದು ಕಾಣೆಯಾದ ವ್ಯಕ್ತಿಯ ಹೆಂಡತಿ ಕೊಪ್ಪಳ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಕೊಪ್ಪಳ ನಗರ ಪೊಲೀಸ್ ಠಾಣೆಯ ಪೊಲೀಸರು ಗುನ್ನೆ ಸಂಖ್ಯೆ 51/2026ರಡಿ ಮನುಷ್ಯ ಕಾಣೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

*ಕಾಣೆಯಾದ ವ್ಯಕ್ತಿಯ ಚಹರೆ:* ಆಸೀಮ್ ತಂದೆ ಗೌಸ್ ಜಭೇದಾರ, ವಯಸ್ಸು 26 ವರ್ಷ, 5.5 ಅಡಿ ಎತ್ತರ, ಕೆಂಪು ಮುಖಬಣ್ಣ, ಸಾಧಾರಣ ಮೈಕಟ್ಟು, ತಲೆಯಲ್ಲಿ ಕಪ್ಪು ಕೂದಲು, ಕುರುಷಲು ದಾಡಿ, ಕೋಲು ಮುಖ, ಹಳದಿ ಬಣ್ಣದ ತುಂಬು ತೋಳಿನ ಅಂಗಿ ಹಾಗೂ ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದು, ಅಲ್ಪಸ್ವಲ್ಪ ಕನ್ನಡ, ಹಿಂದಿ ಬಾಷೆ ಮಾತನಾಡುತ್ತಾನೆ.

ಈ ವ್ಯಕ್ತಿಯ ಬಗ್ಗೆ ಯಾವುದೇ ಮಾಹಿತಿ ದೊರೆತಲ್ಲಿ ಸಾರ್ವಜನಿಕರು ತಕ್ಷಣವೇ ಹತ್ತಿರದ ಪೊಲೀಸ್ ಠಾಣೆಗೆ ಅಥವಾ ಕೊಪ್ಪಳ ಕಂಟ್ರೋಲ್ ರೂಂ.ನಂ: 08539-230100 ಮತ್ತು 230222, ಪೊಲೀಸ ಇನ್ಸಪೆಕ್ಟರ್ ನಗರ ಪೊಲೀಸ ಠಾಣೆ ಕೊಪ್ಪಳ ಮೊ.ಸಂ: 9480803745, ಕೊಪ್ಪಳ ನಗರ ಠಾಣೆ ದೂರವಾಣಿ ಸಂ: 08539-220333 ಗೆ ಸಂಪರ್ಕಿಸುವಂತೆ ಕೊಪ್ಪಳ ನಗರ ಪೊಲೀಸ್ ಠಾಣೆಯ ಪ್ರಕಟಣೆ ತಿಳಿಸಿದೆ.

# ಮೇ 31ರಂದು ಕೊಪ್ಪಳದಲ್ಲಿ ಈಜು ಸ್ಪರ್ಧೆ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಕೊಪ್ಪಳ ಜಿಲ್ಲಾ ಕ್ರೀಡಾಂಗಣದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಸ್ವಿಮಿಂಗ್ ಕ್ಲಬ್ ಇವರ ಸಹಯೋಗದೊಂದಿಗೆ ಈಜು ಸ್ಪರ್ಧೆಯನ್ನು ಮೇ 31 ರಂದು ಮಧ್ಯಾಹ್ನ 3 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿರುವ ಜಿಲ್ಲಾ ಈಜುಕೊಳದಲ್ಲಿ ಹಮ್ಮಿಕೊಳ್ಳಲಾಗಿದೆ.

ಈಜು ಸ್ಪರ್ಧೆಯಲ್ಲಿ 8 ರಿಂದ 10 ವರ್ಷ ವಯೋಮಿತಿ, 10 ರಿಂದ 12 ವರ್ಷ ವಯೋಮಿತಿ ಹಾಗೂ 12 ರಿಂದ 14ವರ್ಷ ವಯೋಮಿತಿ ಒಳಗಿನ ಬಾಲಕ ಮತ್ತು ಬಾಲಕೀಯರಿಗೆ ಅವಕಾಶವಿದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಈಜು ಸಮವಸ್ತ್ರ (ಸ್ವಿಮ್ ಸೂಟ್) ಹಾಗೂ ಸ್ವಿಮ್ ಗಾಗಲ್ ಮತ್ತು ಹೆಡ್‌ಕ್ಯಾಪ್ ಕಡ್ಡಾಯವಾಗಿದೆ. ಇದಲ್ಲದೇ ಎರಡು ಭಾವಚಿತ್ರ ಮತ್ತು ಆಧಾರ ಕಾರ್ಡ ಝರಾಕ್ಸ ಪ್ರತಿಯನ್ನು ಕಡ್ಡಾಯವಾಗಿ ತರಬೇಕು. ಮೇ 30ರ ಒಳಗಾಗಿ ಕಡ್ಡಾಯವಾಗಿ ನೊಂದಣಿ ಮಾಡಿಸಬೇಕು.

ಈ ಈಜು ಸ್ಪರ್ಧೆ ಉಚಿತವಾಗಿದ್ದು, ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. ಈಜುವ ವಿಧಾನ ಫ್ರಿ ಸ್ಟೈಲ್ (Freestyle), ವಿಜೇತರಿಗೆ ಸೂಕ್ತ ಬಹುಮಾನ ನೀಡಲಾಗುವುದು.

ಈಜು ಸ್ಪರ್ಧೆ ಆಸಕ್ತರು ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ಗದಗ ರಸ್ತೆ ಕೊಪ್ಪಳ ಕಛೇರಿಗೆ ಭೇಟಿ ನೀಡಬಹುದಾಗಿದೆ ಹಾಗೂ ಮೊ.ಸಂ: 8301802801 ಅಥವಾ ಕಚೇರಿ ದೂರವಾಣಿ ಸಂಖ್ಯೆ: 08539-230121ಗೆ ಸಂಪರ್ಕಿಸಬಹುದು. ಜಿಲ್ಲೆಯ ಸಾರ್ವಜನಿಕರು ಈಜು ಸ್ಪರ್ಧೆಯ ಸದುಪಯೋಗ ಪಡಿಸಿಕೊಳ್ಳಬೇಕೆಂದು ಕೊಪ್ಪಳ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಕ್ರೀದ್ ಹಬ್ಬದ ಹಿನ್ನೆಲೆ ಪೊಲೀಸ್ ಠಾಣೆಯಲ್ಲಿ ಶಾಂತಿ ಸಭೆ : ಕಾನೂನು ಸುವ್ಯವಸ್ಥೆ ಕಾಪಾಡಲು ಪಿಎಸ್‌ಐ ಆಶಾ ರಾಠೋಡ ಕಟ್ಟುನಿಟ್ಟಿನ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ




ಬಕ್ರೀದ್ ಹಬ್ಬವನ್ನು ತಾಲ್ಲೂಕಿನಾದ್ಯಂತ ಅತ್ಯಂತ ಶಾಂತಿ, ಸೌಹಾರ್ದತೆ ಮತ್ತು ಪ್ರೀತಿ ವಿಶ್ವಾಸದಿಂದ ಆಚರಿಸುವಂತೆ ಕಮಲನಗರ ಪಟ್ಟಣದ ಪೊಲೀಸ್ ಠಾಣೆಯ ಆವರಣದಲ್ಲಿ ಇತ್ತೀಚೆಗೆ ವಿಶೇಷ ಶಾಂತಿ ಪಾಲನಾ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು.ಈ ವೇಳೆ ಪಿಎಸ್‌ಐ ಆಶಾ ರಾಠೋಡ ಅವರು, ಹಬ್ಬದ ಸಂದರ್ಭದಲ್ಲಿ ಸಾರ್ವಜನಿಕರು ಹಾಗೂ ಮುಸ್ಲಿಂ ಮುಖಂಡರು ಕಾನೂನು ಸುವ್ಯವಸ್ಥೆ ಮತ್ತು ಕೋಮು ಸೌಹಾರ್ದತೆಯನ್ನು ಕಾಪಾಡುವುದು ಅತ್ಯಂತ ಅಗತ್ಯವಾಗಿದೆ ಎಂದು ಹೇಳಿದರು. ಇಲಾಖೆಯ ನಿಯಮಗಳನ್ನು ಪ್ರತಿಯೊಬ್ಬರೂ ಕಡ್ಡಾಯವಾಗಿ ಪಾಲಿಸಬೇಕು ಮತ್ತು ಪೊಲೀಸರೊಂದಿಗೆ ಪೂರ್ಣ ಪ್ರಮಾಣದಲ್ಲಿ ಸಹಕರಿಸಬೇಕು ಎಂದು ತಿಳಿಸಿದರು.

ತಹಸೀಲ್ದಾರ ಅಮಿತ್ ಕುಮಾರ್ ಕುಲಕರ್ಣಿ ಅವರು ಮಾತನಾಡಿ,"ಯಾವುದೇ ಧರ್ಮದ ಹಬ್ಬ ಹರಿದಿನಗಳು ಸಮಾಜಕ್ಕೆ ಒಳ್ಳೆಯ ಸಂದೇಶವನ್ನು ನೀಡಬೇಕು. ಹಿರಿಯರು ಯುವಕರಿಗೆ ಸೂಕ್ತ ಮಾರ್ಗದರ್ಶನ ನೀಡಿ ಶಾಂತಿ ಕಾಪಾಡಬೇಕು" ಎಂದರು.

ಗೋಹತ್ಯೆ ನಿಷೇಧ ಪಾಲನೆ:

ಸಿಪಿಐ ಶ್ರೀಕಾಂತ್ ಅಲ್ಲಾಪುರೆ ಅವರು ಮಾತನಾಡಿ,ಬಕ್ರೀದ್ ಹಬ್ಬದ ಸಂದರ್ಭದಲ್ಲಿ ದನಕರುಗಳು ಮತ್ತು ಗೋವುಗಳ ಹತ್ಯೆಗೆ ಕಟ್ಟುನಿಟ್ಟಿನ ನಿಷೇಧವಿದ್ದು, ಸರ್ಕಾರದ ಆದೇಶವನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸಬೇಕು ಎಂದು ಸ್ಪಷ್ಟಪಡಿಸಿದರು.

ಈ ಶಾಂತಿ ಸಭೆಯಲ್ಲಿ ಮಾಜಿ ಗ್ರಾಮ ಪಂಚಾಯತ್ ಸದಸ್ಯರಾದ ಪ್ರವೀಣ್ ಕದಂ, ಅಜರ್ ಬಾಗವಾನ್, ಗೋವಿಂದರಾವ್ ತಾಂಡಳೆ, ಶಬ್ಬೀರ್ ಖುರೇಷಿ ಸೇರಿದಂತೆ ಹಲವಾರು ಮುಸ್ಲಿಂ ಮುಖಂಡರು,ಗ್ರಾಮದ ಹಿರಿಯರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.ಸಭೆಯಲ್ಲಿ ಪಾಲ್ಗೊಂಡಿದ್ದ ಮುಖಂಡರು ಹಾಗೂ ಸಾರ್ವಜನಿಕರು ಹಬ್ಬವನ್ನು ಅತ್ಯಂತ ಶಾಂತಿಯುತವಾಗಿ ಹಾಗೂ ಸೌಹಾರ್ದತೆಯಿಂದ ಆಚರಿಸುವುದಾಗಿ ಪೊಲೀಸ್ ಇಲಾಖೆಗೆ ಭರವಸೆ ನೀಡಿದರು.

> "ಹಬ್ಬದ ನೆಪದಲ್ಲಿ ಯಾವುದೇ ರೀತಿಯ ಕಾನೂನು ಬಾಹಿರ ಚಟುವಟಿಕೆಗಳು ಅಥವಾ ಸಮಾಜದ ಶಾಂತಿ ಕದಡುವ ಕೆಲಸಗಳು ಕಂಡುಬಂದಲ್ಲಿ ಸಾರ್ವಜನಿಕರು ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಬೇಕು. ಇಂತಹ ಕೃತ್ಯಗಳಲ್ಲಿ ತೊಡಗುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು."
> – ಶ್ರೀಕಾಂತ ಅಲ್ಲಾಪುರೆ, ಸಿ.ಪಿ.ಐ ಕಮಲನಗರ

# ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ: ತಪಶ್ಯಾಳ ತಂಡಕ್ಕೆ ವಿಕ್ರಮ, ಇಂದಿರಾನಗರ ತಾಂಡಾಗೆ ರನ್ನರ್-ಅಪ್ ಪ್ರಶಸ್ತಿ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ



ತಾಲೂಕಿನ ತಪಶ್ಯಾಳ ಗ್ರಾಮದ ಪಾಟೀಲ್ ಸ್ಟೇಡಿಯಂನಲ್ಲಿ ಹಮ್ಮಿಕೊಳ್ಳಲಾಗಿದ್ದ "ಭವ್ಯ ಮುಕ್ತ ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ"ಯು ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿದೆ.ಈ ರೋಮಾಂಚನಕಾರಿ ಕ್ರೀಡಾಕೂಟದಲ್ಲಿ ಆತಿಥೇಯ ತಪಶ್ಯಾಳ ತಂಡವು ಭರ್ಜರಿ ಪ್ರದರ್ಶನ ನೀಡಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರೆ, ಅತ್ಯುತ್ತಮ ಹೋರಾಟ ನೀಡಿದ ಇಂದಿರಾನಗರ ತಾಂಡಾ ತಂಡವು ರನ್ನರ್-ಅಪ್ (ದ್ವಿತೀಯ ಸ್ಥಾನ) ಪ್ರಶಸ್ತಿಗೆ ಭಾಜನವಾಯಿತು.

ಸಂಘರ್ಷ ಕ್ರಿಕೆಟ್ ಕ್ಲಬ್ ವತಿಯಿಂದ ಏಪ್ರಿಲ್ 27 ರಿಂದ ಆಯೋಜಿಸಲಾಗಿದ್ದ ಈ ಟೂರ್ನಿಯಲ್ಲಿ ಸುತ್ತಮುತ್ತಲಿನ ಹತ್ತಾರು ಪ್ರಮುಖ ತಂಡಗಳು ಭಾಗವಹಿಸಿ ಕಠಿಣ ಪೈಪೋಟಿ ನಡೆಸಿದ್ದವು.ಅಂತಿಮ ಜಿದ್ದಾಜಿದ್ದಿನ ಪಂದ್ಯದಲ್ಲಿ ತಪಶ್ಯಾಳ ತಂಡವು ತನ್ನ ಸರ್ವಾಂಗೀಣ ಪ್ರದರ್ಶನದಿಂದ ಎದುರಾಳಿ ತಂಡವನ್ನು ಮಣಿಸಿ ವಿಜಯದ ಪತಾಕೆ ಹಾರಿಸಿತು.ಆಕರ್ಷಕ ನಗದು ಬಹುಮಾನ ವಿತರಣೆ:ವಿಜೇತ ತಂಡಗಳಿಗೆ ಗಣ್ಯರ ಹಸ್ತಾಂತರದ ಮೂಲಕ ಭರ್ಜರಿ ಬಹುಮಾನಗಳನ್ನು ನೀಡಲಾಯಿತು:

ಪ್ರಥಮ ಬಹುಮಾನ: ವಿಜೇತ ತಪಶ್ಯಾಳ ತಂಡಕ್ಕೆ ಶಾಸಕರಾದ ಪ್ರಭು ಬಿ. ಚವ್ಹಾಣ್ ಅವರ ಪ್ರಾಯೋಜಕತ್ವದ ?51,000 ನಗದು ಹಾಗೂ ಆಕರ್ಷಕ ಟ್ರೋಫಿ ನೀಡಲಾಯಿತು.ದ್ವಿತೀಯ ಬಹುಮಾನ: ರನ್ನರ್-ಅಪ್ ಇಂದಿರಾನಗರ ತಾಂಡಾ ತಂಡಕ್ಕೆ ಬಿಜೆಪಿ ಜಿಲ್ಲಾ

ಉಪಾಧ್ಯಕ್ಷರಾದ ಅರಹಂತ ಸಾವಳೆ ಅವರ ಪ್ರಾಯೋಜಕತ್ವದ ?21,111 ನಗದು ಮತ್ತು ಟ್ರೋಫಿಯನ್ನು ವಿತರಿಸಲಾಯಿತು. ವೈಯಕ್ತಿಕ ಪ್ರಶಸ್ತಿಗಳು: ಸರಣಿ ಶ್ರೇಷ್ಠ (ಮ್ಯಾನ್ ಆಫ್ ದಿ ಸೀರೀಸ್), ಅತ್ಯುತ್ತಮ ಬೌಲರ್, ಅತ್ಯುತ್ತಮ ಬ್ಯಾಟ್ಸ್‌ಮನ್ ಹಾಗೂ ಪಂದ್ಯ ಶ್ರೇಷ್ಠ ಆಟಗಾರರಿಗೆ ತಲಾ ?2111/- ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು.ಪಂದ್ಯಾವಳಿಯ ಉದ್ಘಾಟನೆ ಹಾಗೂ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಅರಹಂತ ಸಾವಳೆ, ಔರಾದ್ ತಾಲೂಕು ಬಿಜೆಪಿ ಅಧ್ಯಕ್ಷ ರಾಮಶೆಟ್ಟಿ ಪನ್ನಾಳೆ, ಯುವ ಮುಖಂಡ ಪ್ರವಿಣ ಕಾರಭಾರಿ, ಉದಯ ಸೋಲಾಪುರೆ ಹಾಗೂ ಸುನಿಲ್ ಸಿಗರೆ, ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

ಯಶಸ್ವಿ ಕ್ರೀಡಾಕೂಟದ ನೇತೃತ್ವವನ್ನು ಸಂಘಟಕರಾದ ಆನಂದ ಶ್ರೀಖಂಡೆ (ಅಧ್ಯಕ್ಷರು), ಮಿಥುರ ಭೇಂಡೆ (ಉಪಾಧ್ಯಕ್ಷರು), ವಿಜಯಕುಮಾರ್ ಭೇಂಡೆ (ಸಂಚಾಲಕರು) ಹಾಗೂ ತಪಶ್ಯಾಳ ಗ್ರಾಮದ ಕ್ರೀಡಾಭಿಮಾನಿಗಳು ವಹಿಸಿದ್ದರು. ವಿಜೇತ ಮತ್ತು ರನ್ನರ್-ಅಪ್ ತಂಡದ ಆಟಗಾರರಿಗೆ ಕ್ರೀಡಾ ಪ್ರೇಮಿಗಳು ಹಾಗೂ ಗ್ರಾಮಸ್ಥರು ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ..

# 0-5 ವರ್ಷದೊಳಗಿನ ಮಕ್ಕಳು ಲಸಿಕೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಿ:ಜಿಲ್ಲಾಧಿಕಾರಿ ಮಹ್ಮದ್ ಇಕ್ರಮುಲ್ಲಾ ಶರೀಫ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಮೇ.26: ಜಿಲ್ಲೆಯಾದ್ಯಂತ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ಜೂ.28ರಂದು ನಡೆಯಲಿದೆ. ಈ ಹಿನ್ನೆಲೆಯಲ್ಲಿ 0-5 ವರ್ಷದೊಳಗಿನ ಮಕ್ಕಳು ಲಸಿಕೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಿ. 'ಹೈ ರಿಸ್ಕ್' ಪ್ರದೇಶಗಳಾದ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಹಾಗೂ ಹೆದ್ದಾರಿಗಳ ಚೆಕ್‌ಪೋಸ್ಟ್‌ಗಳ ಮೇಲೆ ತೀವ್ರ ನಿಗಾವಹಿಸಿ ಎಂದು ಜಿಲ್ಲಾಧಿಕಾರಿ ಮಹ್ಮದ್ ಇಕ್ರಮೂಲ್ಲಾ ಶರೀಫ ಸೂಚನೆ ಅಧಿಕಾರಿಗಳಿಗೆ ನೀಡಿದರು.ಮಂಗಳವಾರ ನಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಂದ ಜಾಥಾ ಕಾರ್ಯಕ್ರಮ ಆಯೋಜಿಸಬೇಕು. ಎಂದು ಹೇಳಿದರು.

28 ರಂದು ಜಿಲ್ಲಾದ್ಯಂತ ಬೂತ್‌ಗಳಲ್ಲಿ ಲಸಿಕೆ ಹಾಕಲಾಗುವುದು. ಜೂ 29,30, ಜುಲೈ 1 ರವರೆಗೆ ಮೂರು ದಿನಗಳ ಕಾಲ 1,475 ತಂಡಗಳು ಲಸಿಕೆ ಹಾಕದ ಮಕ್ಕಳನ್ನು ಪತ್ತೆ ಮಾಡಲು ಮನೆ ಮನೆಗೆ ಭೇಟಿ ನೀಡಿ 5 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಲಸಿಕೆ ನೀಡಬೇಕು. ಯಾವುದೇ ಕಾರಣಕ್ಕೂ ಮಗುವೂ ಲಸಿಕೆಯಿಂದ ವಂಚಿತವಾಗಬಾರದು ಎಂದು ಹೇಳಿದರು.

ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮಕ್ಕೆ ಜಿಲ್ಲೆಯಲ್ಲಿ 5 ವರ್ಷದೊಳಗಿನ ಒಟ್ಟು ಅಂದಾಜು 3,51,716 ಮಕ್ಕಳಿಗೆ ಲಸಿಕೆ ಹಾಕಲು ಗುರಿ ನೀಡಲಾಗಿದೆ. ಮಕ್ಕಳಿಗೆ ಲಸಿಕೆಗಳನ್ನು ನೀಡಲು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ 1,519 ಲಸಿಕಾ ಕೇಂದ್ರಗಳಿಂದ (ಬೂತ್‌ಗಳು) ಮಕ್ಕಳಿಗೆ ಲಸಿಕೆ ಹಾಕಲಾಗುವುದು. ಇದಕ್ಕಾಗಿ 3,364 ಲಸಿಕೆ ಹಾಕುವ ಸಿಬ್ಬಂದಿ ಹಾಗೂ 334 ಮೇಲ್ವಿಚಾರಕರನ್ನು ನಿಯೋಜಿಸಲಾಗಿದೆ. 132 ಟ್ರಾನ್ಸಿಟ್ ತಂಡಗಳು ಹಾಗೂ ದೂರದ ಪ್ರದೇಶಗಳಿಗಾಗಿ 31 ಸಂಚಾರಿ ತಂಡಗಳು ಕಾರ್ಯಾಚರಣೆ ನಡೆಸಲಿವೆ. ಅಂಗನವಾಡಿ ಹಾಗೂ ಶಾಲೆಗಳಲ್ಲಿ ಕೇಂದ್ರಗಳನ್ನು ತೆರೆಯಲು ಸಿದ್ಧತೆ ಮಾಡಿಕೊಳ್ಳಿ ಎಂದು ಸೂಚನೆ ನೀಡಿದರು. ಅಂದು ನಡೆಯುವ ಕಾರ್ಯಕ್ರಮಕ್ಕೆ ನಿರಂತರವಾಗಿ ವಿದ್ಯುತ್ ಸರಬರಾಜು ಮಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿ ತಿಳಿಸಿದರು. ಕಾರ್ಮಿಕ ಇಲಾಖೆಯ ಸಹಯೋಗದೊಂದಿಗೆ ವಲಸೆ ಹಾಗೂ ಕಟ್ಟಡ ಕಾರ್ಮಿಕರ ಮಕ್ಕಳನ್ನು ತಲುಪಲು ವಿಶೇಷ ಮೈಕ್ರೋ ಪ್ಲಾನ್ ಸಿದ್ಧಪಡಿಸಿಕೊಳ್ಳಿ. ಕೊಳಗೇರಿ, ವಲಸೆ ಕಾರ್ಮಿಕರ ಪ್ರದೇಶ ಹಾಗೂ ಇಟ್ಟಿಗೆ ಭಟ್ಟಿಗಳ ಮೇಲೆ ತೀವ್ರ ನಿಗಾ ಇರಿಸಿ, ಉನ್ನತ ಅಧಿಕಾರಿಗಳ ತಂಡವು ಖುದ್ದಾಗಿ ಹೈ ರಿಸ್ಕ್ ಪ್ರದೇಶಗಳಿಗೆ ಭೇಟಿ ನೀಡಿ ವಾಸ್ತವ ಸ್ಥಿತಿಯನ್ನು ಪರಿಶೀಲಿಸಬೇಕು. ಪೋಷಕರು ತಮ್ಮ ಮಕ್ಕಳಿಗೆ ತಪ್ಪದೇ ಪೋಲಿಯೋ ಲಸಿಕೆ ಹಾಕಿಸಿ ರಾಷ್ಟ್ರೀಯ ಅಭಿಯಾನವನ್ನು ಯಶಸ್ವಿಗೊಳಿಸಬೇಕು ಕೋರಿದರು.

ಕರಪತ್ರ ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಹೆಚ್ಚು ಪ್ರಚಾರ ನೀಡಬೇಕು. ಪಲ್ಸ್ ಪೋಲಿಯೋ ಕಾರ್ಯಕ್ರಮದ ಯಶಸ್ವಿಗೆ ಶಿಕ್ಷಣ ಇಲಾಖೆ, ಸಾರಿಗೆ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಟ್ಟಡ ಕಾರ್ಮಿಕ ಇಲಾಖೆ, ಪೊಲೀಸ ಇಲಾಖೆ ಸೇರಿದಂತೆ ಬೇರೆ ಬೇರೆ ಇಲಾಖೆಗಳು ಒಗ್ಗೂಡಿ ಕಾರ್ಯನಿರ್ವಹಿಸಬೇಕೆಂದರು. ಸರ್ವೇಲೈಸ್ ಅಧಿಕಾರಿ ಅನಿಲ ತಾಳಿಕೋಟಿ ಅವರು ಪಿ.ಪಿ.ಟಿ. ಮೂಲಕ ಮಾಹಿತಿಯನ್ನು ನೀಡಿದರು.

ಇದೇ ಸಂದರ್ಭದಲ್ಲಿ ಪಲ್ಸಪೋಲಿಯೋ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ರಾಹುಲ ಸಂಕನೂರ್, ಮಹಾನಗರ ಪಾಲಿಕೆಯ ಆಯುಕ್ತರಾದ ಅವಿನಾಶ ಶಿಂಧೆ, ಡಿಹೆಚ್‌ಓ ಡಾ. ಶರಣಬಸಪ್ಪ ಕ್ಯಾತನಾಳ, ಜಿಲ್ಲಾ ಸರ್ಜನ್ ರೂಕ್ಕಿಯ್ಯ ಅಸನಾ ರಬ್ ಆರ್.ಸಿ.ಹೆಚ್. ಅಧಿಕಾರಿ ಡಾ.ಸಿದ್ದು ಪಾಟೀಲ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಶಂಕ್ರಮ್ಮ ಡವಳಗಿ, ಮಹಿಳಾ ಮತ್ತು ಮಕ್ಕಳ ಉಪನಿರ್ದೇಶಕ ರಾಜಕುಮಾರ್ ರಾಠೋಡ, ತಾಲೂಕಿನ ತಹಶೀಲ್ದಾರು,ವೈದ್ಯಾಧಿಕಾರಿಗಳು, ಅಂಗನವಾಡಿ , ಆಶಾ ಕಾರ್ಯಕರ್ತರು ಉಪಸ್ಥಿತರಿದ್ದರು.

# ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಕೊಪ್ಪಳ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕೀಯರ ವಿದ್ಯಾರ್ಥಿ ನಿಲಯಗಳಲ್ಲಿ 2026-27ನೇ ಸಾಲಿಗೆ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಪಿಯುಸಿ ವ್ಯಾಸಂಗ್ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿಯು ಪ್ರವರ್ಗ-1, ಎಸ್.ಸಿ ಮತ್ತು ಎಸ್.ಟಿ 2.50 ಲಕ್ಷ ರೂ. ಹಾಗೂ ಪ್ರವರ್ಗ-2ಎ, 2ಬಿ, 3ಎ, 3ಬಿ ಇತರೆ ಹಿಂದುಳಿದ ವರ್ಗ ಹಾಗೂ ಇತರೆ ವಿದ್ಯಾರ್ಥಿಗಳಿಗೆ ಪೋಷಕರ ವಾರ್ಷಿಕ ಆದಾಯವು 1 ಲಕ್ಷ ರೂ. ಮಿತಿಯಲ್ಲಿರಬೇಕು.

ಅರ್ಜಿ ಸಲ್ಲಿಸಲು ಜೂನ್ 15 ಕೊನೆಯ ದಿನವಾಗಿದ್ದು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವೆಬ್‌ಸೈಟ್ https://shp.Karnataka.gov.in/bcwd ಮೂಲಕ ಅರ್ಜಿಯನ್ನು ಸಲ್ಲಿಸಬೇಕು. ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ https://bcwd.Karnataka.gov.inನ್ನು ನೋಡಬಹುದು ಹಾಗೂ ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ ಇ-ಮೇಲ್ bcwdhelpline@gmail.com ಮುಖಾಂತರ ಅಥವಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ, ತಾಲ್ಲೂಕು ಅಧಿಕಾರಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬಹುದು. ಹೆಚ್ಚಿನ ವಿವರಗಳಿಗಾಗಿ ಸಹಾಯವಾಣಿ ಸಂಖ್ಯೆ 8050770004 ಗೆ ಸಂಪರ್ಕಿಸುವುದು ಎಂದು ಕೊಪ್ಪಳ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಲಬುರಗಿ ನಗರದ ವಿವಿಧ ಬಡಾವಣೆಗಳಲ್ಲಿ ನೀರು ಬಿಡುಗಡೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮೇ.26–ಕಲಬುರಗಿ ನಗರಕ್ಕೆ ನೀರು ಸರಬರಾಜು ಮಾಡುವ ಭೀಮಾ ನದಿಯ ಒಳಹರಿವು ಕಡಿಮೆಯಾಗಿದ್ದು, ಆದ್ದರಿಂದ ಕೋಟನೂರ(ಡಿ) ಜಲಶುದ್ಧೀಕರಣ ಕೇಂದ್ರದಿಂದ ಈ ಕೆಳಕಂಡ ಜಲಸಂಗ್ರಹಗಾರರಿಂದ ನೀರು ಸರಬರಾಜಾಗುತ್ತಿರುವ ಬಡಾವಣೆಗಳಿಗೆ ವೇಳಾಪಟ್ಟಿಯಂತೆ ನೀರು ಸರಬರಾಜು ಮಾಡಲಾಗುತ್ತಿದ್ದು, ಕಲಬುರಗಿ ನಗರದ ಸಾರ್ವಜನಿಕರು ಇದಕ್ಕೆ ಸಹಕರಿಸಬೇಕೆಂದು ಕಲಬುರಗಿ ಕೆಯುಡಬ್ಲ್ಯೂಎಸ್‌ಎಂಪಿ, ಕೆಯುಐಡಿಎಫ್‌ಸಿ ಯೋಜನಾ ಅನುಷ್ಠಾನ ಘಟಕದ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇಲ್ಕಟ್ಟ ಜಲಸಂಗ್ರಹಗಾರರ ಹೆಸರು, ಬಡಾವಣೆಗಳ ವಿವರ ಹಾಗೂ ನೀರು ಬಿಡುವ ಅವಧಿ ವಿವರ ಇಂತಿದೆ.

ಕೆ.ಹೆಚ್.ಬಿ. ಜಲಸಂಗ್ರಹಗಾರ: ಗಾಬರೆ ಲೇಔಟ್, ಧರಿಯಾಪುರ ಜಿಡಿಎ, ಮೋಹನ ನಗರ, ಲಕ್ಷ್ಮೀನಾರಾಯಣ ನಗರ ಬಡಾವಣೆಗಳಲ್ಲಿ 3 ದಿವಸಕ್ಕೊಮ್ಮೆ 2 ಗಂಟೆಗಳ ಕಾಲ ನೀರು ಬಿಡಲಾಗುತ್ತದೆ.

ಪಿ ಆಂಡ್ ಟಿ ಜಲಸಂಗ್ರಹಗಾರ: ಗಣೇಶ ನಗರ, ಸದಾಶಿವನಗರ, ಪಿ.ಡಬ್ಲ್ಯೂಡಿ ಕ್ವಾರ್ಟರ್ಸ್, ಬುದ್ಧನಗರ, ರಹಮತ ನಗರ, ಬ್ಯಾಂಕ ಕಾಲೋನಿ, ಬಾಲಾಜಿ ನಗರ, ಉದಯನಗರ ಭಾಗಶಃ ಬಡಾವಣೆಗಳಲ್ಲಿ 4 ದಿನಕ್ಕೊಮ್ಮೆ 3 ಗಂಟೆಗಳ ಕಾಲ ನೀರು ಬಿಡಲಾಗುತ್ತದೆ.

ಎನ್.ಜಿ.ಓ ಕಾಲೋನಿ ಜಲಸಂಗ್ರಹಗಾರ: ದತ್ತನಗರ, ಮಾಕಾ ಲೇಔಟ್, ಸಂತೋಷ ಕಾಲೋನಿ, ಹರಿಕೃಷ್ಣ ನಗರ ಬಡಾವಣೆಗಳಲ್ಲಿ 4 ದಿವಸಕ್ಕೊಮ್ಮೆ ಒಂದೂವರೆ ಗಂಟೆ ಕಾಲ ನೀರು ಬಿಡಲಾಗುತ್ತದೆ.

ಬಿದ್ದಾಪುರ ಕಾಲೋನಿ ಜಲಸಂಗ್ರಹಗಾರ: ಗಣಪತಿ ಟೆಂಪಲ್ ಏರಿಯಾ, ಜಾಧವ ಲೇಔಟ್, ಚಂದ್ರಭಾಗ ನಗರ, ರಾಘವೇಂದ್ರ ಸ್ವಾಮಿ ಟೆಂಪಲ್ ಏರಿಯಾ ಬಡಾವಣೆಗಳಲ್ಲಿ 4 ದಿನಕ್ಕೊಮ್ಮೆ ಎರಡು ಗಂಟೆಗಳ ಕಾಲ ನೀರು ಬಿಡಲಾಗುತ್ತದೆ.

ಕರುಣೇಶ್ವರ ನಗರ ಜಲಸಂಗ್ರಹಗಾರ: ಕರುಣೇಶ್ವರ ನಗರ ಏರಿಯಾ, ವರದಾ ನಗರ, ಯಶ್ವಂತನಗರ ಬಡಾವಣೆಗಳಲ್ಲಿ 4 ದಿವಸಕ್ಕೊಮ್ಮೆ 3 ಗಂಟೆಗಳ ಕಾಲ ನೀರು ಬಿಡಲಾಗುತ್ತದೆ.

ಕೋರಂಟಿ ಹನುಮಾನ ಜಲಸಂಗ್ರಹಗಾರ: ಹನುಮಾನ ನಗರ ತಾಂಡಾ, ತಾರಫೈಲ್ ಬಡಾವಣೆಗಳಲ್ಲಿ 4 ದಿವಸಕ್ಕೊಮ್ಮೆ ಎರಡೂವರೆ ಗಂಟೆಗಳ ಕಾಲ ನೀರು ಬಿಡಲಾಗುತ್ತದೆ.

ಸಾಯಿನಗರ ಜಲಸಂಗ್ರಹಗಾರ: ಸಾಯಿಮಂದಿರ ಏರಿಯಾ, ರಾಜಮಹಲ್ ಲೇಔಟ್, ಸರ್ವಜ್ಞ ಕಾಲೋನಿ ಹಿಂದುಗಡೆ ಬಡಾವಣೆಗಳಲ್ಲಿ 4 ದಿನಕ್ಕೊಮ್ಮೆ 3 ಗಂಟೆಗಳ ಕಾಲ ನೀರು ಬಿಡಲಾಗುತ್ತದೆ.

ಹೈಕೋರ್ಟ್ ಜಲಸಂಗ್ರಹಗಾರ: ಅಕ್ಕಮಹಾದೇವಿ ಕಾಲೋನಿ, ಹೌಸಿಂಗ್ ಬೋರ್ಡ ಬಡಾವಣೆಗಳಲ್ಲಿ 3 ದಿವಸಕ್ಕೊಮ್ಮೆ 3 ಗಂಟೆಗಳ ಕಾಲ ನೀರು ಬಿಡಲಾಗುತ್ತದೆ.

ಧರಿಯಾಪುರ ಜಲಸಂಗ್ರಹಗಾರ: ಅಂಬಿಕಾನಗರ, ತಾರಫೈಲ್ 8ನೇ ಕ್ರಾಸ್, ಧರಿಯಾಪುರ ಏರಿಯಾ ಬಡಾವಣೆಗಳಲ್ಲಿ 24/7 ನಿರಂತರ ನೀರು ಸರಬರಾಜು ಅಡಿ ನಿರಂತರವಾಗಿ ನೀರು ಸರಬರಾಜು ಮಾಡಲಾಗುತ್ತದೆ.

ಕೋಟನೂರ (ಡಿ) ಜಲಸಂಗ್ರಹಗಾರ: ಓಜಾ ಲೇಔಟ್, ವಿವೇಕಾನಂದ ನಗರ ಬಡಾವಣೆಗಳಲ್ಲಿ 24/7 ನಿರಂತರ ನೀರು ಸರಬರಾಜು ಅಡಿ ನಿರಂತರವಾಗಿ ನೀರು ಸರಬರಾಜು ಮಾಡಲಾಗುತ್ತದೆ.

ವಿದ್ಯುತ ಸರಬರಾಜಿನಲ್ಲಿ ವ್ಯತ್ಯಯ ಹಾಗೂ ಕೊಳವೆ ಮಾರ್ಗ, ಮೋಟಾರು ಪಂಪುಗಳಲ್ಲಿ ದುರಸ್ತಿ ಕಂಡು ಬಂದಲ್ಲಿ ಮೇಲ್ಕಂಡ ವೇಳಾಪಟ್ಟಿಯಲ್ಲಿ ಬದಲಾವಣೆ ಆಗಬಹುದಾಗಿದೆ. ಆದ್ದರಿಂದ ಕಲಬುರಗಿ ನಗರದ ಸಾರ್ವಜನಿಕರು ಮಹಾನಗರ ಪಾಲಿಕೆಗೆ, ಕೆಯುಡಬ್ಲ್ಯೂಎಸ್‌ಎಂಪಿ–ಕೆಯುಐಡಿಎಫ್‌ಸಿ ಹಾಗೂ ಮೆ॥ ಎಲ್ ಆಂಡ್ ಟಿ ಲಿಮಿಟೆಡ್ ಇವರೊಂದಿಗೆ ಸಹಕರಿಸಬೇಕೆಂದು ಅವರು ತಿಳಿಸಿದ್ದಾರೆ.

# ಜಿಲ್ಲೆಯಲ್ಲಿ ಇಂಧನ ಕೊರತೆ ಇಲ್ಲ : ಜಿಲ್ಲಾಧಿಕಾರಿ ಪಾಂಡ್ವೆ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮೇ 26 : ಜಿಲ್ಲೆಯ ಎಲ್ಲಾ ಇಂಧನ ಬಳಕೆ ಗ್ರಾಹಕರ ಗಮನಕ್ಕೆ ಜಿಲ್ಲೆಯಲ್ಲಿ ಇಂಧನದ ಯಾವುದೇ ಕೊರತೆಯಿಲ್ಲ, ಸಾರ್ವಜನಿಕರು ವದಂತಿಗಳಿಗೆ ಕಿವಿಗೊಟ್ಟು ಆತಂಕಕ್ಕೆ ಒಳಗಾಗಬಾರದೆಂದು ಯಾದಗಿರಿ ಜಿಲ್ಲಾಧಿಕಾರಿ ಶ್ರೀ ಪಾಂಡ್ವೆ ರಾಹುಲ್ ತುಕಾರಾಮ್ ಅವರು ತಿಳಿಸಿದ್ದಾರೆ. ಯಾದಗಿರಿ ಜಿಲ್ಲೆ ಹಾಗೂ ನಗರದಲ್ಲಿ ಯಾವುದೇ ರೀತಿಯಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಕೊರತೆ ಇಲ್ಲ, ಇಂಧನ ಕೊರತೆ ವದಂತಿಗೆ ಕಿವಿಗೊಡಬಾರದು. ಇಂಧನ ಪೂರೈಕೆ ಕಂಪನಿ ಹಾಗೂ ಬಂಕ್ ಮಾಲೀಕರ ಜತೆ ಈಗಾಗಲೇ ಸಭೆ ಮಾಡಲಾಗಿದ್ದು, ಕಂಪನಿಗಳಿಂದ ಯಾವುದೇ ಇಂಧನ ಕೊರತೆ ಎಲ್ಲಿಯೂ ಇರುವುದಿಲ್ಲ, ಒಂದು ವೇಳೆ ಕೊರತೆ ಆದಲ್ಲಿ ಕೆಲವೇ ಗಂಟೆಗಳಲ್ಲಿ ಸರಿಪಡಿಸಲಾಗುವುದು. ಅಕ್ರಮವಾಗಿ ಇಂಧನ ಸಂಗ್ರಹ ಮತ್ತು ಮಾರಾಟ ತಡೆಯಲು ಕಟ್ಟುನಿಟ್ಟಿನ ಕ್ರಮ ವಹಿಸಬೇಕು. ಯಾದಗಿರಿ ಪೆಟ್ರೋಲ್ ಹಾಗೂ ಡಿಸೇಲ್ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಿರುವುದಿಲ್ಲ, ಸದ್ಯ ಯಾದಗಿರಿ ಜಿಲ್ಲೆಯಲ್ಲಿ ಪೆಟ್ರೋಲ್ ಹಾಗೂ ಡಿಸೇಲ್ ಸ್ಟಾಕ್ ಇದ್ದು, ಸಾರ್ವಜನಿಕರು ಆತಂಕಪಡುವ ಅವಶ್ಯಕತೆ ಇರುವುದಿಲ್ಲ. ಸಾರ್ವಜನಿಕರು ವದಂತಿಗಳಿಗೆ ಕಿವಿಗೊಡದೇ ಶಾಂತ ರೀತಿಯಿಂದ ಸಹಕರಿಸಬೇಕು. ಏನೇ ಅಕ್ರಮ ಅಥವಾ ಗಲಾಟೆ ಕಂಡುಬಂದರೆ 112 ಸಂಖ್ಯೆಗೆ ಹಾಗೂ ಯಾದಗಿರಿ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪ ನಿರ್ದೇಶಕರ ಕಛೇರಿ ಸಹಾಯವಾಣಿ ಸಂಖ್ಯೆ 08473253707ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೇ ೩೦ ರಂದು ಪ್ರಥಮ ಪಿ.ಯುಸಿ ಪ್ರವೇಶಾತಿಗಾಗಿ ಕೌನ್ಸಲಿಂಗ್

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮೇ.26–2026–27ನೇ ಸಾಲಿಗೆ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಕಾಲೇಜು/ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ವಸತಿಕಾಲೇಜು ಹಾಗೂ ಮೌಲಾನಾ ಆಜಾದ್ ಕಾಲೇಜಿನಲ್ಲಿ ಪ್ರಥಮ ಪಿ.ಯು.ಸಿ. ಪ್ರವೇಶಾತಿಗಾಗಿ (ವಿದ್ಯಾರ್ಥಿಗಳ ಮೇರಿಟ್ ಆಧಾರದಮೇಲೆ) ಕೌನ್ಸ್‌ಲಿಂಗ್‌ನ್ನು 2026ರ ಮೇ 30 ರಂದು ಬೆಳಿಗ್ಗೆ 10 ಗಂಟೆಗೆ ಮೌಲಾನಾ ಆಜಾದ ಮಾದರಿ ಆಂಗ್ಲ ಮಾಧ್ಯಮಶಾಲೆ, ಲಕ್ಷ್ಮಿ ನಗರ, ಡಬರಾಬಾದ್ ಕ್ರಾಸ್ ಕಲಬುರಗಿ ಇಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಕಲಬುರಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಕಚೇರಿಗೆ ಭೇಟಿ ನೀಡಲು ಅಥವಾ ಮೊಬೈಲ್ ಸಂಖ್ಯೆ 7411724266, 8904506665 ಗಳಿಗೆ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ. ಆಯಾ ತಾಲೂಕಾ ಅಲ್ಪಸಂಖ್ಯಾತರ ವಿಸ್ತರಣಾಧಿಕಾರಿಗಳ ಕಚೇರಿಗಳಾದ ಸೇಡಂ, ಆಳಂದ, ಚಿತ್ತಾಪುರ, ಜೇವರ್ಗಿ, ಅಫಜಲಪುರ, ಚಿಂಚೋಳಿ ಹಾಗೂ ಕಲಬುರಗಿ ಮಿನಿ ವಿಧಾನಸೌಧದ 4ನೇ ಮಹಡಿಯಲ್ಲಿನ ಜಿಲ್ಲಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರವನ್ನು ಸಂಪರ್ಕಿಸಲು, ಇಲಾಖೆಯ https://dom.karnataka.gov.in ವೆಬ್‌ಸೈಟ್‌ನ್ನು ಹಾಗೂ ರಾಜ್ಯ ಅಲ್ಪಸಂಖ್ಯಾತರ ಸಹಾಯವಾಣಿ 8277799990(24*7) ಗೆ ಸಂಪರ್ಕಿಸಲು ಕೋರಲಾಗಿದೆ.

# ಗುರು ಶಿಷ್ಯ ಪರಂಪರೆಗೆ ಪ್ರೊ. ಚಂದ್ರಕಾಂತ ಯಾತನೂರ ಮಾದರಿ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ




ರೈತ ಕುಟುಂಭದಲ್ಲಿ ಜನಿಸಿರುವ ಪ್ರೊ. ಚಂದ್ರಕಾಂತ ಯಾತನೂರ ಸಮಚಿತ್ತ ಭಾವನೆಯಿಂದ ಉನ್ನತ ಹುದ್ದೆಯ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ತಮ್ಮ ಸುದೀರ್ಘ ಸೇವೆಯಲ್ಲಿ ಗುರು ಶಿಷ್ಯ ಪರಂಪರೆ ಮೌಲ್ಯಗಳಿಗೆ ಮಾದರಿಯಾಗಿದ್ದಾರೆ. ವಿದ್ಯಾರ್ಥಿಗಳ ಶೈಕ್ಷಣಿಕ ಗುರಿ ಮತ್ತು ಸಾಧನೆಗೆ ಮಾರ್ಗದರ್ಶನ ನೀಡುವ ಮೂಲಕ ವಿಶ್ವವಿದ್ಯಾಲಯದ ಹಿರಿಮೆಯನ್ನು ಹೆಚ್ಚಿಸಿದ್ದಾರೆ ಎಂದು ಜಾನಪದ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಟಿ.ಎಂ. ಭಾಸ್ಕರ್ ಅಭಿಪ್ರಾಯಪಟ್ಟರು. ಗುಲಬರ್ಗಾ ವಿಶ್ವವಿದ್ಯಾಲಯದ ಡಾ. ಬಿ. ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ. ಚಂದ್ರಕಾಂತ ಯಾತನೂರ ಅವರ ವಯೋನಿವೃತ್ತಿ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ ರೈತ ಕುಟುಂಭದಲ್ಲಿ ಜನಿಸಿ ಹಿರಿಯರ ಸಂಸ್ಕಾರ ಮತ್ತು ಶ್ರೇಷ್ಠ ವಿದ್ವಾಂಸರ ಮಾರ್ಗದರ್ಶನದಲ್ಲಿ ಬೆಳೆದ ಪ್ರೊ. ಯಾತನೂರ ಗುರುಗಳ ನಡೆ, ನುಡಿ, ಶಿಸ್ತು ಮೈಗೂಡಿಸಿಕೊಂಡು ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸಂಶೋಧಕರಾಗಿ ಗುರುತಿಸಿಕೊಂಡಿದ್ದಾರೆ. ರಾಜನೀತಿಶಾಸ್ತ್ರದಲ್ಲಿ ಅಪಾರ ಪಾಂಡಿತ್ಯ ಪಡೆದು ಗುಣಮಟ್ಟದ ಬೋಧನೆ ಮತ್ತು ಸಂಶೋಧನೆಯಲ್ಲಿ ಪ್ರಯೋಗಶೀಲತೆ ಮತ್ತು ಹೊಸ ಅನ್ವೇಷಣೆ ತಂದಿದ್ದಾರೆ. ಆಡಳಿತಾತ್ಮಕ ಕರ್ತವ್ಯಗಳಲ್ಲಿ ಸ್ವಾಭಿಮಾನದ ಹೆಜ್ಜೆ ಮೂಲಕ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳನ್ನು ಅತ್ಯಂತ ಸೌಜನ್ಯದಿಂದ ಕಂಡಿದ್ದಾರೆ. ತಮ್ಮ 35 ವರ್ಷಗಳ ಸೇವೆಯಲ್ಲಿ ಕಪ್ಪು ಚುಕ್ಕೆಯಿಲ್ಲದೆ, ಯಾವುದೇ ಕಲಹ ಮತ್ತು ಸಂಘರ್ಷಗಳಿಲ್ಲದೆ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸಿದ್ದಾರೆ. ವಿಶ್ವವಿದ್ಯಾಲಯಗಳಲ್ಲಿ ವಿವಿಧ ಸ್ಥಾನ, ಹುದ್ದೆಗಳನ್ನು ಅಲಂಕರಿಸಿ ಬದ್ಧತೆಯಿಂದ ಕೆಲಸ ನಿರ್ವಹಿಸಿ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಹೆಮ್ಮೆ ತಂದಿದ್ದಾರೆ ಎಂದರು.

ಆದಿಕವಿ ಶ್ರೀ. ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಹರೀಷ ರಾಮಸ್ವಾಮಿ ಚಂದ್ರಯಾನ ಅಭಿನಂದನಾ ಗ್ರಂಥ ಬಿಡುಗಡೆಗೊಳಿಸಿ ಮಾತನಾಡಿ ಮುಗ್ಧತೆ ಮತ್ತು ಸರಳ ಸ್ವಭಾವದ ಪ್ರೊ. ಚಂದ್ರಕಾಂತ್ ಯಾತನೂರ ಅವರನ್ನು ನಿವೃತ್ತಿ ಸಂದರ್ಭದಲ್ಲಿ ವಿದ್ಯಾರ್ಥಿಗಳು ಮತ್ತು ಹಿತೈಷಿಗಳು ಸತ್ಕರಿಸುತ್ತಿರುವುದು ನಿಜಕ್ಕೂ ಅವಿಸ್ಮರಣೀಯ. ಸಂವಿಧಾನದಲ್ಲಿ ಎಲ್ಲರಿಗೂ ಅವಕಾಶಗಳಿವೆ. ಒಬ್ಬ ಸಾಧಕನಿಗೆ ವೃತ್ತಿ ಮತ್ತು ನಿವೃತ್ತಿ ಮುಖ್ಯವಲ್ಲ. ಸೇವಾ ಅವಧಿಯಲ್ಲಿ ಮಾಡಿದ ಕೆಲಸ ಮತ್ತು ಸಮಾಜಕ್ಕೆ ನೀಡಿದ ಕೊಡುಗೆ ಬಹಳ ಮುಖ್ಯ. ತಮ್ಮ ಜ್ಞಾನದಿಂದ ಅಪಾರ ಸಂಖ್ಯೆಯ ವಿದ್ಯಾರ್ಥಿ ಸಂಶೋಧಕರನ್ನು ಬೆಳೆಸಿರುವ ಪ್ರೊ ಯಾತನೂರ ಅವರ ನಿವೃತ್ತಿ ಬದುಕು ಆರೋಗ್ಯದಾಯಕವಾಗಿರಲಿ ಎಂದು ಆಶಿಸಿದರು. ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಬಿ. ಎಂ. ಬಾಯಿನ್ ಮುಖ್ಯ ಅತಿಥಿಯಾಗಿ ಮಾತನಾಡಿ ಪ್ರೊ. ಚಂದ್ರಕಾಂತ್ ಯಾತನೂರ ಸ್ನೇಹಪರ ಜೀವಿ. ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಪದವಿ, ಸ್ನಾತಕೋತ್ತರ ಪದವಿ ಮತ್ತು ಪಿಎಚ್.ಡಿ ಪದವಿ ಪಡೆದು ರಾಜ್ಯಶಾಸ್ತ್ರ ವಿಭಾಗದಲ್ಲಿ ಬೋಧಕರಾಗಿ ಸೇವೆಗೆ ನೇಮಕಗೊಂಡು ವಿಭಾಗವನ್ನು ಕಟ್ಟಿ ಬೆಳೆಸಿದ್ದಾರೆ. ವಿಶ್ವವಿದ್ಯಾಲಯದ ಉನ್ನತ ಹುದ್ದೆಗಳನ್ನು ಅಲಂಕರಿಸಿ ಉತ್ತಮ ಆಡಳಿತ ನಡೆಸಿದ್ದಾರೆ. ಕುಲಸಚಿವ, ಕುಲಪತಿಯಾಗಿ ವಿಶ್ವವಿದ್ಯಾಲಯಕ್ಕೆ ಗೌರವ ತಂದಿದ್ದಾರೆ. ವಿಶ್ವವಿದ್ಯಾಲಯ ಕಟ್ಟುವ ಮತ್ತು ಬೆಳೆಸುವ ಕನಸು, ವಿವಿಧ ಆಯಾಮಗಳ ಬಗ್ಗೆ ಅವರಿಗೆ ದೂರದೃಷ್ಟಿಯಿತ್ತು. ಸದಾ ನಗು, ಕಾರ್ಯದಲ್ಲಿ ಶಿಸ್ತು ಮತ್ತು ವೈಜ್ಞಾನಿಕ ಆಲೋಚನೆ ಮೂಲಕ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಧನಾತ್ಮಕ ಚಿಂತನೆ ಬೆಳೆಸಿದ್ದಾರೆ ಎಂದರು.

ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ. ಚಂದ್ರಕಾಂತ ಯಾತನೂರ ಮಾತನಾಡಿ ಬಡತನದಲ್ಲೂ ತಂದೆ ತಾಯಿ ಜನ್ಮ ನೀಡಿದ್ದಾರೆ. ನಂತರ ತಂದೆ ಸ್ಥಾನದಲ್ಲಿ ನಿಂತು ಅಣ್ಣ ಮತ್ತು ಅತ್ತಿಗೆ ನನಗೆ ವಿದ್ಯೆ ಕಲಿಸಿ ಸಲುಹಿದರು. ಉತ್ತಮ ನಡೆ ನುಡಿ ಕಲಿಸಿದರು. ಸಂಸ್ಕಾರ ನೀಡಿ ಮನುಷ್ಯನನ್ನಾಗಿ ಬೆಳೆಸಿ ಮಾರ್ಗದರ್ಶನ ಮಾಡಿದ್ದಾರೆ. ಕುಟುಂಭ ವರ್ಗದ ಪ್ರೀತಿ ಮತ್ತು ಕಾಳಜಿಯನ್ನು ಸ್ಮರಿಸಿಕೊಂಡ ಅವರು ಗುರುಗಳ ಸಹಾಯ, ಪ್ರೋತ್ಸಾಹ ಮತ್ತು ಸೇವಾ ಅವಧಿಯ ಘಟನೆಗಳನ್ನು ಮೆಲುಕು ಹಾಕಿದರು.

ಕುಲಪತಿ ಪ್ರೊ. ಶಶಿಕಾಂತ್ ಎಸ್. ಉಡಿಕೇರಿ ಅಧ್ಯಕ್ಷತೆ ವಹಿಸಿ ಮಾತನಾಡಿ ಪ್ರೊ. ಚಂದ್ರಕಾಂತ್ ಯಾತನೂರ ಅವಿಭಕ್ತ ಕುಟುಂಭದಲ್ಲಿ ಬೆಳೆದು ಅಣ್ಣನ ಮಾರ್ಗದರ್ಶನದಲ್ಲಿ ಶಿಕ್ಷಣ ಪಡೆದು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗುತ್ತಿದ್ದಾರೆ. ವಿಶ್ವವಿದ್ಯಾಲಯ ಎಲ್ಲವನ್ನೂ ಕೊಟ್ಟಿದೆ ಎಂಬ ತೃಪ್ತಭಾವ ಅವರಿಗಿದೆ. ತಂದೆ ತಾಯಿ ನೀಡಿದ ಸಂಸ್ಕಾರದಿಂದ ಕೆಲಸದಲ್ಲಿ ಶಿಸ್ತು, ಸಹನೆ, ನಿಯಮ ಪಾಲನೆ, ಕರ್ತವ್ಯ ನಿಷ್ಠೆ ಮತ್ತು ಹೃದಯವಂತಿಕೆ ಅವರಿಗೆ ಬಂದಿದೆ. ನಾನು ಕುಲಪತಿಯಾಗಿ ಒಂಬತ್ತು ತಿಂಗಳು ಕಳೆದಿದೆ. ಅಲ್ಪ ಅವಧಿಯಲ್ಲಿ ನಾನು ಗಮನಿಸಿದಂತೆ ಪ್ರೊ. ಯಾತನೂರ ವೃತ್ತಿ ಬದ್ಧತೆ ಮತ್ತು ಕರ್ತವ್ಯನಿಷ್ಠೆ ಮೀರದಂತೆ ಕೆಲಸ ಮಾಡಿದ್ದಾರೆ. ವಿದ್ಯಾರ್ಥಿಗಳು ಶಿಕ್ಷಣವನ್ನು ಗೌರವಿಸಬೇಕು. ಒಳ್ಳೆಯ ಕೆಲಸ ಮಾಡುವುದು ನಮ್ಮ ಜವಾಬ್ದಾರಿ. ಇದೇ ಸಂದರ್ಭದಲ್ಲಿ ತಮ್ಮ ಶೈಕ್ಷಣಿಕ ಬೆಳವಣಿಗೆಗೆ ಮತ್ತು ಬದುಕಿಗೆ ನೆರವು ಮತ್ತು ಉತ್ತೇಜನ ನೀಡಿದ ಸಹೋದರರ ಪ್ರೋತ್ಸಾಹವನ್ನು ನೆನಪಿಸಿಕೊಂಡರು.

ಪ್ರೊ. ಚಂದ್ರಕಾಂತ ಯಾತನೂರ ಅಭಿನಂದನಾ ಸಮಿತಿ ಅಧ್ಯಕ್ಷ ಡಾ. ಅನಿಲಕುಮಾರ ಹಾಲು ಅತಿಥಿ ಗಣ್ಯರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿ ಪ್ರೊ. ಚಂದ್ರಕಾಂತ ಯಾತನೂರ ಅವರ ಶಿಷ್ಯ ಬಳಗ ದೇಶದ ನಾನಾ ಕಡೆಗಳಲ್ಲಿ ವಿವಿಧ ವೃತ್ತಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಪ್ರೊ. ಚಂದ್ರಕಾಂತ ಯಾತನೂರ ಬೋಧನೆ ಮತ್ತು ಜ್ಞಾನ ಮರೆಯುವಂತಿಲ್ಲ. ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿರುವುದು ಅವರ ಜ್ಞಾನ ಮತ್ತು ವಿದ್ಯಾರ್ಥಿಗಳ ಮೇಲಿನ ಪ್ರೀತಿ ಬಾಂದವ್ಯ ಇತರರಿಗೆ ಮಾದರಿ ಎಂದರು.

ಕಲಬುರಗಿ ವಿಶ್ರಾಂತ ಎಸ್‌ಪಿ ಜಿ. ಎಂ. ಯಾತನೂರ ಹಾಗೂ ಶ್ರೀಮತಿ ಅಂಜನಾ ಯಾತನೂರ ಮಾತನಾಡಿದರು. ಪೃಥ್ವಿರಾಜ್ ಜಯಂತ್ ಚಂದ್ರಯಾನ ಕುರಿತು ಮಾತನಾಡಿದರು. ಪ್ರೊ. ಶ್ರೀರಾಮುಲು, ಎಂ. ಎಚ್. ಪ್ರಹ್ಲಾದಪ್ಪ, ಡಾ. ವಿಷ್ಣುವರ್ಧನ್ ಅನಿಸಿಕೆ ಹಂಚಿಕೊಂಡರು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರು, ವಿದ್ಯಾ ವಿಷಯಕ ಪರಿಷತ್ ಸದಸ್ಯರು, ವಿವಿಧ ನಿಕಾಯಗಳ ಡೀನರು, ಪ್ರಾಧ್ಯಾಪಕರು, ವಿಶ್ರಾಂತ ಪ್ರಾಧ್ಯಾಪಕರು, ಅತಿಥಿ ಉಪನ್ಯಾಸಕರು, ಸಂಶೋಧನಾ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು, ಯಾತನೂರು ಗ್ರಾಮದ ಹಿರಿಯರು, ಕುಟುಂಭ ವರ್ಗ, ಸ್ನೇಹಿತ ಬಳಗ ಸೇರಿದಂತೆ ನಾಗರೀಕರು ಭಾಗವಹಿಸಿದ್ದರು. ವಿದ್ಯಾರ್ಥಿನಿ ಶಿವಲೀಲಾ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಆಕಾಶವಾಣಿ ಕೇಂದ್ರದ ಉದ್ಘೋಷಕಿ ಶಶಿಕಲಾ ಜಡೆ ಕಾರ್ಯಕ್ರಮ ನಿರ್ವಹಿಸಿದರು. ಡಾ. ವೆಂಕಟೇಶ್ ಪೂಜಾರಿ ವಂದಿಸಿದರು.

> ವಿಶ್ವವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕರು ನಿವೃತ್ತಿ ಹೊಂದುತ್ತಿದ್ದಾರೆ. ಆರ್ಥಿಕ ಸಂಕಷ್ಟ, ಮೂಲಭೂತ ಸೌಕರ್ಯ ಕೊರತೆ, ಬೋಧಕರಿಲ್ಲದೆ ಗುಣಮಟ್ಟದ ಶಿಕ್ಷಣ ಸಾಧ್ಯವೇ? ಜಿಲ್ಲೆಗೊಂದು ವಿಶ್ವವಿದ್ಯಾಲಯ ಸ್ಥಾಪನೆ, ಮಹಾವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಕೋರ್ಸುಗಳ ಆರಂಭದಿಂದ ಉನ್ನತ ಶಿಕ್ಷಣದ ಮೌಲ್ಯ ಕುಗ್ಗಿದಂತಾಗಿ ವಿದ್ಯಾರ್ಥಿಗಳು ಪರಿತಪಿಸುತ್ತಿದ್ದಾರೆ. ಬೋಧಕರಿಲ್ಲದೆ ವಿದ್ಯಾರ್ಥಿಗಳು ಭವಿಷ್ಯ ಕಂಡುಕೊಳ್ಳುವುದು ಹೇಗೆ? ಕನಿಷ್ಠ ಮೂರು ಜಿಲ್ಲೆಗಳಿಗೆ ಒಂದು ವಿಶ್ವವಿದ್ಯಾಲಯ ಸೀಮಿತವಾಗಬೇಕು. ವಿವಿಧ ಜಿಲ್ಲೆ ಮತ್ತು ಸಂಸ್ಕೃತಿ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ಬರವುದರಿಂದ ಶಿಕ್ಷಣದ ಮೌಲ್ಯ, ಸಂಶೋಧನೆಗೆ ಪ್ರೋತ್ಸಾಹ, ಸಾಂಸ್ಕೃತಿಕ ಬದ್ಧತೆ, ಐಕ್ಯತೆ ಬೆಳೆಯುತ್ತದೆ. ಸರ್ಕಾರ ಹುದ್ದೆ ಭರ್ತಿಗೆ ತುರ್ತು ಗಮನಹರಿಸಬೇಕು.
>
> –ಪ್ರೊ. ಬಾಯಿನ್, ವಿಶ್ರಾಂತ ಪ್ರಾಧ್ಯಾಪಕರು
> ಗುಲಬರ್ಗಾ ವಿಶ್ವವಿದ್ಯಾಲಯ

# ಸಖಿ ಒನ್ ಸ್ಟಾಪ್ ಸೆಂಟರ್, ಮಹಿಳಾ ಸಬಲೀಕರಣ ಘಟಕಗಳು ಜಿಲ್ಲೆಯಲ್ಲಿ ಚುರುಕಾಗಿ ಕಾರ್ಯನಿರ್ವಹಿಸಲಿ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ಮಿಷನ್ ಶಕ್ತಿ ಯೋಜನೆಯಡಿ ಕಾರ್ಯನಿರ್ವಹಿಸುವ ಸಖಿ ಒನ್ ಸ್ಟಾಪ್ ಸೆಂಟರ್ ಘಟಕ ಮತ್ತು ಎಲ್ಲಾ ಮಹಿಳಾ ಘಟಕಗಳು ಮಹಿಳೆಯರಿಗೆ ಸಂಬಂಧಿಸಿದ ಯೋಜನೆಗಳ ಹಾಗೂ ಕಾನೂನುಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಇತರೆ ಇಲಾಖೆಗಳೊಂದಿಗೆ ಸಮನ್ವಯತೆ ಸಾಧಿಸಿ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಬಿ ಇಟ್ನಾಳ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮೇ 25ರಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಿಷನ್ ಶಕ್ತಿ ಯೋಜನೆಯಡಿ ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು.

ಮಿಷನ್ ಶಕ್ತಿಯು ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ಇದು ಮಹಿಳೆಯರ ಸುರಕ್ಷತೆ, ಭದ್ರತೆ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಜಾರಿ ತರಲಾದ ಸಮಗ್ರ ಕಾರ್ಯಕ್ರಮವಾಗಿದೆ. ಮಹಿಳೆಯರನ್ನು ರಾಷ್ಟ್ರನಿರ್ಮಾಣದಲ್ಲಿ ಸಮಾನ ಪಾಲುದಾರರನ್ನಾಗಿ ಮಾಡುವ ಗುರಿ ಹೊಂದಲಾಗಿದೆ. ಈ ಯೋಜನೆ ಪ್ರಮುಖ ಕಾರ್ಯಕ್ರಮಗಳಾದ ಒನ್ ಸ್ಟಾಪ್ ಸೆಂಟರ್, ಮಹಿಳಾ ಸಹಾಯವಾಣಿ, ಬೇಟಿ ಬಚಾವೋ ಬೇಟಿ ಪಢಾವೋ ಹಾಗೂ ನಾರಿ ಅದಾಲತ್ ಕಾರ್ಯಕ್ರಮ ಹಾಗೂ ಶಕ್ತಿ ಸದನ, ಪಾಲನಾ ಕೇಂದ್ರಗಳು, ಮಹಿಳಾ ಸಬಲೀಕರಣ ಘಟಕ, ಸಖಿ ನಿವಾಸ್ ಮತ್ತು ಪ್ರಧಾನ ಮಂತ್ರಿ ಮಾತೃ ವಂದನಾ ಈ ಎಲ್ಲಾ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಿಶನ್ ಶಕ್ತಿಯಡಿ ಬರುವ ಸಖಿ ಸ್ಟಾಪ್ ಸೆಂಟರ್ ಎಲ್ಲ ಸಿಬ್ಬಂದಿಯು ಸಮಯಕ್ಕೆ ಸರಿಯಾಗಿ ಕಚೇರಿಗೆ ಆಗಮಿಸಿ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಮಹಿಳಾ ಸಬಲೀಕರಣ ಘಟಕದಲ್ಲಿನ ಸಿಬ್ಬಂದಿಯು ತಮ್ಮ ಕಾರ್ಯಗಳೇನು ಎಂಬುದನ್ನರಿತು ಚುರುಕಾಗಿ ಕಾರ್ಯ ನಿರ್ವಹಿಸಬೇಕು. ಸಾಮರ್ಥ್ಯಾಭಿವೃದ್ಧಿ ತರಬೇತಿ ಹಾಗೂ ಅರಿವು ಜಾಗೃತಿ ಕಾರ್ಯಕ್ರಮಗಳನ್ನು ಗುರಿಯನುಸಾರ ನಡೆಸಬೇಕು. ಎಲ್ಲ ಸಿಬ್ಬಂದಿಯು ತಾವು ಕೈಗೊಂಡ ಕಾರ್ಯಗಳ ಬಗ್ಗೆ ಮಾಹೆವಾರು ಛಾಯಾಚಿತ್ರಗಳ ಸಮೇತ ವರದಿಯನ್ನು ಸಿದ್ಧಪಡಿಸಿ ಸಲ್ಲಿಸಬೇಕು. ಸರಿಯಾಗಿ ಕಾರ್ಯನಿರ್ವಹಿಸದಿದ್ದರೆ ಅಂತಹ ಸಿಬ್ಬಂದಿಯನ್ನು ಮುಂದುವರೆಸುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದರು.

ಜಿಲ್ಲಾ ಪಂಚಾಯತ್ ಸಿಇಓ ವರ್ಣಿತ್ ನೇಗಿ ಅವರು ಮಾತನಾಡಿ, ಸಖಿ ಒನ್ ಸ್ಟಾಪ್ ಸೆಂಟರ್, ಮಹಿಳಾ ಸಹಾಯವಾಣಿ, ಮಹಿಳಾ ಸಬಲೀಕರಣ ಘಟಕಗಳ ಎಲ್ಲ ಸಿಬ್ಬಂದಿಗೆ ಸರಿಯಾದ ತರಬೇತಿ ವ್ಯವಸ್ಥೆ ಆಗಬೇಕು. ಆಯಾ ಸಿಬ್ಬಂದಿಯ ಕಾರ್ಯವೈಖರಿಯ ಬಗ್ಗೆ ಮಾಹೆವಾರು ಪರಿಶೀಲನೆ ನಡೆಸಿ ಉತ್ತಮವಾಗಿ ಕಾರ್ಯನಿರ್ವಹಿಸಲು ಅವರಿಗೆ ಮಾರ್ಗದರ್ಶನ ಮಾಡಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಅಮರೇಶ ಹಾವಿನ್ ಅವರಿಗೆ ನಿರ್ದೇಶನ ನೀಡಿದರು.

ಸಖಿ ಒನ್ ಸ್ಟಾಪ್ ಸೆಂಟರನಲ್ಲಿ ದೊರೆಯುವ ಸೇವೆಗಳ ಬಗ್ಗೆ ಮತ್ತು ಸಖಿ ಒನ್ ಸ್ಟಾಪ್ ಸೆಂಟರನಲ್ಲಿ ದಾಖಲಾದ ಪ್ರಕರಣಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಏಪ್ರೀಲ್ 2025 ರಿಂದ ಮಾರ್ಚ 2026ರವರೆಗೆ 11 ಕೌಟುಂಬಿಕ ದೌರ್ಜನ್ಯ ಪ್ರಕರಣಗಳು, 10 ಲೈಂಗಿಕ ಅಪರಾಧ ಪ್ರಕರಣಗಳು, 39 ಪೋಕ್ಸೊ, 2 ಬಾಲ್ಯ ವಿವಾಹ ಪ್ರಕರಣಗಳು, 19 ಕಾಣೆಯಾದ ಪ್ರಕರಣಗಳು, 3 ಇನ್ನಿತರೆ ಪ್ರಕರಣಗಳು ದಾಖಲಾಗಿವೆ. ಸಖಿ ಸ್ಟಾಪ್ ಸೆಂಟರನಲ್ಲಿ ವೈದ್ಯಕೀಯ ತಪಾಸಣೆ ಮತ್ತು ಚಿಕಿತ್ಸೆ, ಕಾನೂನು ಸಲಹೆ ಮತ್ತು ನೆರವು, ಆಪ್ತ ಸಮಾಲೋಚನೆ, ತಾತ್ಕಾಲಿಕ ಸುರಕ್ಷಿತ ವಸತಿ ಸೌಲಭ್ಯ ಮತ್ತು ಪೊಲೀಸ್ ನೆರವು ನೀಡಲಾಗುತ್ತಿದೆ ಎಂದು ಸಖಿ ಸ್ಟಾಪ್ ಸೆಂಟರನ ಅಧಿಕಾರಿ ಯಮುನಾ ಅವರು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಎಸ್. ದರಗದ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಅಜ್ಜಪ್ಪ ಸೋಗಲದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳಾದ ಅನ್ನಪೂರ್ಣ, ಜಿಲ್ಲಾ ವಾರ್ತಾಧಿಕಾರಿಗಳಾದ ಗವಿಸಿದ್ದಪ್ಪ ಹೊಸಮನಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಮುದಗಲ್ಲ ನಾಡಕಚೇರಿಗೆ ದಾರಿ ಯಾವುದಯ್ಯ?

ಸುರೇಶ ಕೆ.ವಿ

• ಮಲ್ಲಮ್ಮ ನುಡಿ ವಾರ್ತೆಮುದಗಲ್



ಪಟ್ಟಣದ ನಾಡಕಚೇರಿಗೆ ಸಂಪರ್ಕಿಸುವ ಪ್ರಮುಖ ರಸ್ತೆಯಲ್ಲಿ ಅಕ್ರಮವಾಗಿ ಡ್ಡಬ್ಬಾ ಅಂಗಡಿಗಳನ್ನು ಸಾಲಾಗಿಟ್ಟು ವ್ಯವಹರಿಸುವುದು, ಅಡ್ಡಾದಿಡ್ಡಿಯಾಗಿ ವಾಹನಗಳನ್ನು ನಿಲ್ಲಿಸುವುದರಿಂದ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಪುರಸಭೆ ಮುಂಭಾಗದಲ್ಲಿ ನಾಡಕಾರ್ಯಲಯವಿದೆ. ಪೂರ್ವದಿಕ್ಕಿನಲ್ಲಿ ಪುರಸಭೆ ವಾಣಿಜ್ಯ ಮಳಿಗೆವಿದೆ ಅದಕ್ಕೆಹೊಂದಿಕೊಂಡೆ ಸ್ವಲ್ಪ ಜಾಗವಿತ್ತು ಆದಲ್ಲಿಯೇ ಜನರು ನಾಡಕಾರ್ಯಲಯಕ್ಕೆ ಮತ್ತು ಶೌಚಾಕ್ರಿಯೆಗೆ ಸಂಚರಿಸುತ್ತಿದ್ದರು. ಆದರೆ ಈಗ ಆದರೆ ರಸ್ತೆಗೆ ಹೊಸದಾಗಿ ಡಬ್ಬಾ ಅಂಗಡಿ ಇಟ್ಟು ರಸ್ತೆ ಬಂದ್ ಮಾಡಲಾಗಿದೆ. ಪಶ್ಚಿಮದಿಕ್ಕಿನಲ್ಲಿ ಅಂದರೇ ಮುಖ್ಯರಸ್ತೆಯ ಉದ್ದಕ್ಕೂ ತಳ್ಳು, ಬಂಡಿ, ಟಿಫೀನ್ ಸೇಂಟರ್, ಪಾನಿಪುರಿ ಬಂಡಿ, ಝುರಾಕ್ಸ ಅಂಗಡಿಗಳನ್ನು, ಟಿ ಸ್ಟಾಲ್ ಗಳನ್ನು ಹಾಕಿ ರಸ್ತೆ ಇಲ್ಲದಂತೆ ಮಾಡಲಾಗಿದೆ. ಕೇವಲ ಅಂಗಡಿಮುಗ್ಗಟ್ಟುಗಳು ಮಾತ್ರವಲ್ಲದೆ ರಸ್ತೆ ಬದಿಯಲ್ಲಿಯೇ ಬುಲೆರೋ , ಪುರಸಭೆ ವಾಹನಗಳು ಹಾಗೂ ದ್ವಿಚಕ್ರ ವಾಹನಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸಿರುವ ಪರಿಣಾಮ ಸಂಚಾರ ದಟ್ಟಣೆ ಹೆಚ್ಚಾಗಿದೆ.

ಪ್ರತಿದಿನ ಮಹಿಳೆಯರು, ವೃದ್ದರು, ಗರ್ಭಿಣಿ ಮಹಿಳೆಯರು ಸೇರಿದಂತೆ ನೂರಾರು ಜನರು ನಾಡಕಚೇರಿ, ಪುರಸಭೆ ಕಾರ್ಯಲಯಕ್ಕೆ ತೆರಳಲು ರಸ್ತೆಯನ್ನು ಬಳಸುತ್ತಿದ್ದು, ಅಂಗಡಿ ಮತ್ತು ವಾಹನಗಳ ಅಕ್ರಮ ನಿಲುಗಡೆ ಯಿಂದ ಪಾದಚಾರಿಗಳು ಹಾಗೂ ವಾಹನ ಸವಾರರು ಪರದಾಡುವಂತಾಗಿದೆ. ಕೆಲವೊಮ್ಮೆ ತುರ್ತು ವಾಹನಗಳಿಗೂ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

"ಪುರಸಭೆ ಹಾಗೂ ನಾಡಕಚೇರಿಗೆ ದಾರಿ ಯಾವದಯ್ಯ?" ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದು, ಸಂಬಂಧಪಟ್ಟ ಅಧಿಕಾರಿಗಳು ಸಮಸ್ಯೆ ಗಮನಿಸಿದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ದೂರಿದ್ದಾರೆ. ನಾಡಕಾರ್ಯಲಯದ ಉತ್ತರಕ್ಕೆ ಮುಖ್ಯದ್ವಾರ ವಿದ್ದರೇ ಪಶ್ಚಿಮದಿಕ್ಕಿಗೆ ಬಿಡಲಾದ ಕಿಟಕಿಯಲ್ಲಿಯೇ ಸಾರ್ವಜನಿಕರಿಗೆ ಆನ್ ಲೈನ್ ದಾಖಲೆಗಳನ್ನು ಸಲ್ಲಿಸಲು ಸರದಿಯಲ್ಲಿ ನಿಂತ್ತುಕೋಳ್ಳುತ್ತಿದ್ದರು. ಆದರೆ ಆಸ್ಥಳದಲ್ಲಿಯೂ ಸಹ ಝುರಾಕ್ಸ ಅಂಗಡಿ ಅಳವಡಿಸಿದ್ದರಿಂದ ತೆ–ಊಂದರೆ ಉಂಟಾಗಿದೆಎಂದು ಸಾರ್ವಜನಿಕರು ಆರೋಪಿಸಿದ್ದಾರೆ. ನಾಡಕಾರ್ಯಲಯದ ಸೂತ್ತಲು ತ್ರೀಕೋನ ಆಕಾರದಲ್ಲಿ ಅಂಗಡಿ, ಡಬ್ಬಾ ಹಾಗೂ ತಳ್ಳುಗಾಡಿಗಳನ್ನು ನಿಲ್ಲಿಸಿ ವ್ಯಾಪಾರ ನಡೆಸುತ್ತಿದ್ದಾರೆ.

> ಡಬ್ಬಾ ಅಂಗಡಿಗಳ ಹಾವಳಿ ಮಿತಿಮಿರಿದೆ ಯಾವುದಕ್ಕೂ ಪುರಸಭೆಯಿಂದ ಪರವಾನಿಗೆ ನೀಡಿಲ್ಲ ಇಷ್ಟರಲ್ಲಿಯೇ ಪುರಸಭೆ ಆಡಳಿತಾಧಿಕಾರಿಯವರ ಗನಕ್ಕೆತಂದು ತೆರವುಗೋಳಿಸಲು ಕ್ರಮವಹಿಸಲಾಗುವುದು.
>
> ಪ್ರವೀಣ ಭೋಗಾರ ಮುಖ್ಯಾಧಿಕಾರಿಗಳು
> ಪುರಸಭೆ ಮುದಗಲ್ಲ.

> ನಾಡ ಕಾರ್ಯಲಯ ಪುರಸಭೆ ವ್ಯಾಪ್ತಿಗೆ ಬರುತ್ತದೆ ತೆರಳು ಕಾರ್ಯ ಪುರಸಭೆ ಅಧಿಕಾರಿಗಳು ಕ್ರಮವಹಿಸಬೇಕು
>
> ತುಳಜಾರಾಮ ಸಿಂಗ್
> ಉಪತಹಾಶೀಲ್ದಾರ ನಾಡಕಾರ್ಯಲಯ
> ಮುದಗಲ್ಲ.

ಆದರೆ ಈ ಬಗ್ಗೆ ಪುರಸಭೆ ಅಧಿಕಾರಿಗಳಾಗಲಿ, ನಾಡಕಾರ್ಯಲಯದ ಅಧಿಕಾರಿಗಳಾಗಲಿ ,ಪೊಲೀಸ ಇಲಾಖೆಯಾಗಲಿ ಸಂಬಂದಿಲ್ಲದಂತೆ ನಡೆದುಕೋಳ್ಳುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ನಾಡಕಾರ್ಯಲಯ ಮತ್ತು ಪರಸಭೆ ಮುಂಭಾಗದಲ್ಲಿ ಅಳವಡಿಸಲಾದ ಅಂಗಡಿಗಳನ್ನು ತೆರವುಗೋಳಿಸಬೇಕೆಂದು ಇಲ್ಲಿನ ಸಾರ್ವಜನಿಕರು ಒತ್ತಾಯಿಸಿದ್ದಾರೆ.

## ಹೊಸ ಮೃಗಾಲಯ ಪ್ರಸ್ತಾಪ ಸರ್ಕಾರದ ಮುಂದಿಲ್ಲ: ಖಂಡ್ರೆ



**ಹಾಸನ:** ಮಾನವ-ಆನೆ ಸಂಘರ್ಷ ತಗ್ಗಿಸಲು 2000 ಹೆಕ್ಟೇರ್ ಪ್ರದೇಶದಲ್ಲಿ ಆನೆಧಾಮ ನಿರ್ಮಿಸಲು ಸರ್ಕಾರ ಯೋಜನೆ ರೂಪಿಸಿದ್ದು, 8-10 ದಿನಗಳಲ್ಲಿ ಟೆಂಡರ್ ಪ್ರಕ್ರಿಯೆ ಆರಂಭಿಸಲು ಸೂಚಿಸಲಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದ್ದಾರೆ.

ಹಾಸನ ನಗರದ ಗೆಂಡೆಕಟ್ಟೆ ಅರಣ್ಯ ಅತಿಥಿಗೃಹದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಾಸನ, ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ನೂರಾರು ಆನೆಗಳು ಕಾಡಿನ ಹೊರಗೇ ಇದ್ದು, ಆನೆಗಳಿಂದ ಬೆಳೆ ಮತ್ತು ಜೀವಹಾನಿ ಆಗದಂತೆ ತಡೆಯಲು ಆನೆಧಾಮ ನಿರ್ಮಿಸಲಾಗುತ್ತಿದೆ ಎಂದರು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಮುಖ್ಯ ವನ್ಯಜೀವಿ ಪರಿಪಾಲಕರು ಈ ಸಂಬಂಧ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು ಶೀಘ್ರವೇ ಟೆಂಡರ್ ಕರೆಯಲಾಗುವುದು ಎಂದರು.

**ಹೊಸ ಮೃಗಾಲಯ ಪ್ರಸ್ತಾಪ ಇಲ್ಲ:**

ಹಾಸನದಲ್ಲಿ ಮೃಗಾಲಯ ಸ್ಥಾಪಿಸುವ ಸಂಬಂಧ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಒಂದು ಹೊಸ ಮೃಗಾಲಯ ಸ್ಥಾಪಿಸಲು ಕೇಂದ್ರದ ಅನುಮತಿ ಪಡೆಯಬೇಕಾಗುತ್ತದೆ. ಅನುದಾನವನ್ನೂ ನೀಡಬೇಕಾಗುತ್ತದೆ. ನಿರ್ವಹಣೆಯ ಸಮಸ್ಯೆಯೂ ಇದೆ ಎಂದರು.

ರಾಜ್ಯದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಮೈಸೂರು ಮತ್ತು ಬನ್ನೇರುಘಟ್ಟ ಮೃಗಾಲಯವಿದ್ದು, ಇದರ ಜೊತೆಗೆ ಹಲವು ಝೂಗಳು ಕಾರ್ಯ ನಿರ್ವಹಿಸುತ್ತಿವೆ. ಮೈಸೂರು ಮತ್ತು ಬನ್ನೇರುಘಟ್ಟ ಮೃಗಾಲಯದ ಆದಾಯದಿಂದ ಬೇರೆ ಮೃಗಾಲಯದ ಖರ್ಚುವೆಚ್ಚ ಸರಿದೂಗಿಸಲಾಗುತ್ತಿದೆ. ಹೀಗಾಗಿ ಹೊಸ ಮೃಗಾಲಯ ಸ್ಥಾಪನೆ ಪ್ರಸ್ತಾಪ ಸರ್ಕಾರದ ಮುಂದಿಲ್ಲ ಎಂದು ಸ್ಪಷ್ಟಪಡಿಸಿದರು.


**ಮಡೆನೂರು 100 ಎಕರೆಭೂಮಿ ಮರು ವಶ:**

ರಾಜ್ಯದಲ್ಲಿ ಅರಣ್ಯ ಇಲಾಖೆಗೆ ಸೇರಿದ ಯಾವುದೇ ಬೆಲೆಬಾಳುವ ಭೂಮಿಯನ್ನು ಮರು ವಶಪಡಿಸಿಕೊಳ್ಳಲು ಸರ್ಕಾರ ಕ್ರಮವಹಿಸಿದ್ದು, ಹಾಸನ ನಗರದ ಬಳಿ ಇರುವ ಮಡೇನೂರಿನಲ್ಲಿ 100 ಎಕರೆ ಅರಣ್ಯ ಪ್ರದೇಶವನ್ನು ಮರು ವಶಪಡಿಸಿಕೊಳ್ಳಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ ಸೆಕ್ಷನ್ 4 ಆದ ಬಳಿಕ ಸೆಕ್ಷನ್ 17 ಅಂದರೆ ಅರಣ್ಯ ಎಂದು ಘೋಷಿಸುವ ಪ್ರಕ್ರಿಯೆ ಮಂದಗತಿಯಲ್ಲಿ ಸಾಗಿದ್ದು, ವ್ಯವಸ್ಥಾಪನಾಧಿಕಾರಿಗಳ (ಫಾರೆಸ್ಟ್ ಸೆಟ್ಲ್ ಮೆಂಟ್ ಆಫೀಸರ್) ನೇಮಕಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಏಳುಕೊಂಡಲು, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಮತ್ತಿತರರು ಉಪಸ್ಥಿತರಿದ್ದರು.

## ಡೀಸೆಲ್ ಅಭಾವ: ಬಂಕ್‌ಗಳ ಮುಂದೆ ಸರತಿ ಸಾಲು..!



**ಕೆಂಭಾವಿ:** ಇತ್ತೀಚಿನ ದಿನಗಳಲ್ಲಿ ತೀವ್ರವಾಗಿ ಕಾಡುತ್ತಿರುವ ಡೀಸೆಲ್ ಕೊರತೆಯಿಂದಾಗಿ ಎಲ್ಲೆಡೆ ರೈತರು, ಖಾಸಗಿ ವಾಹನಗಳ ಮಾಲೀಕರು ಹಾಗೂ ಆಟೋ, ಟಂ-ಟಂ ಚಾಲಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಅವರ ದೈನಂದಿನ ದುಡಿಮೆಗೆ ಭಾರಿ ಹಿನ್ನಡೆ ಉಂಟಾಗಿದೆ. ಪಟ್ಟಣದ ಸೇರಿದಂತೆ ವಲಯದ ಬಹುತೇಕ ಪೆಟ್ರೋಲ್ ಬಂಕ್‌ಗಳು ಡೀಸೆಲ್ ಇಲ್ಲದೆ ಸಂಪೂರ್ಣ ಖಾಲಿ ಖಾಲಿಯಾಗಿದ್ದವು.

ಆದರೆ, ಸೋಮವಾರ ಸಂಜೆ ಪಟ್ಟಣದ ಪ್ರಮುಖ ಬಂಕ್ ಒಂದಕ್ಕೆ ಡೀಸೆಲ್ ಬಂದಿದೆ ಎನ್ನುವ ಸುದ್ದಿ ತಿಳಿಯುತ್ತಿದ್ದಂತೆ, ಇಂಧನ ತುಂಬಿಸಿಕೊಳ್ಳಲು ವಾಹನ ಸವಾರರು ಮುಗಿಬಿದ್ದರು. ಕೇವಲ ಕೆಲವೇ ನಿಮಿಷಗಳಲ್ಲಿ ಬಂಕ್‌ನಿಂದ ಸುಮಾರು ಅರ್ಧ ಕಿಲೋಮೀಟರ್ ದೂರದವರೆಗೆ ಶಾಲಾ ವಾಹನಗಳು, ಟ್ರ್ಯಾಕ್ಟರ್‌ಗಳು, ಆಟೋ ಹಾಗೂ ಟಂ-ಟಂಗಳು ಸರತಿಯಲ್ಲಿ ಬಂದು ನಿಂತ ದೃಶ್ಯ ಒಂದೆಡೆಯಾದರೆ ಖಾಲಿ ಕ್ಯಾನಗಳು ಹಿಡಿದುಕೊಂಡ ಬಂದ ಗ್ರಾಹಕರ ಸರತಿ ಕೂಡ ಕಂಡುಬಂದಿತು. ದಿನವಿಡೀ ಇಂಧನವಿಲ್ಲದೆ ಪರದಾಡುತ್ತಿದ್ದ ಸವಾರರು, ಸೋಮವಾರ ಸಂಜೆ ಡೀಸೆಲ್ ಸಿಗುವ ಆಸೆಯಿಂದ ಗಂಟೆಗಟ್ಟಲೆ ಕ್ಯೂನಲ್ಲಿ ನಿಂತು ಇಂಧನ ಪಡೆದುಕೊಂಡರು. ಒಟ್ಟಿನಲ್ಲಿ ಈ ಇಂಧನ ಕೊರತೆಯು ಸ್ಥಳೀಯ ಸಾರಿಗೆ ಹಾಗೂ ಕೃಷಿ ಚಟುವಟಿಕೆಗಳ ಮೇಲೆ ತೀವ್ರ ಪರಿಣಾಮ ಬೀರಿದೆ.

## ಕಸಾಯಿ ಖಾನೆ: ಗೋವುಗಳ ರಕ್ಷಣೆ



**ಬಳ್ಳಾರಿ:** ಕಸಾಯಿ ಖಾನೆಗೆ ಸಾಗಿಸಿಸಲು ಸಿದ್ಧವಾಗಿದ್ದ ಗೋವುಗಳನ್ನು ನಗರದಲ್ಲಿ ಇಂದು ರಕ್ಷಣೆ ಮಾಡಲಾಗಿದೆ. ಬೇರೆಯೊಂದು ಕಡೆಯಿಂದ ಖರೀದಿ ಮಾಡಿ ಹಳೇ ಬೈಪಾಸ್ ನ ಗೋಲಬಡಿ ದಾರಿಯಲ್ಲಿ ಐವತ್ತಕ್ಕೂ ಹೆಚ್ಚು ಗೋವುಗಳನ್ನು ಕೊಟ್ಟಿಗೆಯೊಂದರಲ್ಲಿ ಕೂಡಿ ಹಾಕಿಟ್ಟಿತ್ತು. ಹಿಂದೂ ಸಂಘಟನೆಯ ಮಾಹಿತಿ ಮೇರೆಗೆ ಕೌಲಬಜಾರ್ ಪೊಲೀಸರ ದಾಳಿ ನಡೆಸಿದಾಗ ಕೊಟ್ಟಿಯಲ್ಲಿ ಯಾಕೆ ಗೋವುಗಳನ್ನು ಸಂಗ್ರಹ ಮಾಡಲಾಗಿತ್ತು ಎನ್ನುವ ಪ್ರಶ್ನೆಗೆ ಸೂಕ್ತ ಉತ್ತರವಿಲ್ಲ. ಆದ್ರೇ ಬಕ್ರೀದ್ ಹಬ್ಬದ ಪ್ರಯುಕ್ತ ಸಂಗ್ರಹಿಸಿಡಲಾಗಿತ್ತು ಎಂದು ಹಿಂದೂ ಸಂಘಟನೆಯ ಮುಖಂಡರು ಆರೋಪಿಸಿದ್ದಾರೆ. ಸದ್ಯ ಎಲ್ಲವನ್ನೂ ಗೋಶಾಲೆಗೆ ರವಾನೆ ಮಾಡೋದಾಗಿ ಪೊಲೀಸರು ಹೇಳಿದ್ದಾರೆ.

# ಬಾಬು ಜಗಜೀವನ್ ರಾಮ್ ವೃತ್ತ ಅನಾವರಣ

- **ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ**

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿಯಲ್ಲಿ ಹಸಿರು ಕ್ರಾಂತಿಯ ಹರಿಕಾರರು, ಶೋಷಿತರ ಧ್ವನಿಯಾಗಿ ದೇಶದ ರಾಜಕೀಯ ಇತಿಹಾಸದಲ್ಲಿ ಅಜರಾಮರರಾಗಿರುವ ರಾಷ್ಟ್ರನಾಯಕ ಡಾ.ಬಾಬು ಜಗಜೀವನ್ ರಾಮ್ ಅವರ ವೃತ್ತ ಅನಾವರಣ ಕಾರ್ಯಕ್ರಮವು ದಿನಾಂಕ 26/05/2026 ಮಂಗಳವಾರ ಬೆಳಿಗ್ಗೆ 10:00 ಗಂಟೆಗೆ ಪೊಲೀಸ್ ಸ್ಟೇಷನ್ ಮುಂಭಾಗದ ಹೊಸಪೇಟೆ ರಸ್ತೆಯಲ್ಲಿ ಸರಳ ಹಾಗೂ ಗೌರವಯುತವಾಗಿ ನೆರವೇರಿತು.

ಈ ಕಾರ್ಯಕ್ರಮದಲ್ಲಿ ವಿಜಯನಗರ ಜಿಲ್ಲಾ ಹಗರಿಬೊಮ್ಮನಹಳ್ಳಿ ತಾಲೂಕು ಬಾಬು ಜಗಜೀವನ್ ರಾಮ್ ಸಂಘದ ಅಧ್ಯಕ್ಷರಾದ ಹೆಚ್. ಪ್ರಭಾಕರ್ ಹಾಗೂ ಸಮಸ್ತ ದಲಿತಪರ ಸಂಘಟನೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ಪದಾಧಿಕಾರಿಗಳು ಮತ್ತು ಸರ್ವ ಸದಸ್ಯರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ತಾಲೂಕು ಅಧ್ಯಕ್ಷರಾದ ಹೆಚ್. ಪ್ರಭಾಕರ್ ಮಾತನಾಡಿ, "ಡಾ. ಬಾಬು ಜಗಜೀವನ್ ರಾಮ್ ಅವರು ಶೋಷಿತರ ಪರ ಹೋರಾಡಿದ ಮಹಾನ್ ನಾಯಕರು. ಅವರ ಆದರ್ಶಗಳು ಸಮಾಜಕ್ಕೆ ದಾರಿದೀಪವಾಗಿವೆ," ಎಂದು ಹೇಳಿದರು.



ದಲಿತ ಸಂಘರ್ಷ ಸಮಿತಿ ತಾಲೂಕು ಅಧ್ಯಕ್ಷರಾದ ಹೆಗ್ಡಳ್ ಪರಶುರಾಮ್ ಮಾತನಾಡಿ, "ಸಮಾನತೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ನಾಯಕರ ಹೆಸರಿನಲ್ಲಿ ವೃತ್ತ ನಿರ್ಮಾಣ ಮಾಡಿರುವುದು ಹೆಮ್ಮೆಯ ವಿಚಾರ," ಎಂದರು.

ಕೆಚ್ಚಿನಬಂಡಿ ದುರುಗಪ್ಪ ಮಾತನಾಡಿ, "2011-12ರಲ್ಲಿ ಹಿಂದಿನ ಶಾಸಕರಾದ ಮಾನ್ಯ ನೇಮಿರಾಜ್ ನಾಯ್ಕ ಅವರು ಡಾ. ಬಿ.ಆರ್. ಅಂಬೇಡ್ಕರ್ ವೃತ್ತವನ್ನು ಪೂಜೆ ಸಲ್ಲಿಸುವ ಮೂಲಕ ಅನಾವರಣಗೊಳಿಸಿದ್ದರು. ನಾಲ್ಕು ವರ್ಷಗಳ ಕಾಲ ಅಲ್ಲಿಯೇ ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಗುತ್ತಿತ್ತು. ನಂತರ ಕಾರಣಾಂತರಗಳಿಂದ ಅಂಬೇಡ್ಕರ್ ಸರ್ಕಲ್ ಅನ್ನು ರಾಮನಗರ ಸರ್ಕಲ್‌ಗೆ ಸ್ಥಳಾಂತರ ಮಾಡಲಾಯಿತು. ಇದೀಗ ಅದೇ ಸ್ಥಳವನ್ನು ಹಾಲಿ ಶಾಸಕರಾದ ಮಾನ್ಯ ನೇಮಿರಾಜ್ ನಾಯ್ಕ ಅವರ ಸಲಹೆ ಹಾಗೂ ಸಹಕಾರದ ಮೇರೆಗೆ ಡಾ. ಬಾಬು ಜಗಜೀವನ್ ರಾಮ್ ವೃತ್ತ ಎಂದು ನಾಮಕರಣ ಮಾಡಲಾಗಿದೆ," ಎಂದು ವಿವರಿಸಿದರು.

ಕಡ್ಲಬಾಳು ಪಕ್ಕೀರಪ್ಪ ಮಾತನಾಡಿ, "ಡಾ. ಬಾಬು ಜಗಜೀವನ್ ರಾಮ್ ಅವರು ದಲಿತರು, ಶೋಷಿತರು ಮತ್ತು ಹಿಂದುಳಿದ ವರ್ಗಗಳ ಧ್ವನಿಯಾಗಿ ದೇಶದ ರಾಜಕೀಯದಲ್ಲಿ ಅಚ್ಚಳಿಯದ ಗುರುತು ಮೂಡಿಸಿದ್ದಾರೆ. ಇಂತಹ ಮಹಾನ್ ನಾಯಕರ ಸ್ಮರಣೆ ಮುಂದಿನ ಪೀಳಿಗೆಗೆ ಪ್ರೇರಣೆಯಾಗಬೇಕು," ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಹಿರಿಯರಾದ ಯಡ್ರಮ್ಮಹಳ್ಳಿ ಮರಿಯಪ್ಪ, ರಾಮೇಶ್ ಪೂಜಾರಿ, ನಾಗರಾಜ್ ಕಲ್ಲಹಳ್ಳಿ, ಹೆಚ್. ರಂಗನಾಥ್, ವಕೀಲರಾದ ನವೀನ್ ಮಹೇಂದ್ರ, ದುರುಗಪ್ಪ ಕಿತ್ತೂರು ಭಾಗವಹಿಸಿದ್ದರು. ಅಲ್ಲದೆ ಚಿಂತ್ರಪಳ್ಳಿ ರಮೇಶ್, ದಶಮಾಪುರ ಮರಿಯಪ್ಪ, ಅರೆಗೊಂಡನಹಳ್ಳಿ ದುರುಗಪ್ಪ, ದೂಪದಹಳ್ಳಿ ಕೋಟೇಪ್ಪ, ಕೆಚ್ಚಿನಬಂಡಿ ಕೆಂಚಪ್ಪ ಬಸವರಾಜ್, ಗೋಣೆಪ್ಪ, ಶಿವಮೂರ್ತಿ ನೆಲ್ಲಕುದುರೆ, ಪ್ರತಾಪ್ ಬೆಣ್ಣಿಕಲ್, ಕೊಟ್ರೇಶ, ಸುಬ್ರಹ್ಮಣ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಪ್ರೀತಿ ಮುಂದೆ ಯಾವುದೇ ಪ್ರಶಸ್ತಿ ದೊಡ್ಡದಲ್ಲ

- **ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ**

ನಿಜಕ್ಕು ನಾನು ಬಹಳ ಸಂತೋಷ ಪಟ್ಟೆ ಇಂತಹ ಸಮಾರಂಭ ಹಮ್ಮಿಕೊಂಡ ವಿದ್ಯಾರ್ಥಿಗಳ ಕಾರ್ಯ ಶ್ಲಾಘನೀಯ. ಶಿಕ್ಷಕರಿಗೆ ವಿದ್ಯಾರ್ಥಿಗಳು ನೀಡುವ ಪ್ರೀತಿ ಮುಂದೆ ಯಾವುದೇ ಪ್ರಶಸ್ತಿ ನಮಗೆ ದೊಡ್ಡದಲ್ಲ.ಎಂದು ಶಿಕ್ಷಕರಾದ ಚಾಗಪ್ಪ ತಿಳಿಸಿದ್ದರು. ತಾಲೂಕಿನ ಬಟಗೇರಾ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ 2009-10 ನೇ ಸಾಲಿನ ವಿಧ್ಯಾರ್ಥಿಗಳಿಂದ ಹಮ್ಮಿಕೊಂಡಿರುವ ಗುರು ವಂದನಾ ಹಾಗೂ ಸ್ನೇಹ ಸಮ್ಮಿಲನದಲ್ಲಿ ಭಾಗವಹಿಸಿ ಮಾತನಾಡಿದ ಅವರು ಈ ಗ್ರಾಮವು ನಮಗೆ ನೀಡಿದ ಸಹಾಯ ಸಹಕಾರ ಪ್ರೀತಿ ಜೀವನದಲ್ಲಿ ಮರೆಯಲು ಸಾಧ್ಯವಿಲ್ಲ ಎಂದು ಭಾವುಕರಾಗಿ ನುಡಿದರು. ಶಿಕ್ಷಕರಾದ ಸುರೇಶ ಮಾತನಾಡಿ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಮಾತ್ರವಲ್ಲ ಶಿಕ್ಷಕರ ಸ್ನೇಹ ಸಮ್ಮಿಲನ ವಾಗಿದೆ ಕಾರ್ಯಕ್ರಮ ಯಶಸ್ಸಿಗೆ ಶ್ರಮಿಸಿದ ಎಲ್ಲರಿಗೂ ಅಭಿನಂದಿಸಿದರು. ಶ್ರೀನಿವಾಸ ಮಾತನಾಡಿ ಶಿಕ್ಷಣದ ಮಹತ್ವ ತಿಳಿಸಿ ಕಷ್ಟಗಳನ್ನು



ಎದುರಿಸಿ ಮುಂದುವರೆದರೆ ಗೆಲುವು ಖಚಿತ ಎಂದು ವಿದ್ಯಾರ್ಥಿಗಳಿಗೆ ಪ್ರೇರೆಪಿಸಿದರು.

ಬಸವರಾಜ ಪೂಜಾರಿ ಮಾತನಾಡಿ ನಮ್ಮ ಸಮಯದಲ್ಲಿ ಇದ್ದ ಶಿಕ್ಷಣ ವಾತಾವರಣ ಈಗ ಕಾಣುತ್ತಿಲ್ಲ.ಶಾಲೆ ಕಡೆಗೆ ಎಲ್ಲರ ಗಮನ ಇರಲಿ ಎಂದರು. ವಿಷಕಂಠಯ್ಯ ರಾಜಕುಮಾರ ಪಾಟೀಲ ಗೀತೆ ಹಾಡಿ ಗಮನ ಸೆಳೆದರು.

ಮುಖ್ಯ ಗುರುಗಳಾದ ಭಾರತಿ ಗೌಡ್ರ ಹಿಂದಿನ ಮುಖ್ಯಗುರು ಸುಧಾಕರ, ಭೂಧಾನಿ ಹಣಮಂತರಾವ ಪೊ. ಪಾಟೀಲ, 2009-10 ನೇ ಸಾಲಿನ ಪ್ರಾಥಮಿಕ ಹಾಗೂ ಪ್ರಾಢ ಶಾಲೆ ಮುಖ್ಯ ಗುರುಗಳು ಶಿಕ್ಷಕರು, ಅಲ್ಲದೆ ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಮುಖ್ಯಗುರುಗಳು ಹಾಗು ಶಿಕ್ಷಕರು ಸೇರಿದಂತೆ ಆನೇಕರು ಉಪಸ್ಥಿತರಿದ್ದರು.

## ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬಸ್ ವಿಸ್ತರಣೆ

- **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ**

ಬೀದರ್ ತಾಲ್ಲೂಕಿನ ಸಂಗೋಳಗಿವರೆಗೆ ಚಲಿಸುತಿದ್ದ ಬಸ್ ನ್ನು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಭಾಲ್ಕಿ ತಾಲ್ಲೂಕಿನ ಹಾಲಹಳ್ಳಿ (ಕೆ) ಗ್ರಾಮದವರೆಗೆ ಆಗಮಿಸಿದ ಹಿನ್ನೆಲೆಯಲ್ಲಿ ಡಿಡಿಪಿಯು ಚಂದ್ರಕಾಂತ್ ಶಹಾಬಾದಕರ್, ಪಿಯು ಕಾಲೇಜಿನ ಪ್ರಾಚಾರ್ಯ ಶಾಂತಲಾ ಎ. ಎಸ್. ವಿದ್ಯಾರ್ಥಿಗಳು, ಗ್ರಾಮಸ್ಥರು ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪಿಯು ಕಾಲೇಜಿನ ಪ್ರಾಚಾರ್ಯ ಶಾಂತಲಾ ಎ. ಎಸ್., ಸಂಗೋಳಗಿ ಗ್ರಾಮದಿಂದ ಪ್ರತಿನಿತ್ಯ ಕಾಲೇಜಿಗೆ ಬರಲು ತುಂಬಾ ಅನಾನುಕೂಲ ಆಗುತ್ತಿತ್ತು. ಈ ಸಮಸ್ಯೆಯನ್ನು ಪರಿಹರಿಸಲು ಗ್ರಾಮದ ಪ್ರಮುಖರ ಬಳಿ ಕೇಳಿಕೊಂಡಿದ್ದೆ.

ನನ್ನ ಮನವಿಗೆ ಸ್ಪಂದಿಸಿದ ಗ್ರಾಮಸ್ಥರು ಬಸ್ ಸೌಲಭ್ಯ ವಿಸ್ತರಣೆಗಾಗಿ ಜನಪ್ರತಿನಿಧಿಗಳಿಗೆ ಮತ್ತು ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ,



ಸಂಸದ ಸಾಗರ್ ಖಂಡ್ರೆ ಅವರ ಸೂಚನೆಯಂತೆ ಸಾರಿಗೆ ಅಧಿಕಾರಿಗಳು ಹಾಲಹಳ್ಳಿ ಗ್ರಾಮದವರೆಗೆ ಬಸ್ ಸೇವೆ ವಿಸ್ತರಿಸಿದ್ದಕ್ಕಾಗಿ ತುಂಬಾ ಸಂತೋಷವಾಗುತ್ತಿದೆ ಎಂದು ಹೇಳಿದರು. ವಿದ್ಯಾರ್ಥಿಗಳು ಬಸ್ ಸೌಲಭ್ಯದ ಸದುಪಯೋಗಪಡಿಸಿಕೊಂಡು ಪ್ರತಿನಿತ್ಯ ಕಾಲೇಜಿಗೆ ಆಗಮಿಸಿ ಉತ್ತಮ ಶೈಕ್ಷಣಿಕ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

ಡಿಡಿಪಿಯು ಚಂದ್ರಕಾಂತ್ ಶಹಾಬಾದ್ಕರ್, ಗ್ರಾಮದ ಪ್ರಮುಖರಾದ ರವಿ ಗಂಗಶೆಟ್ಟಿ, ಸಂಜೀವಕುಮಾರ, ಚಂದ್ರಕಾಂತ್ ಜೊತೆಪ್ಪ, ರವಿಕುಮಾರ, ಶಿವಕುಮಾರ ಸದಾಶಿವ, ಶಿವಕುಮಾರ ಜಮಾದಾರ್, ಅಫ್ಸರ್ ಅಲಿ, ಶಿವಕುಮಾರ ಸೇರಿದಂತೆ ಇತರರು ಇದ್ದರು.

# ಮಕ್ಕಳ ಭವಿಷ್ಯ ರೂಪಿಸುವಲ್ಲಿ ಬೇಸಿಗೆ ಶಿಬಿರಗಳು ವರದಾನ

- **ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ**

ಮಕ್ಕಳ ಭವಿಷ್ಯ ರೂಪಿಸುವಲ್ಲಿ ಬೇಸಿಗೆ ಶಿಬಿರಗಳು ಮಕ್ಕಳ ಪಾಲಿಗೆ ವರದಾನವಾಗಿವೆ ಎಂದು ಯಾದಗಿ-ರಿಯ ಕೃಷಿ ಇಲಾಖೆಯ ಉಪ ನಿರ್ದೇಶಕ ಹಂಪಣ್ಣ ಚೌಹಾನ್ ಅವರು ಗೇದಗೇರಿಯ ಎಕ್ಸಫರ್ಡ ಇಂಗ್ಲಿಷ್ ಮೀಡಿಯಂ ರೇಸಿಡೆನ್ಸಿಯಲ್ ನಲ್ಲಿ ಬೇಸಿಗೆ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಜ್ಯೋತಿ ಬೆಳಗಿಸಿ ಮಾತನಾಡಿ,ಈ ಸಂಸ್ಥೆ ಹುಟ್ಟು ಹಾಕಿದ್ದು ನಿಮಗಾಗಿ, ನಿಮ್ಮ ಮಕ್ಕಳಿಗಾಗಿ,ಈ ಸಂಸ್ಥೆ ನಮ್ಮದು ಎಂಬ ಭಾವನೆ ನಿಮ್ಮೆಲ್ಲರಲ್ಲಿ ಇರಲಿ ನಿಮ್ಮ ಮಕ್ಕಳು ಉನ್ನತ ಹುದ್ದೆ ಪಡೆದು ಉತ್ತಮ ಸಂಸ್ಕಾರವಂತರಾಗಲಿ ಎಂದರು.

ಅಕ್ಷರ ಕಲಿತ ವ್ಯಕ್ತಿ ಭ್ರಷ್ಟರಾಗಬಹುದು ಆದ-ರೆ ಸಂಸ್ಕಾರ ಸಂಸ್ಕೃತ ಕಲಿತ ವ್ಯಕ್ತಿಗಳು ಎಂದು ಕೂಡ ಭ್ರಷ್ಟರಾಗುವದಿಲ್ಲ, ಆದ್ದರಿಂದ ಮಕ್ಕಳು



ಜ್ಞಾನದ ಜೋತೆಗೆ ಸಂಸ್ಕಾರವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಯಲಬುರ್ಗಾದ ಬಸವಲಿಂಗೇಶ್ವರ ಸ್ವಾಮೀಜಿ ಹಾಗು ನಿಲೋಗಲ್ಲದ ಶಿವನಾಗಯ್ಯ ಹಿರೇಮಠ ಸ್ವಾಮೀಜಿ ಅವರು ಸಾನಿದ್ಯವಹಿಸಿ ಮಾತನಾಡಿದರು.

ಗೇದಗೇರಿಯ ವಿದ್ಯಾಬಾರತಿ ಶಿಕ್ಷಣ ಸಂಸ್ಥೆಯ ಅದ್ಯಕ್ಷೆ ಶ್ರೀಮತಿ ಶಶಿಕಲಾ ಎಚ್.ಚೌಹಾನ್ ಅದ್ಯಕ್ಷತೆ ವಹಿಸಿದ್ದರು.ನಮ್ಮ ಸಂಸ್ಥೆಗೆ ಬರುವ ಪಾಲಕರು ಈ ಮಕ್ಕಳು ನಮ್ಮ ಮಕ್ಕಳು ಅಲ್ಲಾ ನಿಮ್ಮ ಮಕ್ಕಳು ಎಂದು ಹೇಳಿ ಹೊಗುತ್ತಿದ್ದರು, ಅದರಂತೆ ಎಲ್ಲಾ ಮಕ್ಕಳೊಂದಿಗೆ ಪ್ರೀತಿಯ ಸಂಬಧ ಬೆಳೆಸಿರುವೆ ಇಂದು ಅವರು ನಮ್ಮನ್ನು ಬಿಟ್ಟು ತಮ್ಮ ಊರಿಗೆ ಹೊಗುತ್ತಿರುವದು ನಮಗೆ ದುಃಖವಾಗುತ್ತಿದೆ ಎಂದು ಸಂಸ್ಥೆಯ ಉಪಾಧ್ಯಕ್ಷೆ ಲಲೀತಾ ಚೌಹಾನ್ ಅವರು ಮಾತನಾಡಿದರು.

ಕಾರ್ಯದರ್ಶಿ ಗಣೇಶ ಎನ್. ಚೌಹಾನ್, ಪ್ರಾಚಾರ್ಯ ಸೋಮಶೇಖರ ಎನ್, ಮುಖ್ಯಗುರುಗಳಾದ ದೇವಪ್ಪ ವಾಲ್ಮೀಕಿ, ಸುನೀಲ ದೇಸಾಯಿ, ಮುಖಂಡರಾದ ಮದಪ್ಪ ಮಂಡಲಗೇರಿ,ಕಲ್ಲಪ್ಪ ಕಬ್ಬಿಣದ,ಗಂಗೂರಪ್ಪ ಕವಲೂರ,ಅಶೋಕ ಕಲಾಲ್, ಬಸವರಾಜ ಗುಡಿಹಿಂದಲ,ಸೀನಪ್ಪ ರಾಠೋಡ ಹಾಗು ಸಂಸ್ಥೆಯ ಗುರುಗಳು ಸೇರಿದಂತೆ ಜಿಲ್ಲೆಯ ಸುತ್ತಮುತ್ತಲಿನ ವಿದ್ಯಾರ್ಥಿಗಳ ಪಾಲಕರು ಭಾಗವಹಿಸಿದ್ದರು.ಮಕ್ಕಳು ಸಂಸ್ಥೆಯ ಬಗ್ಗೆ ಉತ್ತಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

# ಅತ್ಯಾಚಾರ ಎಸಗಿದ ದುಷ್ಟರ ಬಂಧನಕ್ಕೆ ಆಗ್ರಹ

- **ಮಲ್ಲಮ್ಮ ನುಡಿ ವಾರ್ತೆ ಹುಣಸೂರು**

ಬೀದರ್ ಜಿಲ್ಲೆಯಲ್ಲಿ ದಲಿತ ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ದುಷ್ಟರನ್ನು ಕೂಡಲೇ ಬಂಧಿಸಿ ತಪ್ಪಿತಸ್ಥರಿಗೆ ಗಲ್ಲು ಶಿಕ್ಷೆ ವಿಧಿಸಬೇಕೆಂದು ಹಾಗೂ ಶಿವಮೊಗ್ಗದಲ್ಲಿ ದಲಿತರಿಗೆ ರಸ್ತೆಗೆ ನಿರ್ಭಂಧಿಸಿ ದೌರ್ಜನ್ಯವೆಸಗಿರುವುದನ್ನು ಖಂಡಿಸಿ ದಲಿತ ಮಹಿಳಾ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯು ಸರ್ಕಾರಕ್ಕೆ ಒತ್ತಾಯಿಸಿ ತಹಸೀಲ್ದಾರ್ ಮಂಜುನಾಥ್ ರವರಿಗೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ದಲಿತ ಮಹಿಳಾ ಒಕ್ಕೂಟ-ದ ಜಿಲ್ಲಾ ಸಂಚಾಲಕರಾದ ಮಹದೇವಮ್ಮ ಕಟ್ಟೆಮಳಲವಾಡಿದವರು ಮಾತನಾಡಿ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲೂಕಿನ ಅರೆಬೆಳಸಿ ಗ್ರಾಮದಲ್ಲಿ ಪರಿಶಿಷ್ಟ ಜನಾಂಗದ ಕಾಲೋನಿಯಲ್ಲಿ ವಾಸ ಮಾಡುತ್ತಿರುವ ದಲಿತ ಸಮುದಾಯದವರು ತಿರುಗಾಡುವ ರಸ್ತೆಯನ್ನು ಸವರ್ಣೀಯರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ರಸ್ತೆ ಸಂಪರ್ಕವನ್ನು ನಿರ್ಬಂಧಿಸಿರುವುದನ್ನು ತೀವ್ರವಾಗಿ ಖಂಡಿಸುತ್ತೇನೆ. ಸರ್ಕಾರ ದಲಿತರ ಅಭಿವೃದ್ಧಿಗೆ ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದರೂ ಸಹ ಸವರ್ಣೀಯರಿಂದ ದಲಿತರ ಮೇಲೆ ನಿರಂತರ ದೌರ್ಜನ್ಯ ನಡೆಯತ್ತಲೇ ಇದೆ. ಇದನ್ನು ತೀವ್ರವಾಗಿ ಖಂಡಿಸುತ್ತೇನೆ.

ಬೀದರ್ ಜಿಲ್ಲೆಯ ಕಮಲ ನಗರ/ಔರಾದ



ತಾಲೂಕಿನಲ್ಲಿ ಪ್ರತಿಭಾವಂತ ಕಬಡ್ಡಿ ಆಟಗಾರ್ತಿ ಶೋಭಾ ರಾಣಡೆ ಎಂಬ ದಲಿತ ಅಪ್ರಾಪ್ತ ಬಾಲಕಿಯನ್ನು ಅತ್ಯಾಚಾರ ಮಾಡಿ ಅತ್ಯಂತ ಭೀಕರವಾಗಿ, ಹೀನಾಯವಾಗಿ ಕೊಲೆ ಮಾಡಿರುವುದನ್ನು ತೀವ್ರವಾಗಿ ಖಂಡಿಸುತ್ತೇನೆ.

ಬಾಲಕಿಯ ಮೇಲಿನ ಅತ್ಯಾಚಾರ ಕ್ರೂರ ದೌರ್ಜನ್ಯ ಮತ್ತು ಕೊಲೆ ಪ್ರಕರಣ ಇಡೀ ಮಾನವೀಯತೆಯನ್ನೇ ತಲೆತಗ್ಗಿಸುವಂತೆ ಮಾಡಿದೆ. ಒಬ್ಬ ಉದಯೋನ್ಮುಖ ಕ್ರೀಡಾಪಟುವಿನ ಕನಸು ಭವಿಷ್ಯ ಮತ್ತು ಜೀವನವನ್ನು ಇಷ್ಟು ಅಮಾನವೀಯವಾಗಿ ಹೊಸಕಿ ಹಾಕಿರುವುದು ಮನಕಲಕುವಂತೆ ಮಾಡಿದೆ.

75 ವರ್ಷಗಳ ಸ್ವಾತಂತ್ರ್ಯ ಭಾರತದಲ್ಲಿ ಈ ನೆಲದ ಮೂಲ ನಿವಾಸಿಗಳ ಬದುಕು ಮತ್ತು ಭಾವನೆಗಳು ಇಂದಿಗೂ ಶೋಚನೀಯ. ದಲಿತ ಸಮುದಾಯಗಳು ವಾಸಿಸುವ ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಒಂದು ಕಡೆಯಾದರೆ ಸೌಲಭ್ಯಗಳನ್ನು ಉಪಯೋಗಿಸದಂತೆ ಮೇಲ್ದರ್ಜೆಯವರ ದೌರ್ಜನ್ಯ ಇವೆರಡರ ನಡುವೆ ದಲಿತ ಹೆಣ್ಣು ಮಕ್ಕಳ ಮೇಲಿನ ನಿರಂತರ ದೌರ್ಜನ್ಯ ಮತ್ತು ಅತ್ಯಾಚಾರ ಹಾಗೂ ಹತ್ಯೆಗಳು ಈ ದೇಶದ ಶೋಷಿತ ಸಮುದಾಯಗಳ ಮನಸ್ಸನ್ನು ಕಂಗಡಿಸಿದೆ.

ಇಂತಹ ಕ್ರೂರ ಕೃತ್ಯ ಎಸಗಿದ ರಾಕ್ಷಸರಿಗೆ ಕಾನೂನಿನ ಅಡಿಯಲ್ಲಿ ಅತ್ಯಂತ ಕಠಿಣ ಶಿಕ್ಷೆಯಾಗಬೇಕು. ಇನ್ನು ಮುಂದೆ ಯಾರು ಇಂತಹ ಘೋರ ಅಪರಾಧ ಮಾಡಲು ಧೈರ್ಯ ಮಾಡದಂತೆ ಕಟ್ಟುನಿಟಿನ ಕ್ರಮ ಕೈಗೊಳ್ಳಬೇಕು. ತಪ್ಪಿತಸ್ಥರು ಎಷ್ಟೇ ಪ್ರಭಾವಿಗಳಾಗಿದ್ದರು ಕಾನೂನಿನ ಮುಂದೆ ಎಲ್ಲರೂ ಒಂದೇ ಎಂಬ ನಿಟ್ಟಿನಲ್ಲಿ ಅವರಿಗೆ ಉಗ್ರ ಶಿಕ್ಷೆ ವಿಧಿಸಬೇಕು ಹಾಗೂ ನೊಂದ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಹಾಗೂ ಮಹಿಳೆಯರ ಹಾಗೂ ಹೆಣ್ಣು ಮಕ್ಕಳ ಸುರಕ್ಷತೆಗೆ ಸಮಾಜ ಮತ್ತು ಸರ್ಕಾರಗಳು ಇನ್ನಷ್ಟು ಕಠಿಣ ಹೆಜ್ಜೆಗಳನ್ನು ಇಡಬೇಕಾದ ಅನಿವಾರ್ಯತೆ ಇದೆ. ಈ ನಿಟ್ಟಿನಲ್ಲಿ ತಪ್ಪಿತಸ್ಥರನ್ನು ಕೂಡಲೇ ಬಂಧಿಸಿ ಉಗ್ರ ಶಿಕ್ಷೆ ನೀಡಿ ನೊಂದ ಕುಟುಂಬಕ್ಕೆ ನ್ಯಾಯ ಒದಗಿಸಿಕೊಡಬೇಕೆಂದು ತಹಸಿಲ್ದಾರ್ ಹುಣಸೂರು ರವರ ಮುಖಾಂತರ ಸರ್ಕಾರಕ್ಕೆ ದಸಂಸ ಒತ್ತಾಯಿಸಿ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಹದೇವಮ್ಮ ಮಹಿಳಾ ಒಕ್ಕೂಟದ ಜಿಲ್ಲಾ ಸಂಚಾಲಕಿ, ಅಂಬೇಡ್ಕರ್ ವಾದ, ಜಿಲ್ಲಾ ಸಂಘಟನಾ ಸಂಚಾಲಕರಾದ ಕೊಳಗಟ್ಟ ಕೃಷ್ಣ, ಅಹಿಂದ ಜಾಗೃತ ವೇದಿಕೆಯ ನಗರಾಧ್ಯಕ್ಷರಾದ ಸೋಮಣ್ಣ, ತಾಲೂಕು ಸಂಯೋಜಕರಾದ ವೇಣು, ಚಿಕ್ಕಹುಣಸೂರು ರಾಜು ಹಿರಿಯ ಹೋರಾಟಗಾರರು ಜೆ ಮಾದೇವ್, ಮಹಿಳಾ ಸಂಘಟನಾ ಸಂಚಾಲಕರಾದ ಗಿರಿಜಮ್ಮ, ವೀಣಾ, ಪ್ರಭಾವತಿ ಮತ್ತು ಇತರರು ಭಾಗವಹಿಸಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)